ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 6 ಮಂಗಳವಾರ 2023

ಸಂಪುಟ: 44 | ಸಂಚಿಕೆ: 51 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಒಂದು ಕಟ್ಟಡದಲ್ಲಿ ಎಷ್ಟೇ ಮೀಟರ್ ಇದ್ದರೂ

ಒಂದಕ್ಕೆ ಮಾತ್ರ ಗೃಹಜ್ಯೋತಿ

● ಸರ್ಕಾರದಿಂದ ಆದೇಶ ಜಾರಿ ● 12 ತಿಂಗಳು ಸರಾಸರಿ ಲೆಕ್ಕಹಾಕಿ ಅದಕ್ಕೆ ಹೆಚ್ಚುವರಿ ಶೇ.10 ಬಳಕೆಗೆ ಅವಕಾಶ ● ಗೃಹ ಬಳಕೆ ವಿದ್ಯುತ್ ಸಂಪರ್ಕಗಳಿಗೆ ಮಾತ್ರ ಇದು ಅನ್ವಯ, ವಾಣಿಜ್ಯ ಉದ್ದೇಶಕ್ಕೆ ಅವಕಾಶವಿಲ್ಲ

ಬೆಂಗಳೂರು, ಜೂ.5–ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿಗಳ ಪೈಕಿ ಒಂದಾಗಿರುವ ಪ್ರತಿ ಮನೆಗೂ 200 ಯುನಿಟ್ ವರೆಗೆ ಉಚಿತ ವಿದ್ಯುತ್ ಕಲ್ಪಿಸುವ 'ಗೃಹ ಜ್ಯೋತಿ' ಯೋಜನೆಯ ಜಾರಿಗೆ ಆದೇಶ ಹೊರಡಿಸಿದ್ದು, ಈ ಸಂಬಂಧ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಲಾಗಿದೆ.

ಈ ಯೋಜನೆಯ ಪ್ರಯೋಜನ ಪಡೆಯಲು ಹೊಸ ನಿಬಂಧನೆ ಹಾಕಿದ್ದು, ಯೋಜನೆಯ ಲಾಭ ಪಡೆಯಲು ಸೇವಾ ಸಿಂಧು ಮೂಲಕ ಅರ್ಜಿ ಸಲ್ಲಿಸಬೇಕಾಗಿದೆ. ಅಲ್ಲದೆ ಅನೇಕ ದಾಖಲೆಗಳನ್ನು ಒದಗಿಸಬೇಕಿದೆ.



ಗೃಹ ವಿದ್ಯುತ್ ಬಳಕೆದಾರರಲ್ಲಿ ಒಂದಕ್ಕಿಂತ ಹೆಚ್ಚಿನ ಮೀಟರ್ ಇದ್ದಲ್ಲಿ ಒಂದು ಮೀಟರ್‌ಗೆ ಮಾತ್ರ ಈ ಯೋಜನೆ ಅನ್ವಯವಾಗಲಿದೆ ಎಂಬ ಹೊಸ ನಿಯಮ ಹಲವರಿಗೆ ಶಾಕ್ ನೀಡಿದೆ. ಮುಖ್ಯವಾಗಿ ಬಾಡಿಗೆ ಮನೆಯಲ್ಲಿರುವವರು ಈ ಯೋಜನೆ ಪ್ರಯೋಜನ ಪಡೆಯುವುದು ಕಷ್ಟಸಾಧ್ಯವೆನಿಸಿದೆ.

ಕಟ್ಟಡದಲ್ಲಿ ಒಂದಕ್ಕಿಂತ ಹೆಚ್ಚು ಮನೆಗಳಿದ್ದು, ಪ್ರತ್ಯೇಕವಾಗಿ ಮೀಟರ್ ಸಂಪರ್ಕ ವಿದ್ದರೂ ಒಬ್ಬರು ಮಾತ್ರ ಪ್ರಯೋಜನ ಪಡೆಯಬಹುದು. ಆ ಕಟ್ಟಡದಲ್ಲಿ ಮನೆ ಮಾಲೀಕರು ವಾಸವಿದ್ದರೆ ಅವರೇ ಗೃಹ ಜ್ಯೋತಿ ಫಲಾನುಭವಿಯಾಗಬಹುದು. ಇಲ್ಲವಾದರೂ ಬಾಡಿಗೆದಾರರಲ್ಲಿ ಒಬ್ಬರು ಮಾತ್ರ ಅರ್ಜಿ ಸಲ್ಲಿಸಬಹುದು ಎನ್ನಲಾಗಿದೆ. ಹೀಗಾಗಿ ▶ 8ನೇ ಪುಟಕ್ಕೆ

ಅನುಕೂಲಸ್ಥರು ಗ್ಯಾರಂಟಿ ತ್ಯಜಿಸಿ

● ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಪ್ರಕೃತಿ, ಪರಿಸರ ಪಾಠ
● ಬಿಜೆಪಿಯವರ ಮಾತು ಕೇಳಬೇಡಿ; ಅವರದ್ದು ಜನವಿರೋಧಿ ಕರೆ



ಬೆಂಗಳೂರು, ಜೂ. 5(ಕೆಎಂಶಿ)– ಉಳ್ಳವರು ಗ್ಯಾರಂಟಿ ಯೋಜನೆಗಳನ್ನು ತ್ಯಜಿಸಿ ಬಡವರಿಗೆ ಅವಕಾಶ ಮಾಡಿಕೊಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದ್ದಾರೆ. ನೀರು, ಗಾಳಿ, ವಿದ್ಯುತ್ ಯಾವುದನ್ನು ದುಂದುವೆಚ್ಚ ಮಾಡಬಾರದು. ದುಂದುವೆಚ್ಚ ಎನ್ನುವುದು ಪ್ರಕೃತಿ ವಿರೋಧಿ, ಜನ ವಿರೋಧಿ ಮತ್ತು ಪರಿಸರ ವಿರೋಧಿಯಾಗಿರುತ್ತದೆ ಎಂದರು. ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಜನತೆಗೆ ನೀಡಿದ ಐದು ಗ್ಯಾರಂಟಿ ಭರವಸೆ ಗಳನ್ನು ನಾವು ಅಧಿಕಾರಕ್ಕೆ ಬಂದ ತಕ್ಷಣ ಜಾರಿಗೆ ತೀರ್ಮಾನ ಕೈಗೊಂಡಿದ್ದೇವೆ. ಪ್ರತಿ ಕುಟುಂಬಕ್ಕೂ 200 ಯುನಿಟ್‌ವರೆಗೆ ಉಚಿತ ವಿದ್ಯುತ್ ಭರವಸೆ ▶ 6ನೇ ಪುಟಕ್ಕೆ

ಜುಲೈ 7ರಂದು ಬಜೆಟ್ ಮಂಡನೆ

● ಗ್ಯಾರಂಟಿಗಳಿಗೆ 50 ಸಾವಿರ ಕೋಟಿ ಅಧಿಕ ಸಂಪನ್ಮೂಲ ಕ್ರೋಢೀಕರಣಕ್ಕೆ ಒತ್ತು ● ಜು.3ರಿಂದ ವಿಧಾನಮಂಡಲ ಅಧಿವೇಶನ

ಬೆಂಗಳೂರು, ಜೂ. 5(ಕೆಎಂಶಿ)– ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಜುಲೈ 7ರಂದು ಮುಂಗಡಪತ್ರ ಮಂಡಿಸಲಿದ್ದಾರೆ.

ಈ ಉದ್ದೇಶಕ್ಕಾಗಿ ಜುಲೈ ಮೂರರಂದು ವಿಧಾನಮಂಡಲದ ಉಭಯ ಸದನಗಳ ಅಧಿವೇಶನ ಕರೆಯಲಾಗಿದೆ. ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ನೀಡಿದ್ದ 5 ಗ್ಯಾರಂಟಿಗಳ ಅನುಷ್ಠಾನದ ಹೊಣೆ ಮುಖ್ಯಮಂತ್ರಿ ಅವರ ಹೆಗಲೇರಿದೆ. ಯೋಜನೆ ಅನುಷ್ಠಾನಕ್ಕೆ ಆದೇಶ ಹೊರಡಿಸಿರುವ ಮುಖ್ಯಮಂತ್ರಿ ಅವರು, ಇದಕ್ಕಾಗಿ ಅಗತ್ಯವಿರುವ ವಾರ್ಷಿಕ 50 ಸಾವಿರ ಕೋಟಿ ರೂ. ಸಂಪನ್ಮೂಲ ಕ್ರೋಢೀಕರಣಕ್ಕೆ ಒತ್ತು ನೀಡಬೇಕಾಗಿದೆ. ಈ ಕಾರಣಕ್ಕಾಗಿ ಮುಖ್ಯಮಂತ್ರಿ ಅವರು ಯೋಜನಾ ಗಾತ್ರವನ್ನು ಹೆಚ್ಚಿಸಿ, ಒಂದಷ್ಟು ಸಂಪನ್ಮೂಲ ಕ್ರೋಢೀಕರಣ ಮಾಡಲು ತೀರ್ಮಾನ ಕೈಗೊಂಡಿದ್ದಾರೆ. ಅಷ್ಟೇ ಅಲ್ಲದೆ, ಇಲಾಖೆಗಳಲ್ಲಿ ಆಂತರಿಕ ಬದಲಾವಣೆ ಮಾಡಿ. ಅನಗತ್ಯ ದುಂದು ವೆಚ್ಚಕ್ಕೆ ಕಡಿವಾಣ ಹಾಕಿ. ಎಲ್ಲಿ ಸಾಧ್ಯವಾಗುತ್ತದೋ ▶ 8ನೇ ಪುಟಕ್ಕೆ

ಸಾಮಾಜಿಕ ಜಾಲವೆಂಬ ಜಗಳ ತಾಣಗಳು... ■ ಪುಟ–4
ಮೈಸೂರಲ್ಲಿ ವಿವಿಧೆಡೆ ಪರಿಸರ ದಿನಾಚರಣೆ ■ ಒಳಪುಟ

ಮಹಿಳೆಯರ ಉಚಿತ ಪ್ರಯಾಣಕ್ಕೆ ಬರಲಿವೆ 'ಶಕ್ತಿ ಸ್ಮಾರ್ಟ್ ಕಾರ್ಡ್'

■ ಮೂರು ತಿಂಗಳಲ್ಲಿ ಕಾರ್ಡ್ ವಿತರಣೆ ■ ನಗರ, ಸಾಮಾನ್ಯ, ಎಕ್ಸ್‌ಪ್ರೆಸ್‌ಗಳಲ್ಲಿ ವಿದ್ಯಾರ್ಥಿನಿಯರು, ಮಹಿಳೆಯರು, ಲಿಂಗತ್ವ ಅಲ್ಪಸಂಖ್ಯಾತರಿಗೆ ಫ್ರೀ ಪ್ರಯಾಣ ■ ಸರ್ಕಾರದ ಆದೇಶ ಜಾರಿ



ಬೆಂಗಳೂರು, ಜೂ. 5– ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿನ ಬಸ್‌ಗಳಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಲು 'ಶಕ್ತಿ ಸ್ಮಾರ್ಟ್‌ಕಾರ್ಡ್' ವಿತರಿಸಲು ರಾಜ್ಯ ಸರ್ಕಾರ ನಿರ್ಧರಿಸಿದ್ದು ಈ ಸಂಬಂಧ ಆದೇಶ ಹೊರಡಿಸಿದೆ. ಉಚಿತ ಪ್ರಯಾಣದ ಪ್ರಯೋಜನ ಪಡೆಯಲಿಚ್ಛಿಸುವ ಮಹಿಳೆಯರಿಂದ ಸೇವಾ ಸಿಂಧು ಮೂಲಕ ಅರ್ಜಿ ಪಡೆದು 'ಶಕ್ತಿ ಸ್ಮಾರ್ಟ್‌ಕಾರ್ಡ್' ಗಳನ್ನು 3 ತಿಂಗಳೊಳಗಾಗಿ ವಿತರಿಸಲಾಗುವುದು. ಈ ಸ್ಮಾರ್ಟ್‌ಕಾರ್ಡ್ ವಿತರಿಸುವವರೆಗೆ ಭಾರತ ಸರ್ಕಾರ/ಕರ್ನಾಟಕ ಸರ್ಕಾರದ ಇಲಾಖೆ ಸರ್ಕಾರಿ ಸ್ವಾಮ್ಯದ ಕಚೇರಿಗಳಿಂದ ವಿತರಿಸುವ ಭಾವಚಿತ್ರ ಹಾಗೂ ವಾಸದ ವಿಳಾಸವಿರುವ ಗುರುತಿನ ಚೀಟಿಗಳನ್ನು ಪರಿಗಣಿಸತಕ್ಕದ್ದು ಎಂದು ಆದೇಶದಲ್ಲಿ ತಿಳಿಸಲಾಗಿದೆ. ಈ ಯೋಜನೆಯು ಜೂನ್ 11ರಿಂದ ಜಾರಿಗೆ ಬರಲಿದ್ದು, ▶ 8ನೇ ಪುಟಕ್ಕೆ

ಮೈಸೂರು–ಕುಶಾಲನಗರ ಹೆದ್ದಾರಿಗೆ ಒಂದೂವರೆ ತಿಂಗಳಲ್ಲಿ

ಭೂಸ್ವಾಧೀನ ಪ್ರಕ್ರಿಯೆ ಪೂರ್ಣ

ಸಂಸದ ಪ್ರತಾಪ್‌ಸಿಂಹ ವಿಶ್ವಾಸ



ಮೈಸೂರು, ಜೂ.5(ಆರ್‌ಕೆ)–ಮೈಸೂರು–ಕುಶಾಲನಗರ ನಡುವೆ 4 ಪಥದ ಎಕ್ಸ್‌ಪ್ರೆಸ್‌ವೇ ನಿರ್ಮಾಣ ಯೋಜನೆಗೆ ಒಂದೂವರೆ ತಿಂಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸುವುದಾಗಿ ಸಂಸದ ಪ್ರತಾಪ್‌ಸಿಂಹ ಅವರು ತಿಳಿಸಿದ್ದಾರೆ.

ಭೂಸ್ವಾಧೀನ ಪೂರ್ಣಗೊಳಿಸಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಭೂಮಿ ಹಸ್ತಾಂತರಿಸುವುದು ಹಾಗೂ ಕಾಮಗಾರಿ ಆರಂಭಿಸುವ ಕುರಿತಂತೆ ಬೆಂಗಳೂರಿನ ಎನ್‌ಹೆಚ್‌ಎಐ ಕಚೇರಿಯಲ್ಲಿ ಚೀಫ್ ಇಂಜಿನಿಯರ್ ವಿವೇಕ್ ಜೈಸ್ವಾಲ್ ರೊಂದಿಗೆ ಚರ್ಚಿಸಿದ ಪ್ರತಾಪ್‌ಸಿಂಹ 'ಮೈಸೂರು ಮಿತ್ರ' ನಿಗೆ ಈ ಸಂಬಂಧ ಮಾಹಿತಿ ನೀಡಿದರು. ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಮಾರ್ಕಿಂಗ್ ▶ 8ನೇ ಪುಟಕ್ಕೆ

ಮೈಸೂರು ಪಾಲಿಕೆ 9 ಕೋಟಿಯ ಉಳಿತಾಯ ಬಜೆಟ್



ಮೈಸೂರು, ಜೂ. 5(ಆರ್‌ಕೆ)– ಮೈಸೂರು ಮಹಾನಗರ ಪಾಲಿಕೆಯಲ್ಲಿ 2023–24ನೇ ಸಾಲಿಗೆ 9 ಕೋಟಿ ರೂ. ಉಳಿತಾಯ ಬಜೆಟ್ ಮಂಡನೆಯಾಗಿದೆ.

ಪಾಲಿಕೆ ಕಚೇರಿಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಸೋಮವಾರ ಮೇಯರ್ ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೆರಿಗೆ ನಿರ್ಧರಣಾ, ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ



ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷ ಆರ್. ನಾಗರಾಜ್, ಸೋಮವಾರ ಪಾಲಿಕೆಯ ಬಜೆಟ್ ಮಂಡಿಸಿದರು.

ಅಧ್ಯಕ್ಷ ಆರ್. ನಾಗರಾಜ್ ಪ್ರಸಕ್ತ ಸಾಲಿನ ಆಯ–ವ್ಯಯವನ್ನು ಮಂಡಿಸಿದರು.

ಆರಂಭಿಕ ಶಿಲ್ಕು 36,687.47 ಲಕ್ಷ ರೂ.ಗಳ ಜೊತೆಗೆ ಈ ವರ್ಷ ಬೇರೆ ಬೇರೆ ಮೂಲಗಳಿಂದ 69,114.17 ಲಕ್ಷ ರೂ. ಸೇರಿ ಒಟ್ಟು 1,05,801.64 ಲಕ್ಷ ರೂ. ಆದಾಯ ನಿರೀಕ್ಷಿಸಲಾಗಿದ್ದು, ಬೇರೆ ಬೇರೆ ಬಾಬ್ತುಗಳಿಗೆ 1,04,896.50 ಲಕ್ಷ ರೂ. ವೆಚ್ಚ ಮಾಡಲು ಮುಂದಾಗಿರುವುದರಿಂದ 2023–24ನೇ ಸಾಲಿಗೆ ಮೈಸೂರು ಮಹಾನಗರ ಪಾಲಿಕೆಯು 905.14 ಲಕ್ಷ ರೂ.ಗಳ ಉಳಿತಾಯ ಬಜೆಟ್ ಮಂಡಿಸಿದೆ.

2022–23ನೇ ಸಾಲಿನಲ್ಲಿ ಪಾಲಿಕೆಯು ನಿರ್ವಹಣಾ ಸಂಸ್ಥೆಯಾಗಿರುವುದರಿಂದ ಮೈಸೂರು ನಗರದ ನಾಗರಿಕರಿಗೆ ಮೂಲ ಸೌಕರ್ಯಗಳನ್ನು ಒದಗಿಸಲು ಹಣಕಾಸಿನ ಸಮರ್ಥ ನಿರ್ವಹಣೆ ಪಾತ್ರ ಮಹತ್ವದ್ದಾಗಿದೆ. 2022–23ನೇ ಸಾಲಿನಲ್ಲಿ ಆಸ್ತಿ ತೆರಿಗೆ, ಖಾತಾ ವರ್ಗಾವಣೆ ಶುಲ್ಕ, ಖಾತಾ ಪ್ರತಿಗಳ ಶುಲ್ಕ, ಜಾಹೀರಾತು ಶುಲ್ಕ ಸೇರಿದಂತೆ ಒಟ್ಟು 16,820 ಲಕ್ಷ ರೂ. ನಿರೀಕ್ಷಿಸಲಾಗಿತ್ತು. ಆ ಪೈಕಿ 17,784.29 ಲಕ್ಷ ರೂ. ಕಂದಾಯ ವಸೂಲಿ ಮಾಡಲಾಗಿದೆ. 2023–24ನೇ ಸಾಲಿಗೆ ಈ ಬಾಬ್ತುಗಳಿಂದ 17,175 ಲಕ್ಷ ರೂ. ಜಮೆಯಾಗುವ ನಿರೀಕ್ಷೆ ಇದೆ ಎಂಬುದನ್ನು ಬಜೆಟ್‌ನಲ್ಲಿ ನಮೂದಿಸಲಾಗಿದೆ. ನೀರಿನ ತೆರಿಗೆ ಮತ್ತು ಒಳಚರಂಡಿ ನಿರ್ವಹಣೆಯಿಂದ 6,295 ಲಕ್ಷ ರೂ., ನಗರ ಯೋಜನೆ ಶಾಖೆಯಿಂದ ಕಟ್ಟಡ ಪರವಾನಗಿ ಶುಲ್ಕ, ನೆಲ ಬಾಡಿಗೆ, ರಸ್ತೆ ಅಗೆತ, ಪರಿಶೋಧನಾ ಶುಲ್ಕ, ಸಿಆರ್, ದಂಡ, ಒಳಚರಂಡಿ ಶುಲ್ಕದ ಬಾಬ್ತಿನಡಿ ಒಟ್ಟು 1,201 ಲಕ್ಷ ರೂ.ಗಳನ್ನು ನಿರೀಕ್ಷಿಸಲಾಗಿದೆ. ಉದ್ದಿಮೆ ರಹದಾರಿ ಶುಲ್ಕದಿಂದ 1,000 ಲಕ್ಷ ರೂ., ನಗರ ಪಾಲಿಕೆಗೆ ಸೇರಿದ ವಾಣಿಜ್ಯ ಸಂಕೀರ್ಣಗಳು, ಮಾರುಕಟ್ಟೆಗಳು ಹಾಗೂ ಗರುಡ ಮಾಲ್ ಬಾಡಿಗೆಯಿಂದ 299.56 ಲಕ್ಷ ರೂ. ಆದಾಯ ನಿರೀಕ್ಷಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ 2,495 ಲಕ್ಷ ರೂ. ರಾಜ್ಯ ಸರ್ಕಾರದ ಮುಕ್ತ ನಿಧಿ ಅನುದಾನ, ಬೀದಿ ದೀಪ, ನೀರು ಸರಬರಾಜು ▶ 6ನೇ ಪುಟಕ್ಕೆ

ವೆಚ್ಚಗಳು

ನಗರ ಬೆಳೆಯುತ್ತಿದ್ದಂತೆಯೇ ಜನಸಂಖ್ಯೆಯೂ ಹೆಚ್ಚಾಗುತ್ತಿದ್ದು, ವೇಗವಾಗಿ ಅಭಿವೃದ್ಧಿಯಾಗುತ್ತಿರುವ ಕಾರಣ, ನಾಗರಿಕರಿಗೆ ಮೂಲ ಸೌಕರ್ಯ ಒದಗಿಸಲು ಕ್ರೋಢೀಕರಣವಾಗುವ ನೀರು ಪೂರೈಕೆ, ರಸ್ತೆ ಚರಂಡಿ ಅಭಿವೃದ್ಧಿ, ಬೀದಿ ದೀಪ, ಪಾರ್ಕ್, ಸ್ಮಶಾನ ನಿರ್ವಹಣೆ, ಸ್ವಚ್ಛತೆ, ಕೆರೆ, ಕ್ರೀಡಾಂಗಣ ಅಭಿವೃದ್ಧಿ ಸೇರಿದಂತೆ ವಿವಿಧ ಬಾಬ್ತುಗಳಿಗೆ ಈ ವರ್ಷ ಒಟ್ಟು 1,04,896.50 ಲಕ್ಷ ರೂ. ಖರ್ಚು ಮಾಡಲು ನಿರ್ಧರಿಸಲಾಗಿದೆ.

ಸಮರ್ಪಕ ರೀತಿ ತ್ಯಾಜ್ಯ ನಿರ್ವಹಣೆಗೆ ಪರಿಣಾಮಕಾರಿ ವ್ಯವಸ್ಥೆ ಜಾರಿ

ಮೈಸೂರು, ಜೂ. 5(ಆರ್‌ಕೆ)–ತ್ಯಾಜ್ಯ ಮುಕ್ತ ನಗರವೆಂದು ಕೇಂದ್ರ ಸರ್ಕಾರ ಪುರಸ್ಕರಿಸಿರುವ ಮೈಸೂರಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ ಮೈಸೂರು ಮಹಾನಗರ ಪಾಲಿಕೆಯು ಸಂಯೋಜಿತ ಅಧಿಕಾರಯುತ ಹಾಗೂ ನಿಯಂತ್ರಣಾ ಕೇಂದ್ರ (ಇಂಟಿಗ್ರೇಟೆಡ್ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್–ಐಸಿಸಿಸಿ) ಸ್ಥಾಪಿಸಲು ನಿರ್ಧರಿಸಿದೆ. ಪಾಲಿಕೆ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷ ಆರ್. ನಾಗರಾಜು ಮಂಡಿಸಿದ ಪ್ರಸಕ್ತ ಸಾಲಿನ ಆಯ–ವ್ಯಯದಲ್ಲಿ ಒಂದೇ ಸೂರಿನಡಿ ಘನತ್ಯಾಜ್ಯ ನಿರ್ವಹಣೆಗೆ ಅನುಕೂಲವಾಗುವಂತೆ ಮೈಸೂರು ಮಹಾನಗರ ಪಾಲಿಕೆಯಲ್ಲಿ ಐಸಿಸಿಸಿ ಸ್ಥಾಪಿಸುವ ಯೋಜನೆಯನ್ನು ಪ್ರಕಟಿಸಿದ್ದಾರೆ.

ಮೈಸೂರು ನಗರದ ಅಭಿವೃದ್ಧಿ, ಸೌಂದರ್ಯೀಕರಣಕ್ಕೆ ಹಲವು ಯೋಜನೆ ಘೋಷಣೆ

ಒಣ ತ್ಯಾಜ್ಯ ಸಂಸ್ಕರಣೆ: ನಿತ್ಯ ಮೈಸೂರು ನಗರದಲ್ಲಿ ಉತ್ಪತ್ತಿಯಾಗುತ್ತಿರುವ 600 ಟನ್ ತ್ಯಾಜ್ಯದ ಪೈಕಿ 240 ಟನ್‌ನಷ್ಟು ಒಣತ್ಯಾಜ್ಯ ಸಂಗ್ರಹವಾಗುತ್ತಿದ್ದು, ರಾಯನಕೆರೆ ಘಟಕದಲ್ಲಿ 40 ಟನ್, ಕೆಸರೆಯ ಘಟಕದಲ್ಲಿ 100 ಟನ್ ಮತ್ತು ವಿದ್ಯಾರಣ್ಯಪುರಂನಲ್ಲಿ 100 ಟನ್ ಒಣತ್ಯಾಜ್ಯ ಸಂಸ್ಕರಿಸಲು ಪ್ರತ್ಯೇಕ ಒಣ ತ್ಯಾಜ್ಯ ಸಂಸ್ಕರಣಾ ಘಟಕ ನಿರ್ಮಿಸಲು ಉದ್ದೇಶಿಸಲಾಗಿದೆ. ಕೆಸರೆಯಲ್ಲಿರುವ ಪ್ರಾಣಿವಧಾ ಗೃಹ (Slaughter House)ವನ್ನು 5 ಕೋಟಿ ರೂ. ವೆಚ್ಚದಲ್ಲಿ ಅತ್ಯಾಧುನಿಕ ಮಾದರಿಯಲ್ಲಿ ನಿರ್ಮಿಸಲು ಬಜೆಟ್‌ನಲ್ಲಿ ಅನುದಾನ ಮೀಸಲಿರಿಸಲಾಗಿದೆ.

ಇ–ಆಸ್ತಿ ತಂತ್ರಾಂಶ: ಪಾಲಿಕೆ ವ್ಯಾಪ್ತಿಯ ಎಲ್ಲಾ ಆಸ್ತಿಗಳ ದತ್ತಾಂಶ ಮಾಹಿತಿಗಳನ್ನು ▶ 6ನೇ ಪುಟಕ್ಕೆ

Promotional Feature



ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಮೈಸೂರು (ನಗರ) ಜಿಲ್ಲಾ ಕಾಂಗ್ರೆಸ್ ಸಮಿತಿ INBCWF ಈ ವಿಭಾಗದಿಂದ ಹಸಿರೋತ್ಸವ ಎಂಬ ಕಾರ್ಯಕ್ರಮವನ್ನು ಸಸಿಗಳನ್ನು ನೆಡುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಚಾಮರಾಜ ಕ್ಷೇತ್ರದ ಶಾಸಕರಾದ ಕೆ.ಹರೀಶ್‌ಗೌಡರು, ಶ್ರೀ ದಿವ್ಯಸಾನಿಧ್ಯ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮಿಗಳು (ಬೇಬಿ ಮಠ), ವಿಧಾನ ಪರಿಷತ್ ಸದಸರಾದ ಡಾ|| ಡಿ. ತಿಮ್ಮಯ್ಯ, ಕೆ.ಪಿ.ಸಿ.ಸಿ. ಕಾರ್ಯದರ್ಶಿಗಳಾದ ಸಿ. ನರೇಂದ್ರ, , KPCC, INBC WF ವಿಭಾಗದ ರಾಜ್ಯ ಉಪಾಧ್ಯಕ್ಷರಾದ ಚೇತನ್‌ರಾಜ್.ಎನ್, ಕೆ.ಪಿ.ಸಿ.ಸಿ. ರಾಜ್ಯ ಉಪಾಧ್ಯಕ್ಷರಾದ ನಾಗರಾಜು, ಜಿಲ್ಲಾಧ್ಯಕ್ಷರಾದ ಪ್ರಮೋದ್ ಕುಮಾರ್ ಎನ್.ಎಂ., ಮುಂತಾದ ಪದಾಧಿಕಾರಿಗಳು ಹಾಗೂ ಶಾಲೆಯ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಒಡಿಶಾ ರೈಲು ಅಪಘಾತ

ಪಶ್ಚಿಮ ಬಂಗಾಳ ಸರ್ಕಾರದಿಂದ ಮೃತರ ಸಂಬಂಧಿಕರಿಗೆ ನೌಕರಿ

ಕೋಲ್ಕತಾ: ಕಳೆದ ಶುಕ್ರವಾರ ಒಡಿಶಾದ ಬಾಲಸೋರ್‌ನಲ್ಲಿ ಸಂಭವಿಸಿದ ತ್ರಿವಳಿ ಭೀಕರ ರೈಲು ಅಪಘಾತದಲ್ಲಿ ಪ್ರಾಣ ಕಳೆದುಕೊಂಡವರ ಸಂಬಂಧಿಕರಿಗೆ ಸರ್ಕಾರಿ ನೌಕರಿ ನೀಡುವುದಾಗಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೋಮವಾರ ಘೋಷಿಸಿದ್ದಾರೆ. ಭೀಕರ ಅಪಘಾತದಲ್ಲಿ ಕೈಕಾಲು ಕಳೆದುಕೊಂಡವರ ಸಂಬಂಧಿಕರಿಗೂ ಸರ್ಕಾರಿ ಉದ್ಯೋಗ ನೀಡಲಾಗುವುದು ಎಂದು ಪಶ್ಚಿಮ ಬಂಗಾಳ ಸಿಎಂ ಹೇಳಿದ್ದಾರೆ.

ಕೋರಮಂಡಲ್ ಎಕ್ಸ್‌ಪ್ರೆಸ್‌ನಲ್ಲಿದ್ದ ಮತ್ತು ಪ್ರಸ್ತುತ ಮಾನಸಿಕ ಮತ್ತು ದೈಹಿಕ ಆಘಾತದಿಂದ ಬಳಲುತ್ತಿರುವವರಿಗೆ ಸಹಾಯ ಮಾಡುವುದಾಗಿ ತಿಳಿಸಿದ್ದಾರೆ.

ಅಭಿಷೇಕ್ ಅಂಬರೀಶ್–ಅವಿವಾ ಬಿದ್ದಪ್ಪ ವಿವಾಹ ಮಹೋತ್ಸವ



ದಿವಂಗತ ಅಂಬರೀಶ್ ಹಾಗೂ ಸಂಸದೆ ಸುಮಲತಾ ಅವರ ಸುಪುತ್ರ ಅಭಿಷೇಕ್ ಮತ್ತು ಸೆಲೆಬ್ರಿಟಿ ಫ್ಯಾಷನ್ ಡಿಸೈನರ್ ಪ್ರಸಾದ್ ಬಿದ್ದಪ್ಪ ಪುತ್ರಿ ಅವಿವಾ ಬಿದ್ದಪ್ಪ ವಿವಾಹ ಬೆಂಗಳೂರಿನಲ್ಲಿ ನೆರವೇರಿತು. ಮಾಜಿ ಉಪರಾಷ್ಟ್ರಪತಿ ಎಂ.ವೆಂಕಯ್ಯನಾಯ್ಡು, ಹಿರಿಯ ನಟ ರಜನಿಕಾಂತ್, ಗಣ್ಯಾತಿಗಣ್ಯರು ವಧು–ವರರಿಗೆ ಶುಭ ಕೋರಿದರು.

ಸಕಲ ಜೀವ ವೈವಿಧ್ಯ ಕಾಪಾಡುವವರು ನಿಜವಾದ ಪರಿಸರವಾದಿಗಳು

ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಚಲನಚಿತ್ರ ನಿರ್ದೇಶಕ ಸುರೇಶ್ ಹೆಬ್ಳಿಕರ್ ಅಭಿಮತ

ಮೈಸೂರು,ಜೂ.5(ಎಂಟಿವೈ)– ಕೇವಲ ಗಿಡ ನೆಟ್ಟರೆ ಪರಿಸರವಾದಿಗಳಾಗಲು ಸಾಧ್ಯವಿಲ್ಲ. ಪರಿಸರದಲ್ಲಿರುವ ಮಣ್ಣು, ಗುಬ್ಬಚ್ಚಿ, ಪಾತರಗಿತ್ತಿ ಸೇರಿದಂತೆ ಸಕಲ ಜೀವ ವೈವಿಧ್ಯವನ್ನು ಕಾಪಾಡಲು ಶ್ರಮಿಸುವವರು ನಿಜವಾದ ಪರಿಸರವಾದಿಗಳು ಎಂದು ಎಕೋ–ವಾಚ್ ಸಂಸ್ಥೆಯ ಸಂಸ್ಥಾಪಕರೂ ಹಾಗೂ ಚಲನಚಿತ್ರ ನಿರ್ದೇಶಕ ಸುರೇಶ್ ಹೆಬ್ಳಿಕರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸಿಎಫ್‌ಟಿಆರ್‌ಐ ಸಂಸ್ಥೆ ಸಭಾಂಗಣದಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವೇಗವಾಗಿ ಬೆಳೆಯುತ್ತಿರುವ ನಗರ ಹಾಗೂ ಜನಸಂಖ್ಯೆ ಹೆಚ್ಚಳಕ್ಕೆ ಅನುಗುಣವಾಗಿ ಪರಿಸರದಲ್ಲಿ ಬದಲಾವಣೆಯಾಗುತ್ತಿದೆ. ಈ ಹಿಂದೆ ಕಾಣಬಹುದಾಗಿದ್ದ ಪರಿಸರ, ಹಸಿರು ವಲಯ, ಅರಣ್ಯ ಈಗ ಕಾಣದಂತಾಗಿದೆ. 15–20 ವರ್ಷ ಹಿಂದೆ ಬೆಂಗಳೂರಿನ ಬಗ್ಗೆ ಬರೆದ ಬರವಣಿಗೆಯಲ್ಲಿ ನಮೂದಿಸಲಾದ ಅಂಶಗಳು, ಈಗ ಕಾಣಲು ಸಾಧ್ಯವಿಲ್ಲ. ಸಾಕಷ್ಟು ಬದಲಾವಣೆಯಾಗಿದೆ. ವಾಣಿಜ್ಯ ಚಟುವಟಿಕೆಗಳು ಹೆಚ್ಚಾಗುತ್ತಲೇ ಇವೆ. ದೇಶಕ್ಕೆ ಸ್ವಾತಂತ್ರ್ಯ ಬಂದ ಬಳಿಕ ಕೈಗಾರಿಕೆಗಳು ಬೆಳವಣಿಗೆ ಕಂಡಿವೆ ಎಂದರು.

ಆಗ ಅರಣ್ಯ ಪ್ರದೇಶವೂ ಸಂಪದ್ಭರಿತವಾಗಿ ಚೆನ್ನಾಗಿತ್ತು. ಹಿಂದೆ ನಾವೆಲ್ಲ ಧಾರವಾಡ ವಿವಿ ಆವರಣದಲ್ಲಿ ನಡಿಗೆ, ಸೈಕಲ್‌ನಲ್ಲೇ ಹೋಗುತ್ತಿದ್ದೆವು. ಆದರೆ ಈಗ ಪರಿಸ್ಥಿತಿ ಹೇಗಿದೆ? ಎಂದು ಅರ್ಥ ಮಾಡಿಕೊಂಡರೆ, ಪರಿಸರದ ಮೇಲಿನ ಒತ್ತಡ ಎಷ್ಟಿದೆ ಎಂದು ತಿಳಿಯುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಳೆದ ಕೆಲವು ವರ್ಷಗಳಿಂದೀಚೆಗೆ ಮಕ್ಕಳು 14–15 ವರ್ಷ ಆಗುತ್ತಿದ್ದಂತೆಯೇ ಬೈಕ್, ಸ್ಕೂಟರ್ ಬೇಕೆನ್ನುತ್ತಾರೆ. ಒತ್ತಡ ಇದೆ ಎಂಬ ಕಾರಣಕ್ಕಾಗಿ ಪೋಷಕರು ದ್ವಿಚಕ್ರ ವಾಹನ ಕೊಡಿಸಲು ಮುಂದಾಗುತ್ತಿದ್ದಾರೆ. ಹೆಚ್ಚುತ್ತಿರುವ ವಾಹನಗಳಿಂದ ಪರಿಸರದ ಮೇಲೆ ಪರಿಣಾಮವಾಗುತ್ತಿದೆ. ಇದರ ಪರಿಣಾಮವಾಗಿಯೇ ಈ ಮೊದಲು ಇದ್ದಂತಹ ಪರಿಸ್ಥಿತಿ, ಈಗ ಇಲ್ಲವಾಗಿದೆ. ಅಂತರ್ಜಲ, ನೀರಿನ ಸೆಲೆ ಕಡಿಮೆಯಾಗುತ್ತಿದೆ ಎಂದು ವಿಷಾದಿಸಿದರು.

ಈ ಹಿಂದೆ ವಿಶ್ವಸಂಸ್ಥೆಯೂ ಪರಿಸರ ಸಂರಕ್ಷಣೆಗೆ ಹೆಚ್ಚಿನ ಗಮನ ನೀಡುತ್ತಿರಲಿಲ್ಲ. ಪರಿಸರ ಎಂದರೆ ವನ್ಯಜೀವಿ, ಕಾಡು ರಕ್ಷಣೆ ಎನ್ನುವಂತಹ ಪರಿಸ್ಥಿತಿ ಇತ್ತು. ಈಗ ಕೆಲ ವರ್ಷದಿಂದ ಗಿಡ ನೆಟ್ಟವರು ಪರಿಸರವಾದಿ ಎನಿಸಿಕೊಳ್ಳುತ್ತಾರೆ. ಆದರೆ ಸಕಲ ಜೀವರಾಶಿಯ ಸಂರಕ್ಷಣೆಯೂ ಪರಿಸರ ಸಂರಕ್ಷಣೆಯೇ ಆಗಿದೆ ಎಂದರು.

ಬೆಂಗಳೂರಿನ ಬೆಳ್ಳಂದೂರು ಕೆರೆ ಹೇಗಿತ್ತು, ಈಗ ಹೇಗಾಗಿದೆ ನೋಡಿ. ಆ ಕೆರೆಗೆ ಕಾರ್ಖಾನೆ ತ್ಯಾಜ್ಯ ಬಿಡಬಾರದು ಎಂದು ಸೂಚನೆ ನೀಡಲಾಗಿದೆ. ಆದರೆ ಕಾರ್ಖಾನೆಗಳ ಆಡಳಿತ ಮಂಡಳಿ ಕಾರ್ಖಾನೆ ತ್ಯಾಜ್ಯ ವಿಲೇವಾರಿಗೆ ಹಣ ವೆಚ್ಚ ಮಾಡುತ್ತಿಲ್ಲ. ಇದರಿಂದ ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಈ ಹಿನ್ನೆಲೆಯಲ್ಲಿ ಪರಿಸರದ ಮೇಲಾಗುತ್ತಿರುವ ಹಾನಿ ಕುರಿತಂತೆ ವಿಜ್ಞಾನಿಗಳು, ಪರಿಸರ ತಜ್ಞರು ಚಿಂತನೆ ನಡೆಸಿದಾಗ ಮೂರು ಪ್ರಮುಖ ಕಾರಣಗಳು ಬೆಳಕಿಗೆ ಬಂದಿವೆ. ಮಾಲಿನ್ಯ, ಜನಸಂಖ್ಯೆ ಹೆಚ್ಚಳ, ಅತಿ ಶೀಘ್ರವಾಗಿ ಹಣಗಳಿಕೆ ಮಾಡಬೇಕೆಂಬ ಹಂಬಲ ಪರಿಸರದ ಮೇಲೆ ದೌರ್ಜನ್ಯಕ್ಕೆ ಕಾರಣ ಎಂದರು.

ಜಾಗತೀಕರಣಕ್ಕೂ ಮೊದಲು ಭಾರತ ಚೆನ್ನಾಗಿತ್ತು. ಪರಿಸ್ಥಿತಿ ವಿಭಿನ್ನವಾಗಿತ್ತು. ಆದರೆ ಈಗ ಭಾರತ ಬದಲಾಗಿದೆ. ಅಧಿಕಾರಿ ವರ್ಗ ಸ್ಮಾರ್ಟ್ ಸಿಟಿ, ಮೆಟ್ರೋ ಬೇಕೆನ್ನುತ್ತಾರೆ. ಕಾಂಕ್ರಿಟೀಕರಣ ಹೆಚ್ಚಾಗಿದೆ. ಈ ಹಿಂದಿನ ರೀತಿ ಕಬ್ಬನ್ ಪಾರ್ಕ್ ಇಲ್ಲ. ಪಾರ್ಕ್ ಸೃಷ್ಟಿಸಿದ ಕಬ್ಬನ್ ತಮ್ಮ ಸಂಬಂಧಿಕರು, ಅತಿಥಿಗಳಿಗಾಗಿಯೂ ಕೊಠಡಿ ನಿರ್ಮಿಸಲಿಲ್ಲ. ಆದರೆ ಈಗ ಅಲ್ಲಿ ಹಲವಾರು ಕಟ್ಟಡಗಳು ಬಂದಿವೆ. ಇವುಗಳ ಅಗತ್ಯವಿದ್ದರೆ ಎಲ್ಲಿ ನಿರ್ಮಿಸಬೇಕು ಎಂಬ ಚಿಂತನೆ ಇರಬೇಕು. ಪರಿಸರವನ್ನು ಬಲಿಗೊಟ್ಟು ನಿರ್ಮಿಸಬೇಕಾದ ಅಗತ್ಯವಿಲ್ಲ. ಈ ರೀತಿ ಪರಿಸರಕ್ಕೆ ಹಾನಿಯುಂಟಾಗುತ್ತಿದೆ ಎಂದರು.

ಸಿಎಫ್‌ಟಿಆರ್‌ಐ ನಿರ್ದೇಶಕಿ ಶ್ರೀದೇವಿ ಅನ್ನಪೂರ್ಣ ಸಿಂಗ್ ಮಾತನಾಡಿ, ವಾತಾವರಣದಲ್ಲಿ ಕೇವಲ ಶೇ.1.5 ಡಿಗ್ರಿ ಉಷ್ಣಾಂಶ ಏರಿಕೆಯಾದರೂ ಪರಿಸರದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಅಂತಹ ಸಂದರ್ಭ ಈಗ ಬಂದಿದೆ. ಇದಕ್ಕೆ ನಾವೇ ಕಾರಣರಾಗುತ್ತಿದ್ದೇವೆ. ಈ ನಿಟ್ಟಿನಲ್ಲಿ ನಾವು ಏನು ಮಾಡಬಹುದೆಂಬ ಬಗ್ಗೆ ಗಂಭೀರವಾಗಿ ಚಿಂತಿಸಬೇಕಾದ ಅಗತ್ಯವಿದೆ ಎಂದರು.

ನಮ್ಮ ಬಾಲ್ಯದಲ್ಲಿ ಐದು ಕೆಜಿ ಸಕ್ಕರೆಗಾಗಿ ನಾವು ಪಡಿತರ ಅಂಗಡಿಗಳ ಎದುರು ಚೀಲ ಹಿಡಿದು ಸಂತಸದಿಂದ ಸಾಲಿನಲ್ಲಿ ನಿಲ್ಲುತ್ತಿದ್ದೆವು. ಆದರೀಗ ಈ ಪರಿಸ್ಥಿತಿಯಿಲ್ಲ. ಪ್ಲಾಸ್ಟಿಕ್ ಪೊಟ್ಟಣಗಳಲ್ಲಿರುವುದನ್ನು ಖರೀದಿಸುವುದು ನಡೆದಿದೆ. ಇದರೊಡನೆ ನೀರಿನ ಬಾಟಲಿ, ಅದರ ಲೇಬಲ್ ಎಲ್ಲವೂ ಪ್ಲಾಸ್ಟಿಕ್‌ನದೇ ಆಗಿದೆ. ಅಮೆರಿಕದಲ್ಲಿ ಸುಮಾರು 107 ಶತಕೋಟಿ ಬಾಟಲಿ ಮಾರಾಟ ಆಗಿರುವುದು ಆತಂಕಕ್ಕೆ ಕಾರಣವಾಗಿದೆ ಎಂದರು.

ನಮ್ಮ ದೇಶದಲ್ಲಿಯೂ ಪರಿಸ್ಥಿತಿ ಇದಕ್ಕಿಂತ ಭಿನ್ನವಾದುದೇನಲ್ಲ. ಇಂದು ಬೆಳೆ ಬೆಳೆಯುವ ಯಾವುದೇ ಜಮೀನನ್ನು ಪ್ಲಾಸ್ಟಿಕ್ ಪ್ರವೇಶಿಸಿಲ್ಲ ಎನ್ನಲಾಗದು. ಇದರಿಂದ ಆಹಾರಗಳ ಗುಣಮಟ್ಟ ಕಡಿಮೆ ಆಗುತ್ತಿದೆ. ಜೊತೆಗೆ ಹವಾಮಾನ ಬದಲಾವಣೆಯ ಮೇಲೂ ಪರಿಣಾಮ ಬೀರಿದೆ. ಇದನ್ನು ತಪ್ಪಿಸಲು ನಾವು ಯತ್ನಿಸಬೇಕು. ಸಿಎಫ್‌ಟಿಆರ್‌ಐನಲ್ಲಿ ಹಸಿರುಯುಕ್ತ ಪರಿಸರವಿದೆ. ಇದು ಸುಂದರವೂ ಆಗಿದೆ. ಇಲ್ಲಿನ ವಾತಾವರಣ ಹಾಗೂ ಹೊರಗಿನ ವಾತಾವರಣದ ನಡುವೆ ಉಷ್ಣಾಂಶದಲ್ಲಿ ದೊಡ್ಡ ವ್ಯತ್ಯಾಸವಿದೆ. ಇದು ಸಂತಸ ತರುತ್ತದೆ ಎಂದರು.



> “ಪರಿಸರ ಮಾಲಿನ್ಯಕ್ಕೆ ಹೆಚ್ಚಾಗಿ ಪ್ಲಾಸ್ಟಿಕ್ ಬಳಸುತ್ತಿರುವುದೇ ಕಾರಣವಾಗಿದೆ. ನಾವು ಪ್ರತಿ ವರ್ಷ ಸುಮಾರು 400 ದಶಲಕ್ಷ ಪ್ಲಾಸ್ಟಿಕ್ ಉತ್ಪಾದಿಸುತ್ತಿದ್ದು, ಇವುಗಳಲ್ಲಿ ಸುಮಾರು ಅರ್ಧದಷ್ಟು ಏಕಬಳಕೆ ಪ್ಲಾಸ್ಟಿಕ್ ಆಗಿದೆ. ಕೇವಲ ಶೇ.10ರಷ್ಟು ಮರು ಬಳಕೆ ಯಾಗಿದೆ. ದೊಡ್ಡ ಪ್ರಮಾಣದಲ್ಲಿ ಪ್ಲಾಸ್ಟಿಕ್ ನಮ್ಮ ಆಹಾರ, ಸಮುದ್ರ ಸೇರುತ್ತಿದೆ. ಓರ್ವ ವ್ಯಕ್ತಿ ಜೀವಿತಾವಧಿಯಲ್ಲಿ ಸುಮಾರು 20 ಕೆ.ಜಿ ಪ್ಲಾಸ್ಟಿಕ್ ತಿಂದಿರುತ್ತಾನೆ ಆಹಾರ ಪ್ಯಾಕೇಜಿಂಗ್ ಉದ್ಯಮವೂ ಪ್ಲಾಸ್ಟಿಕ್ ಬಳಕೆಗೆ ಬಹುದೊಡ್ಡ ಕಾರಣವಾಗಿದೆ. ಇದರಿಂದಾಗಿ ಹಾರ್ಮೋನುಗಳಲ್ಲಿ ವ್ಯತ್ಯಾಸವಾಗಿ ಕ್ಯಾನ್ಸರ್ ಸೇರಿದಂತೆ ಇನ್ನಿತರ ಆರೋಗ್ಯ ಸಮಸ್ಯೆಗಳುಂಟಾಗುತ್ತಿವೆ. –ಸುರೇಶ್ ಹೆಬ್ಳಿಕರ್

ಮೈಸೂರಲ್ಲಿ ಪರಿಸರ ಜಾಗೃತಿ ಜಾಥಾ



ಸುವರ್ಣ ಬೆಳಕು ಫೌಂಡೇಶನ್ ಹಾಗೂ ಹೆಚ್.ಸಿ. ಮಹದೇವಪ್ಪ ಅಭಿಮಾನಿಗಳ ಬಳಗ ವತಿಯಿಂದ ಗಾಂಧಿ ಪ್ರತಿಮೆ ಎದುರಿನ ಪಾರ್ಕ್ ಬಳಿ ಗಿಡ ನೆಡಲಾಯಿತು.

ಮೈಸೂರು, ಜೂ.5(ಎಂಕೆ)– ಪರಿಸರ ದಿನಾಚರಣೆ ಅಂಗವಾಗಿ ಸುವರ್ಣ ಬೆಳಕು ಫೌಂಡೇಶನ್ ಹಾಗೂ ಹೆಚ್.ಸಿ.ಮಹದೇವಪ್ಪ ಅಭಿಮಾನಿಗಳ ಬಳಗ ವತಿಯಿಂದ ‘ಪರಿಸರ ಜಾಗೃತಿ ಜಾಥಾ’ ನಡೆಸಲಾಯಿತು.

ಪರಿಸರ ಜಾಗೃತಿ ಮೂಡಿಸುವ ಫ್ಲೆಕ್ಸ್ ಹಿಡಿದ ಕ್ರೀಡಾಪಟುಗಳು, ಮಕ್ಕಳು, ವಿದ್ಯಾರ್ಥಿಗಳು, ಓವೆಲ್ ಮೈದಾನದಿಂದ ರಸ್ತೆ ಮಾರ್ಗವಾಗಿ ನ್ಯಾಯಾಲಯದವರೆಗೆ ಜಾಥಾ ನಡೆಸಿ, ಗಾಂಧಿ ಪ್ರತಿಮೆ ಎದುರಿನ ಪಾರ್ಕ್ ಬಳಿ ಗಿಡ ನೆಡುವ ಮೂಲಕ ಜಾಗೃತಿ ಮೂಡಿಸಿದರು.

ಈ ವೇಳೆ ಮಾತನಾಡಿದ ಹೆಚ್.ಸಿ. ಮಹದೇವಪ್ಪ ಅಭಿಮಾನಿಗಳ ಬಳಗದ ಅಧ್ಯಕ್ಷ ನಾಗರಾಜ್ ತಲಕಾಡು, ಕುಟುಂಬದ ಪ್ರತಿಯೊಬ್ಬರ ಹೆಸರಲ್ಲಿ ಮರ ಇರಬೇಕು. ತಲೆಗೊಂದು ಮರ ಎಂಬ ಕಾನೂನು ಬೇಕು. ರೇಷನ್ ಕಾರ್ಡ್, ಆಧಾರ್ ಕಾರ್ಡ್, ಪಾನ್ ಕಾರ್ಡ್ ಇದ್ದಂತೆ ಗ್ರೀನ್ ಕಾರ್ಡ್ ಎಂಬ ಐಡಿಯನ್ನು ಕೂಡ ಅರಣ್ಯ ಇಲಾಖೆ ಕಡ್ಡಾಯ ಮಾಡಿದರಷ್ಟೇ ಮಾತ್ರ ಪರಿಸರ ಉಳಿಯಲು ಸಾಧ್ಯ. ಕಾಡು ನಾಡಾದಂತೆ, ನಾಡು ಕಾಡಾಗಬೇಕು. ಸಾವಿರಾರು ವರ್ಷಗಳಿಂದ ಕಾಡುಗಳನ್ನು ನಾಡುಗಳನ್ನಾಗಿ ಪರಿವರ್ತಿಸಲಾಗುತ್ತಿದೆ. ಆದರೆ, ಈಗ ನಾಡುಗಳೇ ಕಾಡುಗಳಾಗುವಂತೆ ಮಾರ್ಪಡಿಸಬೇಕಿದೆ. ಅಂದರೆ ಮನೆಗಳ ಸಂಖ್ಯೆಗಿಂತ ಮರಗಳ ಸಂಖ್ಯೆ ಅಧಿಕವಿರುವಂತೆ ನೋಡಿಕೊಳ್ಳಬೇಕು ಎಂದರು.

ಈ ವೇಳೆ ಅರ್ಥಶಾಸ್ತ್ರ ಪ್ರಾಧ್ಯಾಪಕಿ ಡಾ.ಆರ್.ಹೆಚ್.ಪವಿತ್ರ, ಸುವರ್ಣ ಬೆಳಕು ಫೌಂಡೇಶನ್ ಅಧ್ಯಕ್ಷ ಮಹೇಶ್ ನಾಯಕ್, ಪ್ರಧಾನ ಕಾರ್ಯದರ್ಶಿ ಬಿ.ಆರ್.ಮಂಜುನಾಥ, ರವಿ, ಹೆಚ್.ಎಂ.ಶಿವಪ್ರಸಾದ್, ಡಾ. ಮಹದೇವಸ್ವಾಮಿ, ಹೊರಳ ಹಳ್ಳಿ, ವರ್ಷಿತ್, ಕಾರ್ತಿಕ್ ಮತ್ತಿತರರಿದ್ದರು.



ಪರಿಸರ ದಿನಾಚರಣೆ ಅಂಗವಾಗಿ ಕುವೆಂಪುನಗರದ ಡಿದೇವರಾಜ ಅರಸು ಬಾಲಕಿಯರ ವಿದ್ಯಾರ್ಥಿನಿಲಯದ ಮುಂಭಾಗದಲ್ಲಿ ಮಾಜಿ ಸಚಿವ ಎ.ಹೆಚ್.ವಿಶ್ವನಾಥ್ ಸಸಿ ನೆಟ್ಟು ನೀರುಣಿಸಿದರು. ಈ ವೇಳೆ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಸಮಿತಿಯ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ಗ್ರಾಮಾಂತರ ಅಧ್ಯಕ್ಷ ಮಾರುತಿ, ನಗರ ಉಪಾಧ್ಯಕ್ಷ ರವಿನಂದನ್, ರಾಜ್ಯ ಓಬಿಸಿ ಕಾರ್ಯದರ್ಶಿ ಪ್ರಕಾಶ್, ಶಿವು ಲಲಿತಾದ್ರಿಪುರ ಹಾಗೂ ಹಾಸ್ಟೆಲ್ ಸಿಬ್ಬಂದಿ ಉಪಸ್ಥಿತರಿದ್ದರು.



ಮೈಸೂರಿನ ಅಶೋಕಪುರಂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅವರಣದಲ್ಲಿ ರಾಜ್ಯ ಕಟ್ಟಡ ಕಾರ್ಮಿಕರ ಕೇಂದ್ರ ಸಂಘದ ವತಿಯಿಂದ ಹೊಂಗೆ ಸಸಿಗಳನ್ನು ನೆಟ್ಟು ಪರಿಸರ ದಿನ ಅಚರಿಸಲಾಯಿತು. ಇದೇ ವೇಳೆ ಸಂಘದ ಪದಾಧಿಕಾರಿ ಮಹೇಶ್ ಮುರಡಗಳ್ಳಿ ಶಾಲಾ ಮಕ್ಕಳಿಗೆ ನೋಟ್ ಪುಸ್ತಕ, ಪೆನ್ನು ವಿತರಿಸಿದರು. ಸಂಘದ ರಾಜ್ಯಾಧ್ಯಕ್ಷ ಪಿ.ರಾಜು, ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಕಾರ್ಯದರ್ಶಿ ಅಂತೋಣಿ ಜಾನ್ಸನ್, ನಿರ್ದೇಶಕರಾದ ಪುಟ್ಟಮಾದಯ್ಯ ರವಿಕುಮಾರ್, ಚಾಮರಾಜ ಕ್ಷೇತ್ರದ ಅಧ್ಯಕ್ಷ ಚಂದ್ರು, ಸಂಘದ ಪದಾಧಿಕಾರಿಗಳಾದ ಲಿಂಗರಾಜು, ಚಂದ್ರು, ರಾಜೇಂದ್ರ, ಪರಮೇಶ್, ಶಾಲೆ ಮುಖ್ಯಶಿಕ್ಷಕ ಹಾಗೂ ಶಿಕ್ಷಕ–ಶಿಕ್ಷಕಿಯರು ಉಪಸ್ಥಿತರಿದ್ದರು.

ನಾಳೆ ಕೆಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಜೂ.5–ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ ಜೂ.7ರ ಬೆಳಗ್ಗೆ 10 ಗಂಟೆಯಿಂದ ಸಂಜೆ 6ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ವಾಗುವುದು. ಗೋಕುಲಂ 1ನೇ ಮತ್ತು 2ನೇ ಹಂತ, ಮಹದೇಶ್ವರ ಬಡಾವಣೆ, ವಿಜಯನಗರ 1ನೇ ಮತ್ತು 2ನೇ ಹಂತ, ಹಿನಕಲ್, ಯಾದವಗಿರಿ, ಮಂಜು ನಾಥಪುರ, ಮಹಾಜನ ಲೇಔಟ್, ಒಂಟಿಕೊಪ್ಪಲ್, ಗೋಕುಲಂ 3ನೇ ಹಂತ, ಜಯಲಕ್ಷ್ಮೀಪುರಂ, ಸಿ.ಎಫ್.ಟಿ.ಆರ್.ಐ, ಡಿ.ಸಿ.ಹೌಸ್, ನರ್ಸ್ ಕ್ವಾಟ್ರಸ್, ಆಕಾಶವಾಣಿ, ಇ.ಎಸ್.ಐ ಆಸ್ಪತ್ರೆ, ಹಸುಕರು ಪಾರ್ಕ್, ಗೋಕುಲಂ ಪಾರ್ಕ್, ಕಾಳಿದಾಸ ರೋಡ್, ಯಾದವಗಿರಿ ಕೈಗಾರಿಕಾ ಪ್ರದೇಶ, ವಿಜಯನಗರ ವಾಟರ್ ಸಪ್ಲೈ, ಆದಿಪಂಪಾ ರಸ್ತೆ, ಎಂ.ಎಂ.ಸಿ ಲೇಡಿಸ್ ಹಾಸ್ಟಲ್, ಜನರಲ್ ತಿಮ್ಮಯ್ಯ ರಸ್ತೆ, ಬೃಂದಾವನ, ಯೋಗನರಸಿಂಹಸ್ವಾಮಿ ದೇವಸ್ಥಾನ, ಆಯಿಸ್ಟಾರ್ ಬೇ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆಯಾಗಲಿದೆ ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.

ಶ್ರೀಮತಿ ಪಲ್ಲವಿ ನಿಧನ



ಗುಂಡ್ಲುಪೇಟೆ: ತಾಲೂಕಿನ ತೊಂಡವಾಡಿ ಗ್ರಾಮದ ಟಿ.ಜಿ.ಮಹೇಶ್ ಅವರ ಪತ್ನಿ ಶ್ರೀಮತಿ ಪಲ್ಲವಿ(35) ಇಂದು ಹೃದಯಾಘಾತದಿಂದ ನಿಧನರಾದರು. ಮೃತರು ಪತಿ, ಪುತ್ರ ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ತೊಂಡವಾಡಿಯಲ್ಲಿ ನೆರವೇರಿತು.

ಮೈಸೂರು ಮಣಿಪಾಲ್ ಆಸ್ಪತ್ರೆಯಲ್ಲಿ ಮೊಟ್ಟ ಮೊದಲಿಗೆ ‘ಶ್ವಾಸಕೋಶದ ಲ್ಯಾವೆಜ್ ಚಿಕಿತ್ಸೆ’ ಯಶಸ್ವಿ

ಜಿಎಂ-ಸಿಎಸ್‌ಎಫ್ ಲಸಿಕೆ ಪೂರೈಕೆಗೆ ಕ್ರಮ ವಹಿಸಲು ಸರ್ಕಾರಕ್ಕೆ ಮನವಿ



ಮೈಸೂರು,ಜೂ.5(ಪಿಎಂ)– ಶ್ವಾಸಕೋಶಕ್ಕೆ ಸಂಬಂಧಿಸಿದ ಪಲ್ಮನರಿ ಅಲ್ವಿಯೋಲಾರ್ ಪ್ರೋಟೀನೋಸಿಸ್ (ಪ್ಯಾಪ್) ಎಂಬ ತೀರಾ ಅಪರೂಪದ ಕಾಯಿಲೆಯಿಂದ ಬಳಲುತ್ತಿದ್ದ 42 ವರ್ಷದ ಪುರುಷರೊಬ್ಬರಿಗೆ ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಮೈಸೂರು ನಗರದಲ್ಲೇ ಮೊಟ್ಟ ಮೊದಲ ಬಾರಿಗೆ ‘ಶ್ವಾಸಕೋಶದ ಲ್ಯಾವೆಜ್ ಚಿಕಿತ್ಸೆ (ಶ್ವಾಸಕೋಶ ಶುದ್ಧೀಕರಣ) ನೀಡಿದ್ದು, ರೋಗಿಯು ಗುಣಮುಖರಾಗಿದ್ದಾರೆ ಎಂದು ಆಸ್ಪತ್ರೆಯ ಶ್ವಾಸಕೋಶ ತಜ್ಞವೈದ್ಯ ಡಾ.ಲಕ್ಷ್ಮೀನರಸಿಂಹನ್ ತಿಳಿಸಿದರು.

ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾ ಡಿದ ಅವರು, ವೃತ್ತಿಯಲ್ಲಿ ಎಲೆಕ್ಟ್ರಿಷಿಯನ್ ಆಗಿರುವ ರೋಗಿಯೊಬ್ಬರು ಕಳೆದ 6 ತಿಂಗಳಿಂದ ಉಸಿರಾಟದ ತೊಂದರೆ ಯಿಂದ ಬಳಲುತ್ತಿದ್ದರು. ಅವರ ಆಮ್ಲಜನಕದ ಸ್ಯಾಚುರೇಶನ್ ಕಡಿಮೆಯಾಗಿ ಇಂತಹ ಸ್ಥಿತಿಗೆ ತಲುಪುವಂತಾಯಿತು. ಶ್ವಾಸಕೋಶದ ಸಿಟಿಸ್ಕ್ಯಾನ್‌ನಿಂದ ಪಲ್ಮನರಿ ಅಲ್ವಿಯೋಲಾರ್ ಪ್ರೋಟೀ ನೋಸಿಸ್ ಸಮಸ್ಯೆಯಿಂದ ಬಳಲುತ್ತಿದ್ದಾರೆ ಎಂಬುದು ಬೆಳಕಿಗೆ ಬಂದಿತು. ಬಳಿಕ ಚಿಕಿತ್ಸೆಗಾಗಿ ನಮ್ಮ ಮಣಿಪಾಲ್ ಆಸ್ಪತ್ರೆಗೆ ಭೇಟಿ ನೀಡಿದರು ಎಂದರು.

ಇದು ತೀರಾ ಅಪರೂಪದ ಕಾಯಿಲೆ. ಪ್ರಸ್ತುತ ಮೈಸೂರು ಜಿಲ್ಲೆಯಲ್ಲಿ ಇಂತಹ ಸಮಸ್ಯೆ ಇರುವವರು 10ರಿಂದ 15 ಮಂದಿಯಷ್ಟೇ ಇರಬಹುದು. ಜಿಎಂ–ಸಿಎಸ್‌ಎಫ್ ಎಂಬ ಲಸಿಕೆ ಈ ಕಾಯಿಲೆಗೆ ಸೂಕ್ತ ಚಿಕಿತ್ಸೆಯಾಗಿದ್ದು, ಈ ಲಸಿಕೆಯನ್ನು ಪ್ರತಿದಿನ 1ರಿಂದ 2 ವರ್ಷಗಳವರೆಗೆ ತೆಗೆದುಕೊಂಡರೆ ಶ್ವಾಸಕೋಶ ಶುದ್ಧೀಕರಣ ಪ್ರಕ್ರಿಯೆ ಸಹಜ ಸ್ಥಿತಿಯಲ್ಲಿ ನಡೆದು ಈ ಕಾಯಿಲೆ ಗುಣವಾಗಲಿದೆ. ಆದರೆ ಈಗ ಭಾರತದಲ್ಲಿ ಜಿಎಂ–ಸಿಎಸ್‌ಎಫ್ ಲಸಿಕೆ ಲಭ್ಯವಿಲ್ಲದೆ, ಇಂತಹ ರೋಗಿಗಳಿಗೆ ತೊಂದರೆ ಉಂಟಾಗಿದೆ. ಹಾಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಈ ಲಸಿಕೆ ಪೂರೈಕೆಗೆ ಗಮನಹರಿಸಬೇಕು ಎಂದು ಮನವಿ ಮಾಡಿದರು.

ಈ ಲಸಿಕೆಯೊಂದಕ್ಕೆ 500ರಿಂದ 700 ರೂ.ವರೆಗೆ ಬೆಲೆ ಇದೆ. ಇದು ಲಭ್ಯವಿಲ್ಲವಾದರೆ ಶ್ವಾಸಕೋಶ ಶುದ್ಧೀಕರಣ ಪ್ರಕ್ರಿಯೆಯನ್ನೇ ಅವಲಂಬಿಸಬೇಕಾಗುತ್ತದೆ. ಇದು ಅತ್ಯಂತ ಕ್ಲಿಷ್ಟಕರ ಪ್ರಕ್ರಿಯೆಯಾಗಿದ್ದು, ಇದಕ್ಕೆ ಉತ್ತಮ ಕೌಶಲ್ಯ, ಅನುಭವಿ ಮತ್ತು ನುರಿತ ವೈದ್ಯರು ಮತ್ತು ಸುಧಾರಿತ ತಂತ್ರಜ್ಞಾನದ ಅಗತ್ಯವಿದೆ ಎಂದರು.

ಮಣಿಪಾಲ್ ಆಸ್ಪತ್ರೆಯಲ್ಲಿ ಪಲ್ ಮೊನೊಲಾಜಿ (ಶ್ವಾಸಕೋಶ ಶಾಸ್ತ್ರ) ವಿಭಾಗವು ಈ ಪ್ರಕ್ರಿಯೆಗೆ ಅಗತ್ಯವಾದ ಸುಧಾರಿತ ತಂತ್ರಜ್ಞಾನ ಮತ್ತು ವೈದ್ಯರ ತಂಡವನ್ನು ಹೊಂದಿದೆ. ಹಾಗಾಗಿ ಈ ಪ್ರಕರಣದಲ್ಲಿ ಯಶಸ್ವಿಯಾಗಿ ಶ್ವಾಸಕೋಶ ಶುದ್ಧೀಕರಣ ಪ್ರಕ್ರಿಯೆ ನಡೆಸಲು ಸಾಧ್ಯವಾಯಿತು. ರೋಗಿಯಲ್ಲಿ 9 ಲೀಟರ್‌ನಷ್ಟು ಗಲೀಜಿನಿಂದ ಕೂಡಿದ ಕಫ ಹೊರತೆಗೆಯಲಾಗಿದೆ ಎಂದರು. ಚಿಕಿತ್ಸೆ ಪಡೆದ ರೋಗಿ ಮತ್ತು ಅವರ ಪತ್ನಿ ಸುದ್ದಿಗೋಷ್ಠಿಯಲ್ಲಿದ್ದರು.

ಎನ್‌ಐಆರ್‌ಎಫ್ ಇಂಡಿಯಾ ರ್‍ಯಾಂಕಿಂಗ್‌ನಲ್ಲಿ ಮೈಸೂರು ವಿವಿಗೆ 44ನೇ ಸ್ಥಾನ

ಮೈಸೂರು, ಜೂ.5(ಆರ್‌ಕೆ)–ಭಾರತ ಸರ್ಕಾರದ ಶಿಕ್ಷಣ ಸಚಿವಾಲಯವು ನ್ಯಾಷನಲ್ ಇನ್‌ಸ್ಟಿಟ್ಯೂಟ್ ರ್‍ಯಾಂಕಿಂಗ್ ಫ್ರೇಮ್ ವರ್ಕ್ (ಎನ್‌ಐಆರ್‌ಎಫ್) ಮೂಲಕ ನಡೆಸಿದ ಮೌಲ್ಯಮಾಪನದಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ 44ನೇ ರ್‍ಯಾಂಕ್ ದೊರೆತಿದೆ.




ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಸೋಮವಾರ ಭಾರತದ ಉನ್ನತ ಶಿಕ್ಷಣ ಸಂಸ್ಥೆಗಳ ಶ್ರೇಯಾಂಕ ಪಟ್ಟಿಯನ್ನು ಬಿಡುಗಡೆ ಮಾಡಿದರು. ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾನಿಲಯಗಳ ಪೈಕಿ ಮೈಸೂರು ವಿಶ್ವವಿದ್ಯಾನಿಲಯವು ಅಗ್ರಸ್ಥಾನ ಪಡೆದಿದೆ ಎಂದು ಕುಲಪತಿ ಪ್ರೊ.ಲೋಕನಾಥ್ ತಿಳಿಸಿದ್ದಾರೆ.

ವಿಶ್ವವಿದ್ಯಾನಿಲಯವು ಸತತ 4 ವರ್ಷಗಳ ಕಾಲ ಎನ್‌ಐಆರ್‌ಎಫ್ ಇಂಡಿಯಾ ರ್‍ಯಾಂಕಿಂಗ್‌ನಲ್ಲಿ 50ರೊಳಗಿನ ಸ್ಥಾನ ಪಡೆದಿದೆ. ಬೋಧನೆ, ಕಲಿಕೆ, ಸಂಪನ್ಮೂಲ, ಸಂಶೋಧನೆ, ವೃತ್ತಿಪರ ಅಭ್ಯಾಸಗಳು, ಪದವಿ ಫಲಿತಾಂಶಗಳು, ವಿಸ್ತರಣೆ ಒಳ ಗೊಳ್ಳುವಿಕೆಯಂತಹ ಅಂಶಗಳನ್ನು ಪರಿಗಣಿಸಿ, ವಿಶ್ವವಿದ್ಯಾನಿಲಯಕ್ಕೆ ಈ ಸ್ಥಾನ ಸಿಕ್ಕಿದೆ ಎಂದು ತಿಳಿಸಿದ್ದಾರೆ. ಖಾಯಂ ಅಧ್ಯಾಪಕರ ಕೊರತೆ, ಇನ್ನಿತರ ಮಿತಿಗಳ ನಡುವೆಯೂ ಒಟ್ಟಾರೆ ವರ್ಗ ಮತ್ತು ವಿಶ್ವವಿದ್ಯಾನಿಲಯಗಳ ವರ್ಗಗಳ ರ್‍ಯಾಂಕಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಮೈಸೂರು ವಿಶ್ವವಿದ್ಯಾನಿಲಯವು 44ನೇ ಸ್ಥಾನ ಪಡೆದಿರುವುದು ಸಂತಸ ತಂದಿದೆ ಎಂದರು. ವಿಶ್ವವಿದ್ಯಾನಿಲಯದ ಯಶಸ್ಸಿಗೆ ಕಾರಣಕರ್ತರಾಗಿರುವ ಸಿಂಡಿಕೇಟ್ ಮತ್ತು ಅಕಾಡೆಮಿಕ್ ಕೌನ್ಸಿಲ್ ಸದಸ್ಯರು, ಪಿಎಂಇಬಿ, ಅಧ್ಯಾಪಕ, ಅಧ್ಯಾಪಕೇತರ ವರ್ಗ, ವಿದ್ಯಾರ್ಥಿಗಳನ್ನು ಅಭಿನಂದಿಸುತ್ತೇನೆ ಎಂದು ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದ್ದಾರೆ.

ಜೂ.10, ಹಸಿರು ದೃಷ್ಟಿ – ವಾಕಾಥಾನ್

ಮೈಸೂರು, ಜೂ.5–ವಿಕಲಚೇತನರ ಮತ್ತು ಹಿರಿಯ ನಾಗರಿಕ ಸಬಲೀಕರಣ ಇಲಾಖೆ ವತಿಯಿಂದ ವಿಶ್ವ ಪರಿಸರದ ದಿನದ ಪ್ರಯುಕ್ತ ಜೂ.10ರಂದು ಸಂಜೆ 4ರಿಂದ 6ವರೆಗೆ ಕುಕ್ಕರಹಳ್ಳಿ ಕೆರೆಯ ಆವ ರಣದಲ್ಲಿ ಬೀಟ್ ಪ್ಲಾಸ್ಟಿಕ್ ಪೊಲ್ಯೂಷನ್ ಧ್ಯೇಯ ವಾಕ್ಯದೊಂದಿಗೆ ವಿಕಲಚೇತನರ ವಿದ್ಯಾರ್ಥಿಗಳಿಗಾಗಿ “ಹಸಿರು ದೃಷ್ಟಿ” ವಾಕಾಥಾನ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರಾಜ್ಯ ಡಾ.ಬಿ.ಆರ್.ಅಂಬೇಡ್ಕರ್ ಆದಿ ದ್ರಾವಿಡ ಪೌರಕಾರ್ಮಿಕರ ಯುವಕರ ಅಭಿವೃದ್ಧಿ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ಆರ್.ವೆಂಕಟೇಶ್, ಸಿಎಂ ಸಿದ್ದರಾಮಯ್ಯ ಅವರಿಗೆ ‘ಸಾಮಾಜಿಕ ಕ್ರಾಂತಿ ಸೂರ್ಯ ಡಾ.ಬಾಬಾ ಸಾಹೇಬ್ ಅಂಬೇಡ್ಕರ್’ ಪುಸ್ತಕ ನೀಡಿ, ಗೌರವಿಸಿದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ. 5–ಸಿದ್ಧಾರ್ಥನಗರದ ಶ್ರೀ ಗಾಯತ್ರಿ ಎಜುಕೇಷನಲ್ ಕಲ್ಚರಲ್ ಮತ್ತು ಚಾರಿಟಬಲ್ ಟ್ರಸ್ಟ್ ವತಿಯಿಂದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕಾಗಿ ಬ್ರಾಹ್ಮಣ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ.70ಕ್ಕಿಂತ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳು ಸ್ವವಿವರದೊಂದಿಗೆ ದೃಢೀಕೃತ ನಕಲು ಅಂಕಪಟ್ಟಿ ಹಾಗೂ ಭಾವಚಿತ್ರವನ್ನು ಜೂ.15ರೊಳಗೆ ಟ್ರಸ್ಟ್‌ಗೆ ಅರ್ಜಿ ತಲುಪಿಸಲು ಕೋರಲಾಗಿದೆ. ವಿವರಗಳಿಗೆ ಮೊ. 9480476123, 9886555108 ಸಂಪರ್ಕಿಸಿ.

ಜೂನ್ 8ರಿಂದ ಉಚಿತ ಯೋಗಾಸನ, ಪ್ರಾಣಾಯಾಮ

ಮೈಸೂರು, ಜೂ. 5– ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಮೈಸೂರು ಶಾಖೆಯು ಸರಸ್ವತಿಪುರಂನಲ್ಲಿರುವ ವಿಜಯ ವಿಠ್ಠಲ ಶಾಲೆಯ ಆವರಣದಲ್ಲಿ ಜೂ.8ರಿಂದ 45 ದಿನಗಳ ಉಚಿತ ಯೋಗಾಸನ, ಪ್ರಾಣಾಯಾಮ, ಧ್ಯಾನ ತರಗತಿಯನ್ನು ಆಯೋಜಿಸಲಾಗಿದೆ. ತರಗತಿಯು ಬೆಳಗ್ಗೆ 6ರಿಂದ 7 ಗಂಟೆವರೆಗೆ ನಡೆಯಲಿದೆ. ಮಾಹಿತಿಗೆ ಮೊ. 9945759762, 9448978405 ಸಂಪರ್ಕಿಸಬಹುದು.





ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಸೋಮವಾರ ಮೈಸೂರಿನ ಆರ್.ಟಿ.ನಗರದಲ್ಲಿರುವ ನೈಪುಣ್ಯ ಶಾಲೆಯ ವಿದ್ಯಾರ್ಥಿಗಳು ಪರಿಸರ ಜಾಗೃತಿ ನಾಟಕವನ್ನು ಪ್ರದರ್ಶಿಸಿದರು. ನೈಪುಣ್ಯ ಶಾಲಾ ಆವರಣದಲ್ಲಿ ಹಾಗೂ ರಾಮಕೃಷ್ಣ ವೃತ್ತದಲ್ಲಿ ಪ್ರದರ್ಶನಗೊಂಡ ಈ ನಾಟಕವನ್ನು ರಂಗಾಯಣದ ಶ್ರೀಮತಿ ಸುಮತಿ ನಿರ್ದೇಶಿದರು. ಕಾರ್ಯಕ್ರಮದಲ್ಲಿ ಶಾಲೆಯ ಅಧ್ಯಕ್ಷ ಆರ್.ರಘು, ಪ್ರಾಂಶುಪಾಲರಾದ ಶ್ರೀಮತಿ ಶೋಭಿತ ಎಸ್.ಆರಾಧ್ಯ ಹಾಗೂ ಪೋಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

6.6.2023 ಮಂಗಳವಾರ, ಮಳೆ ನಕ್ಷತ್ರ: ರೋಹಿಣಿ, 25.05.2023ರಿಂದ 07.06.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಪೂಷಾ, ರಾಹುಕಾಲ: ಮಧ್ಯಾಹ್ನ 3.00ರಿಂದ 4.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** “ಹೈಪೋಥೈರಾಯ್ಡಿಸಮ್” ಚಿಕಿತ್ಸಾ ಶಿಬಿರ, ಆಲನಹಳ್ಳಿ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30ರಿಂದ 4.30.
- **ಮಹಾರಾಜ ಕಾಲೇಜು:** ಪ್ರತಿಭಾನ್ವೇಷಣೆ 2022–23 ಉದ್ಘಾಟನಾ ಸಮಾರಂಭ; ಉದ್ಘಾಟನೆ: ಮೈಸೂರು ವಿವಿ ಕುಲಸಚಿವೆ ವಿ.ಆರ್.ಶೈಲಜಾ, ಮುಖ್ಯ ಅತಿಥಿಗಳು: ಖ್ಯಾತ ಸಂಗೀತ ನಿರ್ದೇಶಕ ಡಾ. ಹಂಸಲೇಖ, ಅಧ್ಯಕ್ಷತೆ: ಪ್ರಾಂಶುಪಾಲ ಡಾ.ಸಿ.ಎ.ಶ್ರೀಧರ್, ಕಾಲೇಜು ಶತಮಾನೋತ್ಸವ ಭವನ, ಬೆಳಗ್ಗೆ 10.30 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾಪರಂಪರೆ ಬಾನುಲಿ ಸರಣಿ, ಪ್ರಸ್ತುತಿ–ಡಾ.ಎ.ಎಸ್. ಚಂದ್ರಶೇಖರ್, 6.35 ಶ್ರದ್ಧೆಯ ಶಿಲ್ಪ ‘ಮೈಸೂರು ಸುತ್ತಲಿನ ದೇಗುಲಗಳ ಪರಿಚಯ’, ಪ್ರಸ್ತುತಿ– ಡಾ.ಟಿ.ಎಸ್.ಗೋಪಾಲ್, 6.40 ಪದಸಂಸ್ಕೃತಿ ‘ಕನ್ನಡ ಪದಗಳ ಬಳಕೆ’ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, ಪ್ರಸ್ತುತಿ– ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ, 7.15 ಕಾದಂಬರಿ ವಿಹಾರ: ನಾ ಕಸ್ತೂರಿಯವರ “ರಂಗನಾಯಕಿ” ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ರಾಜರಾಂ ಬಿ.ಎಸ್., 8.30 ಕರೆಗೊಂದು ಗೀತೆ, 10.00 ಮೌನದಾಚೆಯ ಬೆಳಕು: ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ, ನಿರ್ದೇಶನ ಹಾಗೂ ನಿರೂಪಣ ಸಾಹಿತ್ಯ–ಎಸ್.ಶಂಕರ್, ನಿರ್ಮಾಣ–ಗೀತಾ ರಮಾನಂದ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರನಾಮ–ಮಾಲತೀ ದಿವಾಕರ್ ಹೆಗಡೆ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಶಾಸ್ತ್ರೀಯ ಸಂಗೀತ–ಅದಿತಿ, ಕೃಷ್ಣಪ್ರಸಾದ್–ವೈಯೋಲಿನ್. **ಸಂಜೆ:** 4.00 ಕಥಾ ಕಾಲಕ್ಷೇಪ: “ಬಲಿ ವಾಮನ”, ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಸಗಣಿ ಗೊಬ್ಬರದ ಮಹತ್ವ ಅದರ ಬಳಕೆ ಮತ್ತು ಮೌಲ್ಯವರ್ಧನೆ ಈ ಬಗ್ಗೆ ಚಾಮರಾಜನಗರದ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ತಾಂತ್ರಿಕ ಅಧಿಕಾರಿ ಹಾಗೂ ಸಸ್ಯರೋಗ ತಜ್ಞರಾದ ಡಾ.ಬಿ.ಪಂಪನಗೌಡ ಅವ ರೊಂದಿಗೆ ಸಂದರ್ಶನ, ಸಂದರ್ಶಕರು– ಜಿ.ಶಾಂತಕುಮಾರ್. **ರಾತ್ರಿ:** 9.30 ವಿ.ಶೀಧರ್– ಕೊಳಲು, 10.30 ಗಮಕ ವ್ಯಾಖ್ಯಾನ, ವಾಚನ:– ಪದ್ಮಾ ಶ್ರೀವತ್ಸ್, ವ್ಯಾಖ್ಯಾನ– ಡಾ.ಎನ್.ಕೆ.ರಾಮಶೇಷನ್.



ಮೈಸೂರು ರಮಾಬಾಯಿನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾ ಸ್ಪಂದನ ಸಂಸ್ಥೆ ವತಿಯಿಂದ ಮಕ್ಕಳಿಗೆ ಪುಸ್ತಕ ವಿತರಣೆ ಕಾರ್ಯಕ್ರಮಕ್ಕೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಚಾಲನೆ ನೀಡಿದರು. ಈ ವೇಳೆ ಶ್ರೀರಾಂಪುರ ಪಪಂ ಮುಖ್ಯಾಧಿಕಾರಿ ಎಂ.ಶ್ರೀಧರ್, ವಿದ್ಯಾ ಸ್ಪಂದನ ಸಂಸ್ಥೆಯ ಅಧ್ಯಕ್ಷ ಜಿ.ಪುನೀತ್, ಕ್ಷೇತ್ರ ಶಿಕ್ಷಣಾಧಿಕಾರಿ ಮಲ್ಲೇಶ್ವರಿ, ಕೇಂದ್ರ ರೇಷ್ಮೆ ಮಂಡಳಿ ನಿವೃತ್ತ ತಾಂತ್ರಿಕ ಅಧಿಕಾರಿ ಕೆ.ಆರ್. ಗಣೇಶ್, ತಾಪಂ ಮಾಜಿ ಸದಸ್ಯರಾದ ಯೋಗ ಶ್ರೀನಿವಾಸ್, ಉರಗ ತಜ್ಞ ಸೂರ್ಯಕೀರ್ತಿ, ಕಮಲ ನಟರಾಜ್ ಇನ್ನಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಜೂ.5–ಜೂ.6ರ ಬೆಳಗ್ಗೆ 10ರಿಂದ ಸಂಜೆ 5:30ರವರೆಗೆ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿದ್ದು, ಜಲಪುರಿ, ಗಾಯತ್ರಿಪುರಂ, ಜ್ಯೋತಿನಗರ, ಉದಯಗಿರಿ, ಕ್ಯಾತಮಾರನಹಳ್ಳಿ, ಶಾಂತಿನಗರ 1 ಮತ್ತು 2ನೇ ಹಂತ, ಗಣೇಶ್‌ನಗರ, ಸತ್ಯನಗರ, ಮಹದೇವಪುರ ರಸ್ತೆ, ಜರ್ಮನ್ ಪ್ರೆಸ್, ಉಸ್ಮಾನಿಯಾ ಬ್ಲಾಕ್, ಗೌಸಿಯಾ ನಗರ, ರಾಘವೇಂದ್ರನಗರ, ಗಿರಿಯಾಬೋವಿ ಪಾಳ್ಯ, ಯರಗನಹಳ್ಳಿ, ಬನ್ನೂರು ರಸ್ತೆ ಹಾಗೂ ಸುತ್ತಮುತ್ತ. ಇನಾಂ ಉತ್ತನಹಳ್ಳಿ, ಎಂ.ಸಿ.ಹುಂಡಿ, ಕೀಳನಪುರ, ಸಿದ್ದರಾಮನ ಹುಂಡಿ, ಮೇಗಳಾಪುರ, ಮಾಧವಗೆರೆ, ಗುರುಕಾರಪುರ, ದುದ್ದಗೆರೆ, ಮಹದೇವಿ ಕಾಲೋನಿ, ಲಕ್ಷ್ಮೀಪುರಂ, ಪಿ.ಜಿ.ಹುಂಡಿ, ಚಟ್ಟನಹಳ್ಳಿ, ಚಟ್ಟನಹಳ್ಳಿ ಪಾಳ್ಯ, ಹೊಸಹಳ್ಳಿ, ರಂಗನಾಥಪುರ, ಶ್ರೀನಿವಾಸಪುರ, ಯಡಕೊಳ, ಕಡವೆಕಟ್ಟೆಹುಂಡಿ, ಅಂಚೆಹುಂಡಿ, ದೇವೇಗೌಡನ ಹುಂಡಿ, ಮುದ್ದೇಗೌಡನಹುಂಡಿ, ಕುಪ್ಪೆಗಾಲ, ಕೆಂಪಯ್ಯನಹುಂಡಿ, ಹೊಸಹಳ್ಳಿ, ಬಿ.ಎನ್ ಹಳ್ಳಿ, ವರಕೋಡು ಪೇಪರ್ ಮಿಲ್, ಎಸ್.ಆರ್ ಇಂಡಸ್ಟ್ರೀಸ್, ಜಾಗ್ವಾರಿ ಸಿಮೆಂಟ್ ಇಂಡಸ್ಟ್ರೀಸ್, ರಾಜಶ್ರೀ ಇಂಡಸ್ಟ್ರೀ ಹಾಗೂ ಸುತ್ತಮುತ್ತ. ನಂಜನಗೂಡು ವಿಭಾಗ ವ್ಯಾಪ್ತಿಯ ಕುಪ್ಯ ಗ್ರಾಪಂ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಮರ–ಗಿಡಗಳನ್ನು ಮಕ್ಕಳಂತೆ ಬೆಳೆಸಿದರೆ ಪರಿಸರ ಸಂರಕ್ಷಣೆ ಸಾಧ್ಯ

● ಹಿರಿಯ ಸಿವಿಲ್ ನ್ಯಾಯಾಧೀಶರಾದ ಬಿ.ಜಿ.ದಿನೇಶ್ ಕಿವಿಮಾತು ● ಪ್ಲಾಸ್ಟಿಕ್ ಮಾಲಿನ್ಯಕ್ಕೆ ಪರಿಹಾರೋಪಾಯಗಳು ಉಪನ್ಯಾಸ ಕಾರ್ಯಕ್ರಮದಲ್ಲಿ ಪರಿಸರ ಪಾಠ

ಮೈಸೂರು, ಜೂ.5 (ಎಂಕೆ)– ನಮ್ಮ ಮಕ್ಕಳನ್ನು ಜೋಪಾನವಾಗಿ ಪೋಷಣೆ ಮಾಡಿ ಬೆಳೆಸುವಂತೆ ಗಿಡ–ಮರಗಳನ್ನು ಬೆಳೆಸಬೇಕು. ಸ್ವಚ್ಛತೆಗೆ ಆದ್ಯತೆ ನೀಡಬೇಕು. ಇದರಿಂದ ಪರಿಸರ ಸಂರಕ್ಷಣೆ ಸಾಧ್ಯವಾಗುತ್ತದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಬಿ.ಜಿ.ದಿನೇಶ್ ಕಿವಿಮಾತು ಹೇಳಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ ಸಂಸ್ಥೆ ಸಂಭಾಗಣದಲ್ಲಿ ಜಿಲ್ಲಾಡಳಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ, ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಪರಿಸರ ವಿಭಾಗದ ಸಂಯುಕ್ತಾಶ್ರಯದೊಂದಿಗೆ 'ವಿಶ್ವ ಪರಿಸರ ದಿನಾಚರಣೆ' ಹಾಗೂ 'ಪ್ಲಾಸ್ಟಿಕ್ ಮಾಲಿನ್ಯಕ್ಕೆ ಪರಿಹಾರೋಪಾಯಗಳು' ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪರಿಸರ ಉಳಿಯಬೇಕಾದರೆ, ಮುಂದಿನ ಯುವ ಪೀಳಿಗೆಗೆ ಉತ್ತಮ ವಾತಾವರಣ ನೀಡಬೇಕಾದರೆ ನಮ್ಮ ಮಕ್ಕಳನ್ನು ಜೋಪಾನವಾಗಿ ಪೋಷಣೆ ಮಾಡಿ ಬೆಳೆಸುವಂತೆ ಗಿಡ–ಮರಗಳನ್ನು ಬೆಳಸಬೇಕು. ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ಹೇಳಿದರು.

ಪರಿಸರವಿಲ್ಲದೆ ನಮ್ಮ ಬದುಕೇ ಇಲ್ಲವೆಂಬುದು ಸತ್ಯವಾಗಿದ್ದರೂ ಐಷಾರಾಮಿ ಜೀವನ, ಸದಾ ಕಂಫರ್ಟ್ ಜೋನ್‌ನಲ್ಲಿರುವ ಬಯಕೆಯಿಂದಾಗಿ ಅಗತ್ಯಕ್ಕೂ ಮೀರಿ ನೈಸರ್ಗಿಕ ಸಂಪನ್ಮೂಲವನ್ನು ಬಳಸಿಕೊಂಡಿದ್ದೇವೆ. ಇರುವುದನ್ನೂ ಹಾಳು ಮಾಡಿದ್ದೇವೆ. ಇದೇ ರೀತಿ ಮುಂದುವರಿದರೆ ಮುಂದಿನ ಪೀಳಿಗೆಗೆ ಬಿಟ್ಟು ಕೊಡುವುದೇನು ಎಂದು ಪ್ರಶ್ನಿಸಿದರು.



ಮೈಸೂರಿನ ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆ ಆವರಣದಲ್ಲಿ ಗಿಡ ನೆಡುವ ಮೂಲಕ ಪರಿಸರ ದಿನ ಆಚರಿಸಲಾಯಿತು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಬಿ.ಜಿ. ದಿನೇಶ್, ಎಡಿಸಿ ಕವಿತಾ ರಾಜಾರಾಂ ಮತ್ತಿತರರಿದ್ದರು.

ನಮ್ಮ ಹಿರಿಯರು ನಮಗೆ ಬಳುವಳಿಯಾಗಿ ನೀಡಿರುವ ನೈಸರ್ಗಿಕ ಸಂಪನ್ಮೂಲವನ್ನು ಇನ್ನಷ್ಟು ಹೆಚ್ಚಿಸಿ, ಮುಂದಿನ ಯುವ ಪೀಳಿಗೆಗೆ ನೀಡಬೇಕು. ಇಲ್ಲವಾದರೇ ಜೀವನ ಸ್ಥಿತಿ ಗಂಭೀರ ವಾಗಿರುತ್ತದೆ. ಕೆಲ ವರ್ಷಗಳಿಂದ ಕೈಗಾರಿಕೋದ್ಯಮ ಸೇರಿದಂತೆ ಇನ್ನಿತರೆ ಉದ್ಯಮಗಳನ್ನು ಬೆಳೆಸುವ ನಿಟ್ಟಿನಲ್ಲಿ ಅವಶ್ಯಕತೆಯನ್ನು ಮೀರಿ ನೈಸರ್ಗಿಕ ಸಂಪನ್ಮೂಲ ಬಳಕೆ ಮಾಡಿದ್ದೇವೆ. ಇದಕ್ಕೆ ನಮ್ಮಲ್ಲಿರುವ ದುರಾಸೆ ಮುಖ್ಯ ಕಾರಣವಾಗಿದೆ ಎಂದರು.

ದೇಶದ ಜನಸಂಖ್ಯೆಗೆ ಅನುಗುಣವಾಗಿ ಪ್ರತಿಯೊಬ್ಬರು ಒಂದೊಂದು ಗಿಡ ನೆಟ್ಟರೂ ಪರಿಸರ ಸಂರಕ್ಷಣೆ ಕೊಡುಗೆ ನೀಡಿದಂತೆಯೇ. ಹಾಗೆಯೇ ಸ್ವಚ್ಛತೆಗೆ ಗಮನ ಹರಿಸಬೇಕು. ಪ್ಲಾಸ್ಟಿಕ್ ಬಳಕೆ ನಿಲ್ಲಿಸಬೇಕು. ಸಮುದ್ರಕ್ಕೆ ಸೇರುತ್ತಿರುವ ತ್ಯಾಜ್ಯದಿಂದಾಗಿ ಜಲಚರ ಪ್ರಾಣಿಗಳು ಸಾವನ್ನಪ್ಪುತ್ತಿವೆ. ಇದು ಪ್ರಕೃತಿಯ ಮೇಲೆ ಮನುಷ್ಯ ಮಾಡುತ್ತಿರುವ ದೌರ್ಜನ್ಯವಾಗಿದೆ. ಇದೆಲ್ಲದ ಪರಿಣಾಮದಿಂದಾಗಿ ನಮ್ಮ ಆಯಸ್ಸು ಜಾಸ್ತಿಯಾದರೂ ಆರೋಗ್ಯ ವೃದ್ಧಿಯಾಗುತ್ತಿಲ್ಲ. ಚಿಕ್ಕ ವಯಸ್ಸಿನಲ್ಲೇ ನಾನಾ ಬಗೆಯ ಕಾಯಿಲೆಗಳಿಂದ ನರಳುವಂತಾಗಿದೆ ಎಂದರು.

ಎಸಿ ಕಾರಿನಲ್ಲಿ ಕೂತು ಹೇಸಿಗೆ ಕೆಲಸ: ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಂ ಮಾತನಾಡಿ, ಎಸಿ ಕಾರಿನಲ್ಲಿ ಕೂತು ತಿರುಗಾಡುವ ಹಲವರು ಕಾರಿನ ಕಿಟಕಿಯಿಂದ ಪ್ಲಾಸ್ಟಿಕ್ ಕವರ್ ಇನ್ನಿತರ ಕಸವನ್ನು ಹೊರಗೆಸೆಯುವ ಮೂಲಕ ಹೇಸಿಗೆ ಕೆಲಸ ಮಾಡುತ್ತಾರೆ. ನಮ್ಮ ಹಿರಿಯರು ಜ್ಞಾನಿಗಳಾಗಿದ್ದು, ಅಕ್ಷರವಂತರಾಗದೆಯೂ ವಿವಿಧ ಆಚರಣೆಗಳ ಮೂಲಕ ಪರಿಸರ ಉಳಿಸುವ ಕೆಲಸ ಮಾಡುತ್ತಿದ್ದರು. ಆದರೆ ಇವತ್ತು ಅಕ್ಷರವಂತರ ಸಂಖ್ಯೆ ಹೆಚ್ಚಾಗಿದ್ದರೂ ಪರಿಸರವನ್ನು ಹಾಳುಮಾಡುವ ಕೆಲಸ ನಡೆಯುತ್ತಿದೆ ಎಂದರು.

ಮಾರುಕಟ್ಟೆಯಲ್ಲಿ ವ್ಯಾಪಾರಿಗಳಿಗೆ ಪ್ಲಾಸ್ಟಿಕ್ ಬಳಸಬೇಡಿ ಎಂದರೆ, ನಾವು ಪ್ಲಾಸ್ಟಿಕ್ ಬಳಸಲು ಬಳಸಬಾರದು ಎನ್ನುವ ಅಧಿಕಾರಿಗಳು ಮೊದಲು ಪ್ಲಾಸ್ಟಿಕ್ ತಯಾರಿಸುವ ಕಾರ್ಖಾನೆಗಳನ್ನು ಮುಚ್ಚಿಸಿ ಎನ್ನುತ್ತಾರೆ. ಅವರು ಹೇಳುವುದರಲ್ಲಿಯೂ ನ್ಯಾಯವಿದೆ. ಹಾಗೆಯೇ ನಮ್ಮ ಮನೆಯಲ್ಲಿಯ ಕಸವನ್ನು ತೆಗೆದುಕೊಂಡು ಹೋಗಲು ಬರುವ ಪೌರಕಾರ್ಮಿಕರನ್ನು ಗೌರವದಿಂದ ಕಾಣಬೇಕು ಎಂದರು.

ಬಳಿಕ ಸಿಐಪಿಇಟಿ ಸಂಸ್ಥೆಯ ಅಧಿಕಾರಿ ಪರಮಿಂದರ್ ಪ್ರೀತ್ ಸಿಂಗ್ 'ಪ್ಲಾಸ್ಟಿಕ್ ಮಾಲಿನ್ಯಕ್ಕೆ ಪರಿಹಾರೋಪಾಯಗಳು' ಕುರಿತು ಉಪನ್ಯಾಸ ನೀಡಿದರು. ಇದೇ ವೇಳೆ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಆಯೋಜಿಸಿದ್ದ ಪರಿಸರ ಜಾಗೃತಿ ಕುರಿತ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು. ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ಜಿ.ಆರ್.ಗಣೇಶನ್, ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರ್ ಮೈಸೂರು ಘಟಕದ ಅಧ್ಯಕ್ಷ ಕಾರ್ಯದರ್ಶಿ ಹೆಚ್.ಎಸ್.ಸುರೇಶ್‌ಬಾಬು, ಎಸ್‌ಜೆಸಿಇ ಪರಿಸರ ವಿಭಾಗದ ಮುಖ್ಯಸ್ಥ ಡಾ.ಬಿ.ಎಂ.ಸದಾಶಿವ ಮೂರ್ತಿ, ಹರಿಶಂಕರ್ ಮತ್ತಿತರರಿದ್ದರು.

ಜಾಗತಿಕ ತಾಪಮಾನ ತಗ್ಗಿಸಲು ಗಿಡವೇ ಮದ್ದು: ರಮೇಶ್ ಬಾನೋತ್



ಮೈಸೂರು–ಬೆಂಗಳೂರು ಹೆದ್ದಾರಿಯ ಮಣಿಪಾಲ್ ಆಸ್ಪತ್ರೆ ಬಳಿ, ನರಸಿಂಹರಾಜ ಪೊಲೀಸ್ ಠಾಣೆ ವತಿಯಿಂದ ಆಯೋಜಿಸಿದ್ದ 'ವಿಶ್ವ ಪರಿಸರ ದಿನಾಚರಣೆ' ಅಂಗವಾಗಿ ಗಿಡ ನೆಡುವ ಕಾರ್ಯಕ್ರಮಕ್ಕೆ ನೀರೆರೆಯುವ ಮೂಲಕ ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಚಾಲನೆ ನೀಡಿದರು.

ಮೈಸೂರು,ಜೂ. 5(ಸಿಎನ್)–ದಿನೇ ದಿನೆ ಜಾಗತಿಕ ಮಟ್ಟದಲ್ಲಿ ತಾಪಮಾನ ಹೆಚ್ಚುತ್ತಿದ್ದು, ನಮ್ಮೆಲ್ಲರಿಗೂ ಪರಿಸರ ಸಂರಕ್ಷಣೆ ಜವಾಬ್ದಾರಿ ಮತ್ತಷ್ಟು ಜಾಸ್ತಿಯಾಗಿದೆ. ಹಾಗಾಗಿ ಎಲ್ಲರೂ ಗಿಡಗಳನ್ನು ನೆಡುವ ಕಾರ್ಯಕ್ಕೆ ಪಣತೊಡಬೇಕಿದೆ ಎಂದು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಕರೆ ನೀಡಿದರು.

ಮೈಸೂರು–ಬೆಂಗಳೂರು ಹೆದ್ದಾರಿಯ ಮಣಿಪಾಲ್ ಆಸ್ಪತ್ರೆ ಬಳಿ, ನರಸಿಂಹರಾಜ ಪೊಲೀಸ್ ಠಾಣೆ ವತಿಯಿಂದ ಆಯೋಜಿಸಲಾಗಿದ್ದ 'ವಿಶ್ವ ಪರಿಸರ ದಿನಾಚರಣೆ' ಅಂಗವಾಗಿ ಗಿಡ ನೆಡುವ ಕಾರ್ಯಕ್ರಮಕ್ಕೆ ನೀರೆರೆಯುವ ಮೂಲಕ ಚಾಲನೆ ನೀಡಿ, ಅವರು ಮಾತನಾಡಿದರು.

ವಿಶ್ವದಾದ್ಯಂತ ಪರಿಸರ ಮಾಲಿನ್ಯ, ಅತೀಯಾದ ತಾಪಮಾನ ದಾಖಲಾಗುತ್ತಿದೆ. ಇದಕ್ಕೆ ಕಾರಣವು ನಮಗೆ ಚೆನ್ನಾಗೆ ತಿಳಿದಿದೆ. ಒಂದು ಗಿಡ ನೆಟ್ಟರೆ ಅದು ಬೆಳೆದು ನಮಗೆ ಉಸಿರಾಡಲು ಆಮ್ಲಜನಕ ನೀಡುವುದರ ಜೊತೆಗೆ, ಭೂಮಿಯ ತಾಪಮಾನವನ್ನು ತಗ್ಗಿಸುವ ನಿಟ್ಟಿನಲ್ಲಿ ಮುಖ್ಯ ಪಾತ್ರ ವಹಿಸುತ್ತದೆ ಎಂದರು.

ವಿಶ್ವಸಂಸ್ಥೆ ವರದಿ ಪ್ರಕಾರ ಈ ಶತಮಾನದ ಅಂತ್ಯದ ವೇಳೆಗೆ ಭೂಮಿಯ ಮೇಲಿನ ಜಾಗತಿಕ ತಾಪಮಾನ ಅತ್ಯಂತ ಅಪಾಯಕಾರಿ ಮಟ್ಟ ತಲುಪಲಿದೆ ಎಂದು ವಿಶ್ವಸಂಸ್ಥೆಯ ಹವಾಮಾನ ಬದಲಾವಣೆಯ ಮೇಲಿನ ಫ್ರೇಮ್‌ವರ್ಕ್ ಕನ್ವೆನ್ಷನ್ ವರದಿ (UNFCCC) ಎಚ್ಚರಿಕೆ ನೀಡಿದೆ. ವರದಿ ಪ್ರಕಾರ 21ನೇ ಶತಮಾನದ ಅಂತ್ಯದ ವೇಳೆಗೆ ತಾಪಮಾನ ಹೆಚ್ಚಳವು ಕೈಗಾರಿಕಾ ಯುಗದ ಆರಂಭದ ಪೂರ್ವ ಮಟ್ಟಕ್ಕಿಂತ 2.7 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಲಿದೆ ಎಂದು ಕಳವಳ ವ್ಯಕ್ತಪಡಿಸಿದೆ ಎಂದರು.

ಈ ಅಭಿಯಾನ ಎನ್‌ಆರ್ ಠಾಣೆಗೆ ಮಾತ್ರ ಸೀಮಿತವಲ್ಲ. ನಗರದ ಎಲ್ಲಾ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ, ಖಾಲಿ ಇರುವ ಜಾಗಗಳನ್ನು ಗುರುತಿಸಿ, ಸುಮಾರು 1500 ಸಾವಿರ ಗಿಡಗಳನ್ನು ನೆಡುವ ಕಾರ್ಯ ಆರಂಭವಾಗಲಿದೆ. ಈಗಾಗಲೇ ಇಲ್ಲಿ 150 ಗಿಡಗಳನ್ನು ನೆಡಲಾಗಿದೆ ಎಂದರು.

ಕಾರ್ಯಕ್ರಮದ ಬಳಿಕ ನೆರೆದಿದ್ದ ಪೊಲೀಸ್ ಸಿಬ್ಬಂದಿ, ಮಾಧ್ಯಮ ಹಾಗೂ ಪತ್ರಕರ್ತರಿಗೆ ಗಿಡಗಳನ್ನು ನೀಡುವ ಮೂಲಕ ಅರ್ಥಪೂರ್ಣವಾಗಿ ಪರಿಸರ ದಿನ ಆಚರಿಸಲಾಯಿತು. ಆಯ್ದ ಪರಿಸರ ಪ್ರೇಮಿಗಳಿಗೆ ಪ್ರಶಸ್ತಿ ಫಲಕ ನೀಡಿ ಗೌರವಿಸಲಾಯಿತು. ಈ ವೇಳೆ ಸಹಾಯಕ ಪೊಲೀಸ್ ಆಯುಕ್ತರಾದ (ಎಸಿಪಿ) ಅಶ್ವತ್ಥ್ ನಾರಾಯಣ್, ಎನ್‌ಆರ್ ಠಾಣೆ ಇನ್‌ಸ್ಪೆಕ್ಟರ್ ಲಕ್ಷ್ಮಿಕಾಂತ್ ತಳವಾರ್, ನಗರಪಾಲಿಕೆ ಮಾಜಿ ಸದಸ್ಯ ಉದಯ್, ಪರಿಸರ ಪ್ರೇಮಿ ರಾಜು ಮತ್ತಿತರರಿದ್ದರು.

ಶೀಘ್ರವೇ ಕಚೇರಿ ಆರಂಭಿಸಿ ಜನರ ಸಮಸ್ಯೆ ಆಲಿಸುವೆ

ಬ್ರಾಹ್ಮಣ ಧರ್ಮ ಸಹಾಯ ಸಭಾ ವತಿಯಿಂದ ಅಭಿನಂದನಾ ಸಮಾರಂಭದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ

ಮೈಸೂರು,ಜೂ.5(ಎಸ್‌ಪಿಎನ್)–ಈ ಬಾರಿ ಚುನಾವಣೆಯಲ್ಲಿ ಕೆ.ಆರ್.ಕ್ಷೇತ್ರದ ಮತದಾರರು ಜಾತಿ–ಮತಗಳನ್ನು ಮೀರಿ ನನ್ನನ್ನು ಗೆಲ್ಲಿಸಿದ್ದಾರೆ. ಅವರ ಸಮಸ್ಯೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಪರಿಹರಿಸಲು ಪ್ರಯತ್ನಿಸುತ್ತೇನೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಭರವಸೆ ನೀಡಿದರು.

ಮೈಸೂರು ಕೆ.ಆರ್.ಮೊಹಲ್ಲಾ ತ್ಯಾಗರಾಜ ರಸ್ತೆಯ ಕಲ್ಯಾಣ ಭವನದಲ್ಲಿ ಬ್ರಾಹ್ಮಣ ಧರ್ಮ ಸಹಾಯ ಸಭಾ ವತಿಯಿಂದ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ, ಮಾತನಾಡಿದರು.

ಕಳೆದ 30 ವರ್ಷಗಳಿಂದ ಬಿಜೆಪಿಯಲ್ಲಿ ವಿವಿಧ ಹುದ್ದೆಗಳಲ್ಲಿ ತೊಡಗಿಸಿಕೊಂಡಿದ್ದೆ. ನನ್ನಂತಹ ಸಾಮಾನ್ಯ ಕಾರ್ಯಕರ್ತನನ್ನು ಗುರುತಿಸಿ ಪಕ್ಷ ಟಿಕೆಟ್ ನೀಡಿತು. ಈ ಬಾರಿ ಕೆ.ಆರ್.ಕ್ಷೇತ್ರ ಮತದಾರರು ಜಾತಿ, ಮತಗಳನ್ನು ಮೀರಿ ನನ್ನನ್ನು ಗೆಲ್ಲಿಸಿರುವುದಕ್ಕೆ ಆಭಾರಿಯಾಗಿದ್ದೇನೆ ಎಂದು ಅಭಿಪ್ರಾಯಪಟ್ಟರು.

ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಹಲವು ಹೊಸ ಮುಖಗಳಿಗೆ ಬಿಜೆಪಿ ಹೈಕಮಾಂಡ್ ಅವಕಾಶ ಮಾಡಿಕೊಟ್ಟಿತು. ಅವರಲ್ಲಿ ನಾನೂ ಒಬ್ಬ. ಕ್ಷೇತ್ರದ ಮತದಾರರು ನನ್ನನ್ನು ಬೆಂಬಲಿಸಿ ಗೆಲ್ಲಿಸಿರುವುದಕ್ಕೆ ಸದ ಚಿರಾಋಣಿ. ನಾನು ಸದ್ಯದಲ್ಲೇ ಶಾಸಕರ ಕಚೇರಿ ಆರಂಭಿಸಿ, ಕ್ಷೇತ್ರದ ಜನರ ಸಮಸ್ಯೆ ಆಲಿಸುತ್ತೇನೆ. ನೀವು, ನಿಮ್ಮ ಸಮಸ್ಯೆಗಳನ್ನು ಈ ಕಚೇರಿಗೆ ಆಗಮಿಸಿ ತಿಳಿಸಿದರೆ, ಬಗೆಹರಿಸಲು ಪ್ರಯತ್ನಿಸುತ್ತೇನೆ ಎಂದು ಶಾಸಕ ಶ್ರೀವತ್ಸ ಭರವಸೆ ನೀಡಿದರು.



ಈ ಚುನಾವಣೆಯಲ್ಲಿ ಬ್ರಾಹ್ಮಣ ಸಮುದಾಯ ಸೇರಿದಂತೆ ಎಲ್ಲಾ ಸಮುದಾಯದ ಜನರು ನನಗೆ ಮತ ಚಲಾಯಿಸಿದ ಪರಿಣಾಮ ನಿಮ್ಮ ಮುಂದೆ ಇಂದು ಶಾಸಕನಾಗಿ ಬಂದಿದ್ದೇನೆ. ಚುನಾವಣೆ ಸಂದರ್ಭದಲ್ಲಿ ಭಿನ್ನ ಮಾತುಗಳು ಕೇಳಿಬಂದರೂ ಚುನಾವಣೆ ವೇಳೆಗೆ ಕ್ಷೇತ್ರದ ಮತದಾರರು ಒಗ್ಗಟ್ಟಾಗಿ ನನಗೆ ಮತ ಚಲಾಯಿಸಿದ್ದಾರೆ ಎಂದು ಗೆಲುವಿನ ಗುಟ್ಟನ್ನು ಬಿಚ್ಚಿಟ್ಟರು.

ಕ್ಷೇತ್ರದಲ್ಲಿ ಹಲವು ಸಮಸ್ಯೆಗಳ ಕುರಿತು ಕೆಲವರು ನನ್ನ ಗಮನಕ್ಕೆ ತರುತ್ತಿದ್ದಾರೆ. ಮೂಲಸೌಕರ್ಯ, ಯುಜಿಡಿ ಸಮಸ್ಯೆ ಸೇರಿದಂತೆ ಇತರೆ ಸಮಸ್ಯೆಗಳ ಬಗ್ಗೆ ಬರುವ ದಿನಗಳಲ್ಲಿ ಗಮನಹರಿಸಿ, ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತೇನೆ ಎಂದು ತಿಳಿಸಿದರು.

ಬ್ರಾಹ್ಮಣ ಧರ್ಮ ಸಹಾಯ ಸಭಾದ ಅಧ್ಯಕ್ಷ ಎನ್.ಶ್ರೀನಿವಾಸ್, ಉಪಾಧ್ಯಕ್ಷರಾದ ಎಂ.ಮಂಜುನಾಥ, ಹೆಚ್.ಕೆ. ಅನಂತ, ಕಾರ್ಯದರ್ಶಿ ಎಲ್.ವೆಂಕಟಕೃಷ್ಣಶಾಸ್ತ್ರಿ, ಖಜಾಂಚಿ ಹೆಚ್.ಅಶ್ವಥ್‌ನಾರಾಯಣ, ಜಂಟಿ ಕಾರ್ಯದರ್ಶಿ ಎನ್.ವೈ ವಿಶ್ವನಾಥ್, ಎ.ಆರ್.ವೆಂಕಟೇಶ್, ನಿರ್ದೇಶಕರಾದ ಆರ್.ಅನಂತರಾಮು, ಕೆ.ಜಿ.ಸತೀಶ್, ಎಂ.ಎಸ್. ರವೀಂದ್ರ, ಹೆಚ್.ಎಸ್.ರವೀಂದ್ರ, ಹೆಚ್.ಎಸ್.ರವೀಂದ್ರ, ಪ್ರೊ.ಕೆ.ಎಸ್. ಹಿರಿಯಣ್ಣ, ಎಸ್.ಕೆ.ಜಗದೀಶ್, ಆರ್.ಎಲ್.ಜಗದೀಶ್, ಡಾ.ಡಿ.ಎಸ್.ವಿದ್ಯಾಶಂಕರ್, ಕೆ.ಜಿ.ಶಂಕರ ನಾರಾಯಣ ಶಾಸ್ತ್ರಿ, ವಿ.ಸುದರ್ಶನ ಸೇರಿದಂತೆ ಇತರರಿದ್ದರು.



ಹುಟ್ಟುಹಬ್ಬ ಆಚರಿಸಿಕೊಂಡ ಗ್ರಾಪಂ ಮಾಜಿ ಸದಸ್ಯ ಹಾಗೂ ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ ಅವರನ್ನು ಐಎನ್‌ಬಿಸಿಡಬ್ಲ್ಯೂಎಫ್ ಜಿಲ್ಲಾ ಉಪಾಧ್ಯಕ್ಷ ಚೆಟ್ಟಿಹುಂಡಿ ಸುನಿಲ್, ರಾಜ್ಯ ಉಪಾಧ್ಯಕ್ಷ ನಾಗರಾಜ್, ಹುಯಿಲಾಳು ಮಂಜುನಾಥ ಪ್ರಸಾದ್, ಪಿಡಿಓ ಶಿವಣ್ಣ, ಭರತ್ ಕಡಕೊಳ, ಪುಟ್ಟೇಗೌಡ, ಮಂಟಗಳ್ಳಿ ಚಾಮರಾಜ, ಶ್ರೀರಾಂಪುರ ಪುಟ್ಟರಾಜು, ಕುಮಾರಬೀಡು ನಾರಾಯಣ, ವಿಕಿ ಜಾನ್ ಸುನಿಲ್ ಆತ್ಮೀಯವಾಗಿ ಅಭಿನಂದಿಸಿ, ಶುಭ ಕೋರಿದರು.

ಜೂ.10, ರೈಲ್ವೆ ಪೆನ್ಷನರ್ ಅಸೋಸಿಯೇಷನ್ ಸಭೆ

ಮೈಸೂರು, ಜೂ. 5– ರೈಲ್ವೆ ಪೆನ್ಷನರ್ ವೆಲ್‌ಫೇರ್ ಅಸೋಸಿಯೇಷನ್ ಮಾಸಿಕ ಸಭೆ ಜೂನ್ 10ರಂದು ಬೆಳಗ್ಗೆ 11.30ಕ್ಕೆ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಸಂಘದ ಕಚೇರಿಯಲ್ಲಿ ಸಂಘದ ಅಧ್ಯಕ್ಷ ಪಾರ್ಥಸಾರಥಿ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಸುನೀಲ್‌ಕುಮಾರ್ ಜೈನ್ ತಿಳಿಸಿದ್ದಾರೆ.

ನಾಳೆಯಿಂದ ಪ್ರವಚನ

ಮೈಸೂರು,ಜೂ.5–ಕೃಷ್ಣಮೂರ್ತಿಪುರಂನ ಶ್ರೀ ರಾಘವೇಂದ್ರಸ್ವಾಮಿ ಬೃಂದಾವನದಲ್ಲಿ ಸ್ವಾಮಿಗಳ 76ನೇ ಬೃಂದಾವನ ಪ್ರತಿಷ್ಠಾಪನಾ ವರ್ಧಂತ್ಯುತ್ಸವ ಜ್ಞಾನಸತ್ರ ಅಂಗವಾಗಿ ತತ್ವಜ್ಞಾನ ಮಂದಿರ, ಶ್ರೀ ರಾಘವೇಂದ್ರ ಸ್ವಾಮಿ ಮಠದ ಆವರಣದಲ್ಲಿ ಜೂನ್ 7ರಿಂದ 11ರವರೆಗೆ ಪ್ರತಿದಿನ ಸಂಜೆ 6ರಿಂದ ಬೆಂಗಳೂರು ಶ್ರೀ ಪ್ರಭಂಜನಾಚಾರ್ಯ ವ್ಯಾಸನಕೆರೆ ತಂಡದ ವಿದ್ಯಾವಾಚಸ್ಪತಿ ಅವರಿಂದ 'ಶ್ರೀ ಮನ್ಮಹಾಭಾರತ' ಪ್ರವಚನ ಏರ್ಪಡಿಸಲಾಗಿದೆ.

ಗೋಹತ್ಯೆ ನಿಷೇಧ ಕಾಯ್ದೆ ವಿಚಾರ ಪ್ರಸ್ತಾಪ

ಸಚಿವ ವೆಂಕಟೇಶ್‌ಗೆ ದೇಶದ ಸಂಸ್ಕೃತಿ ಅರಿವಿಲ್ಲ

● ಶಾಸಕ ಬಿ.ವೈ.ವಿಜಯೇಂದ್ರ ಕಿಡಿನುಡಿ ● ಗ್ಯಾರಂಟಿ ಕಂಡಿಷನ್ ವಿರುದ್ಧ ಹೋರಾಟ



ಮೈಸೂರು, ಜೂ.5(ಎಂಕೆ)– ಗೋಹತ್ಯೆ ನಿಷೇಧ ಕಾಯ್ದೆ ವಿಚಾರದಲ್ಲಿ ಸಚಿವ ಕೆ.ವೆಂಕಟೇಶ್ ಅವರ ಹೇಳಿಕೆ ನೋಡಿದರೆ ಅವರಿಗೆ ದೇಶದ ಸಂಸ್ಕೃತಿ ಅರಿವು, ಕಾಳಜಿ ಇಲ್ಲದಂತೆ ಕಾಣುತ್ತದೆ. ಈ ರೀತಿಯ ಉಡಾಫೆ ಹೇಳಿಕೆಯನ್ನು ರಾಜ್ಯದ ಜನರು ನಿರೀಕ್ಷೆ ಮಾಡಿರಲಿಲ್ಲ ಎಂದು ಶಾಸಕ ಬಿ.ವೈ.ವಿಜಯೇಂದ್ರ ಕಿಡಿಕಾರಿದರು.

ಮೈಸೂರಿನಲ್ಲಿ ಸೋಮವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ರಾಜ್ಯದಲ್ಲಿ ಅಶಾಂತಿ ಸೃಷ್ಟಿಯಾಗುವ ರೀತಿ ನಡೆದುಕೊಳ್ಳುತ್ತಿದ್ದಾರೆ. ನಮ್ಮ ಹಿಂದೂ ಸಂಸ್ಕೃತಿ, ಪರಂಪರೆ ಬಗ್ಗೆ ಗೊತ್ತಿದ್ದರೆ ಈ ರೀತಿ ಹೇಳಿಕೆ ಕೊಡುತ್ತಿರಲಿಲ್ಲ. ನಾಳೆಯಿಂದಲೇ ಬಿಜೆಪಿ ಕಾರ್ಯಕರ್ತರು ಜಿಲ್ಲಾ ಮಟ್ಟದಲ್ಲಿ ಹೋರಾಟ ನಡೆಸಲಿದ್ದಾರೆ. ಜನ ಸಾಮಾನ್ಯರು ಕೂಡ ಬೀದಿಗಿಳಿದು ಹೋರಾಟ ಮಾಡಲಿದ್ದಾರೆ ಎಂದು ವಿಜಯೇಂದ್ರ ಹೇಳಿದರು.

ಕಂಡಿಷನ್ ಹಾಕಬಾರದು: ಕಾಂಗ್ರೆಸ್ ಗ್ಯಾರಂಟಿ ಯೋಜನೆ ಜಾರಿ ಕುರಿತು ಪ್ರತಿಕ್ರಿಯಿಸಿ, ಕಾಂಗ್ರೆಸ್ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿದ್ದು, ಮುಖ್ಯಮಂತ್ರಿಯವರೂ ಕೂಡ ಈಗಾಗಲೇ ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ. ಜೊತೆಗೆ ಹಲವು ಷರತ್ತುಗಳನ್ನು ವಿಧಿಸುತ್ತಿದ್ದಾರೆ. ಗ್ಯಾರಂಟಿ ಯೋಜನೆಗಳಿಗೆ ಎಷ್ಟು ಹಣ ಬೇಕಾಗುತ್ತದೆ. ಅದಕ್ಕೆ ಹಣವನ್ನು ಹೇಗೆ ಹೊಂದಾಣಿಕೆ ಮಾಡುತ್ತಾರೆ. ಹೊಸ ತೆರಿಗೆ ಹಾಕುತ್ತಾರಾ ಅಥವಾ ಸಾಲ ಮಾಡುತ್ತಾರಾ ಎಂಬುದೆಲ್ಲವನ್ನೂ ಬಿಜೆಪಿ ಗಮನಿಸುತ್ತಿದೆ. ಕಾಂಗ್ರೆಸ್ ಕೊಟ್ಟ ಭರವಸೆ ಯಥಾವತ್ತಾಗಿ ಜನರಿಗೆ ತಲುಪಬೇಕು. ಇದಕ್ಕೆ ಯಾವುದೇ ಕಂಡಿಷನ್ ಹಾಕಬಾರದು. ಈಗಾಗಲೇ ವಿದ್ಯುತ್ ದರ ಹೆಚ್ಚಳ ಮಾಡಿದ್ದಾರೆ. ಗ್ಯಾರಂಟಿ ಜಾರಿ ಮಾಡಲು ಹೆಚ್ಚೆಚ್ಚು ತೆರಿಗೆ ವಿಧಿಸುತ್ತಿದ್ದಾರೆ. ಇದೆಲ್ಲವನ್ನೂ ಬಿಜೆಪಿ ಕಾದು ನೋಡುತ್ತಿದ್ದು, ಜವಾಬ್ದಾರಿಯುತ ಪ್ರತಿಪಕ್ಷವಾಗಿ ಹೋರಾಟ ಮಾಡುತ್ತೇವೆ ಎಂದರು.

ತನಿಖೆಯಾಗಲಿ: ಪಿಎಸ್‌ಐ ಹಗರಣದಲ್ಲಿ ನನ್ನ ಹೆಸರನ್ನು ಕೆಲ ಕಾಂಗ್ರೆಸ್ ಮುಖಂಡರು ತೇಲಿ ಬಿಟ್ಟಿದ್ದಾರೆ. ಈಗ ಅವರದ್ದೇ ಸರ್ಕಾರವಿದ್ದು, ಯಾವುದೇ ವಿಚಾರವಾಗಿ ಬೇಕಾದರೂ ತನಿಖೆ ಮಾಡಲಿ. ಆದರೆ, ತನಿಖೆ ಪಾರದರ್ಶಕವಾಗಿರಬೇಕು. ವಿರೋಧ ಪಕ್ಷವನ್ನು ಬಗ್ಗು ಬಡಿಯಬೇಕೆಂಬ ಸೇಡಿನ ಮನೋಭಾವನೆಯಿಂದ ತನಿಖೆ ಮಾಡುವುದು ಸರಿಯಲ್ಲ. ಪಾರದರ್ಶಕವಾಗಿ ತನಿಖೆ ಮಾಡಿದರೆ ಸ್ವಾಗತ ಎಂದರಲ್ಲದೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಅತೀ ಹೆಚ್ಚು ಸ್ಥಾನ ಗೆಲ್ಲುವ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದರು.

ಮಹಿಳಾ ಕುಸ್ತಿ ಪಟುಗಳಿಗೆ ಲೈಂಗಿಕ ಕಿರುಕುಳ ಆರೋಪ

ಸಂಸದ ಬ್ರಿಜ್ ಭೂಷಣ್ ಬಂಧನಕ್ಕೆ ಆಗ್ರಹ



ಮೈಸೂರು,ಜೂ.5(ಪಿಎಂ)–ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಹಾಗೂ ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಕಾನೂನು ಕ್ರಮಕ್ಕೆ ಒತ್ತಾಯಿಸಿ ಜನತಂತ್ರ ಜಾಗೃತಿ ವೇದಿಕೆ (ಹಲವು ಜನಮುಖಿ ಸಂಘಟನೆಗಳ ಒಕ್ಕೂಟ) ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ಈ ಕೂಡಲೇ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿ, ಬಂಧಿಸಬೇಕು. ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಒಲಿಂಪಿಕ್ ಪದಕ ವಿಜೇತರು, ವಿಶ್ವ ಚಾಂಪಿಯನ್ ಕುಸ್ತಿ ಪಟುಗಳು ಸೇರಿದಂತೆ ದೇಶದ ಗೌರವಾನ್ವಿತ ಕ್ರೀಡಾಪಟುಗಳು ಕಳೆದ ಹಲವಾರು ದಿನಗಳಿಂದ ನವದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. ಸುಪ್ರಿಂ ಕೋರ್ಟ್ ಮಧ್ಯ ಪ್ರವೇಶಿಸಿದ ನಂತರವಷ್ಟೇ ಬಿಜೆಪಿ ಸಂಸದ ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಆರೋಪಿ ವಿರುದ್ಧ ಕಾನೂನು ಕ್ರಮ ಜರುಗಿಸಬೇಕಾದ ಕೇಂದ್ರ ಸರ್ಕಾರ, ನ್ಯಾಯಪರ ಹೋರಾಟ ಹತ್ತಿಕ್ಕಲು ಅನಾಗರಿಕ ಕ್ರಮಗಳನ್ನು ಅನುಸರಿಸುತ್ತಿದೆ ಎಂದು ದೂರಿದರು.

ಬಳಿಕ ಸ್ಥಳಕ್ಕಾಗಮಿಸಿದ ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಂ ಅವರಿಗೆ ಮನವಿ ಸಲ್ಲಿಸಿ, ಪ್ರತಿಭಟನೆ ಅಂತ್ಯಗೊಳಿಸಲಾಯಿತು. ಇದಕ್ಕೂ ಮುನ್ನ ರಾಮಸ್ವಾಮಿ ವೃತ್ತದಲ್ಲಿ ಸಮಾವೇಶಗೊಂಡು, ಪ್ರತಿಭಟನಾ ಮೆರವಣಿಗೆ ಮೂಲಕ ಕೃಷ್ಣರಾಜ ಬುಲೇವಾರ್ಡ್ ಮಾರ್ಗವಾಗಿ ಜಿಲ್ಲಾಧಿಕಾರಿ ಕಚೇರಿ ಎದುರು ತೆರಳಿತು. ಮುಖಂಡರಾದ ಉಗ್ರನರಸಿಂಹೇಗೌಡ, ಪ್ರೊ.ಕಾಳಚನ್ನೇಗೌಡ, ಪ್ರೊ.ಸಬಿತಾ ಭೂಮಿಗೌಡ, ನಾ.ದಿವಾಕರ್, ಸೀಮಾ, ಸಂಧ್ಯಾ, ಕೆ.ಆರ್. ಗೋಪಾಲಕೃಷ್ಣ, ಎಐಕೆಕೆಎಂಎಸ್ ಮುಖಂಡ ಬಸವರಾಜು, ರಂಗಕರ್ಮಿ ಕೃಷ್ಣ ಪ್ರಸಾದ್, ದಸಂಸ ಮುಖಂಡರಾದ ಚೋರನಹಳ್ಳಿ ಶಿವಣ್ಣ, ಆಲಗೂಡು ಶಿವಕುಮಾರ್, ಎಐಡಿಎಸ್‌ಓ ಮುಖಂಡರಾದ ಚಂದ್ರಕಲಾ, ಎಐಯುಟಿಯುಸಿ ಪದಾಧಿಕಾರಿ ಉಮಾದೇವಿ, ರೈತ ಸಂಘದ ಮುಖಂಡರಾದ ಮರಂಕಯ್ಯ, ಹೊಸಕೋಟೆ ಬಸವರಾಜು, ಹೊಸೂರು ಕುಮಾರ್, ಮಂಡಕಳ್ಳಿ ಮಹೇಶ್, ರಾಘವೇಂದ್ರ, ಚಂದ್ರಶೇಖರ್ ಸೇರಿದಂತೆ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನಕ್ಕರೆ ಅದೇ ಸ್ವರ್ಗ

ನಾಣಿ : ಏನಯ್ಯ ಗುಂಡ ಸಿಗರೇಟ್ ಸೇದಿದರೆ ಕ್ಯಾನ್ಸರ್ ಬರುತ್ತದಂತೆ ಹೌದಾ?

ಗುಂಡ : ಅದೇನೋ ನನಗೆ ಗೊತ್ತಿಲ್ಲಪ್ಪ. ನಾನು ಸಿಗರೇಟ್ ಸೇದಿದಾಗೆಲ್ಲಾ ಬರೀ ಹೊಗೆ ಬರುತ್ತೆ ಅಷ್ಟೇ.

ಮೈಸೂರು ಮಿತ್ರ

ಮಂಗಳವಾರ, 6 ಜೂನ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಕ್ಷಮೆ ಮತ್ತು ಅಹಂ ಎರಡೂ ಚಿಕ್ಕ ಪದಗಳು. ಆದರೆ ಕ್ಷಮೆ ಎಷ್ಟೋ ಸಂಬಂಧಗಳನ್ನು ಉಳಿಸಿದರೆ, ಅಹಂ ಎಷ್ಟೋ ಸಂಬಂಧಗಳನ್ನು ಹಾಳು ಮಾಡುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮೊದಲು ಆಳಾಗಿ ದುಡಿ, ನಂತರ ಅರಸನಾಗಿ ಬಾಳಬಹುದು.

ನಿಮ್ಮ ಪತ್ರಗಳು

ಮೈಸೂರಲ್ಲಿ ಇಂತಹವರ ಸಂತತಿ ಹೆಚ್ಚಲಿ!

ಮಾನ್ಯರೆ,

ಮೈಸೂರಲ್ಲಿ ಇತ್ತೀಚಿನ ಕೆಲ ವರುಷದಿಂದ ಸಾವಿರಾರು ಮರಗಳು ಬೆಳೆದಿವೆ.



ಸೊಂಪಾಗಿ ಬೆಳೆದ ಮರಗಳು, ಇನ್ನೂ ಆಳೆತ್ತರದಲ್ಲಿ ಹಸಿರಿನಿಂದ ಕಂಗೊಳಿಸುತ್ತಿರುವ ಮರಗಳ ಕಂಡಾಗ ನನಗೆ ಥಟ್ಟನೆ ಜ್ಞಾಪಕಕ್ಕೆ ಬರುವುದು ಪರಿಸರ ಪ್ರೇಮಿ, ಸಾಮಾಜಿಕ ಕಾರ್ಯಕರ್ತ ಹಾಗೂ ಮೈಸೂರು ಅಭಿಮಾನಿ **ರಘುಲಾಲ್ ಕಂಪನಿಯ ರಾಘವನ್**.

ನಾನು ಹಲವು ವರ್ಷಗಳಿಂದ ಅವರ ಕಾರ್ಯಕ್ರಮಗಳ ನೋಡುತ್ತಾ ಬಂದಿದ್ದೇನೆ. ಹುಣಸೂರು ರಸ್ತೆಗೆ ಹೊಂದಿಕೊಂಡಂತೆ ಜಯಲಕ್ಷ್ಮೀಪುರಂನ ಉದ್ಯಾನದಲ್ಲಿ ಬೆಳೆದಿರುವ ಮರಗಳನ್ನು ನೋಡಿದಾಗಲೆಲ್ಲಾ ರಾಘವನ್ ಅವರ ನೆನಪಾಗುತ್ತದೆ. ಇಲ್ಲಿ ಮರಗಳು ಸಮೃದ್ಧವಾಗಿ ಬೆಳೆದು ನಿಂತಿವೆ. ಅದಕ್ಕೆ ರಾಘವನ್ ಅವರ ರಕ್ಷಾ ಕವಚವೇ (ಟ್ರೀಗಾರ್ಡ್) ಕಾರಣ. ಅವುಗಳು ಅಡಿಗಳ ಗಾತ್ರವಾಗಿದ್ದರೂ ನಮ್ಮ ಅರಣ್ಯ ಇಲಾಖೆ, ನಗರಪಾಲಿಕೆ ಇಲ್ಲವೇ ಮುಡಾ ಅಧಿಕಾರಿಗಳು ಟ್ರೀಗಾರ್ಡ್‌ನಿಂದ ಅವುಗಳ ಮುಕ್ತ ಮಾಡುವ ಕೆಲಸ ಮಾಡುತ್ತಿಲ್ಲ.

ಎಲ್ಲೇ ಸಸಿ ನೆಡಲಿ ರಾಘವನ್ ಅವರ ಸಹಾಯ, ಸಹಕಾರವಿದೆ. ಅವುಗಳ ರಕ್ಷಣೆಗೆ ಲಕ್ಷಾಂತರ ರೂ. ಖರ್ಚು ಮಾಡಿ ಟ್ರೀಗಾರ್ಡ್ ಕೊಡಿಸಿದ್ದಾರೆ. ಸಸಿ ನೆಡುವುದರಿಂದ ಹಿಡಿದು ಅವುಗಳ ಸಂರಕ್ಷಣೆ ಜೊತೆಗೆ ಬೇಸಿಗೆಯಲ್ಲಿ ಅವುಗಳ ಪೋಷಣೆ ಹೊಣೆಯನ್ನು ಅವರೇ ಹೊತ್ತು, ನಿರ್ವಹಿಸಿದ್ದಾರೆ.

ಇದರ ಫಲವಾಗಿ ಚಾಮುಂಡಿಬೆಟ್ಟದ ತಪ್ಪಲು, ಚಾಮರಾಜ ವಿಧಾನಸಭಾ ಕ್ಷೇತ್ರದ ಬಹುತೇಕ ಎಲ್ಲಾ ಬಡಾವಣೆಗಳಲ್ಲಿ ರಾಘವನ್ ಅವರ ಸಸ್ಯ ಸಂರಕ್ಷಣೆ ಸತ್ಕಾರ್ಯ ನಡೆದೇ ಇದೆ. ಕೆ.ಆರ್.ಎಸ್. ರಸ್ತೆಯಲ್ಲಿ ಸ್ಯಾನಿಟೋರಿಯಂ ಮುಂದೆ ಬೆಳೆದಿರುವ ಮರಗಳ ಕಂಡರೆ ಮನಸ್ಸು ರಾಘವನ್ ಅವರಿಗೆ ಕೃತಜ್ಞತೆ ಸಲ್ಲಿಸಲು ಪ್ರೇರೇಪಿಸುತ್ತದೆ.

ನಮ್ಮ ನಗರಪಾಲಿಕೆ, ನಗರಾಭಿವೃದ್ಧಿ ಪ್ರಾಧಿಕಾರ, ಬಹಳ ಮುಖ್ಯವಾಗಿ ಅರಣ್ಯ ಇಲಾಖೆ ರಾಘವನ್ ಅವರಿಗೆ ಒಂದಲ್ಲ ಒಂದು ರೀತಿ ಕೃತಜ್ಞತೆ ಸಲ್ಲಿಸಲೇ ಬೇಕಾಗುತ್ತದೆ. ಅದೇಕೋ ಈ ಅಧಿಕಾರಿಗಳು ರಾಘವನ್ ಅವರನ್ನು ಯಾವುದೇ ಕಾರ್ಯಕ್ರಮಗಳಿಗೆ ಆಹ್ವಾನಿಸುವುದಾಗಲೀ, ಅವರಿಗೆ ಸೂಕ್ತ ಪುರಸ್ಕಾರ ನೀಡಿದ್ದಾಗಲೀ ನಾನು ನೋಡಿಯೇ ಇಲ್ಲ.

ನನಗೆ ಗೊತ್ತಿರುವ ಹಾಗೆ ರಾಘವನ್‌ರವರು ಕೋವಿಡ್ ಹಾವಳಿ ವೇಳೆ ಮೈಸೂರು ಜಿಲ್ಲಾಡಳಿತಕ್ಕೆ ನಾನಾ ರೀತಿಯಲ್ಲಿ ನೆರವಾದರು. ಜೊತೆಗೆ ಬೀದಿ ಬದಿ ವ್ಯಾಪಾರ ಮಾಡುವ, ಸಂಕಷ್ಟದಲ್ಲಿದ್ದ ವ್ಯಾಪಾರಿಗಳಿಗೆ ವಿಶೇಷ ವಿನ್ಯಾಸದ ತಳ್ಳು ಗಾಡಿಗಳನ್ನು ಕೊಡುಗೆಯಾಗಿ ನೀಡಿದರು. ಆ ಮೂಲಕ ಅವರ ಬದುಕಿಗೆ ನೆರವಾದರು.

ಅಧಿಕಾರಿಗಳು ಇಂತಹವರನ್ನು ಮರೆತರೂ ನಮ್ಮ ಜನಪ್ರತಿನಿಧಿಗಳು ಸಮಾಜದ ಆಸ್ತಿಯಂತಿರುವ ಇವರನ್ನು ಸತ್ಕರಿಸುವುದು ಒಳ್ಳೆಯದು. ಇಂತಹವರ ಸಂತತಿ ಮೈಸೂರಲ್ಲಿ ಹೆಚ್ಚಲಿ ಎಂಬುದು ನಮ್ಮ ಆಶಯ.

– ಮಲ್ಲೇಶ್, ಗೋಕುಲಂ ಮೈಸೂರು

ಉಚಿತ ಭಾಗ್ಯಗಳ ಬದಲು ಸರ್ಕಾರಿ ಶಾಲೆಗಳ ಉನ್ನತೀಕರಿಸಲಿ..!

ಮಾನ್ಯರೆ,

ರಾಜ್ಯ ಸರ್ಕಾರವು ಸರ್ಕಾರಿ ಶಾಲೆಗಳಿಗೆ ಉತ್ತಮ ಮೂಲ ಸೌಕರ್ಯಗಳನ್ನು ನೀಡಿ ಉನ್ನತೀಕರಿಸಬೇಕಿದೆ. ಇಂದಿನ ದಿನಗಳಲ್ಲಿ ಸರ್ಕಾರಿ ಶಾಲೆಗಳೆಂದರೆ ಒಂದು ರೀತಿಯ ಅಸಡ್ಡೆ ಮತ್ತು ಮೂಗು ಮುರಿಯುವ ಮನೋಭಾವವಿದೆ. ಖಾಸಗಿ ಶಾಲೆಗಳಿಗೆ ಲಕ್ಷಾಂತರ ರೂಪಾಯಿಗಳ ಡೊನೇಷನ್ ಕೊಟ್ಟು ಮಕ್ಕಳ ಸೇರಿಸಲು ಪೋಷಕರು ಪರದಾಡುತ್ತಿದ್ದಾರೆ, ಸರ್ಕಾರಿ ಶಾಲೆಗಳು ಹಾಳು ಬಿದ್ದಿದ್ದು, ಸುಣ್ಣ ಬಣ್ಣ ಕಂಡು ಅದೆಷ್ಟೋ ವರ್ಷಗಳಾಗಿವೆ. ಹಳೆಯ ಕಟ್ಟಡಗಳಲ್ಲಿ ಜೀವ ಭಯದಿಂದಲೇ ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆಯುವಂತಾಗಿದೆ. ಕೆಲವು ಶಾಲೆಗಳು ವಿದ್ಯಾರ್ಥಿಗಳಿಲ್ಲದೆ ಭಣಗುಡುತ್ತಿವೆ. ಸರ್ಕಾರಿ ಶಾಲೆಗಳಿಗೆ ಸ್ಪರ್ಧಾತ್ಮಕ ಸಾಮಾನ್ಯ ಪರೀಕ್ಷೆ ಮುಖಾಂತರ ಶಿಕ್ಷಕರನ್ನು ಆಯ್ಕೆ ಮಾಡಿಕೊಳ್ಳಲಾಗುತ್ತಿದೆ. ಆದರೂ ಕೆಲವು ಸರ್ಕಾರಿ ಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಫಲಿತಾಂಶವನ್ನು ಗಮನಿಸಿದಾಗ ಹೇಳಿಕೊಳ್ಳುವಷ್ಟು ಸಾಧನೆ ಇರುವುದಿಲ್ಲ. ಉತ್ತಮ ಅನುಭವ, ಶಿಕ್ಷಕರಿದ್ದರು ಕೂಡ ಫಲಿತಾಂಶ ಮಾತ್ರ ಖಾಸಗಿ ಶಾಲೆಗಳಿಗಿಂತ ಕಡಿಮೆ ಇರುತ್ತದೆ. ಯಾವಾಗಲೂ ಖಾಸಗಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಫಲಿತಾಂಶ ಅತ್ಯುತ್ತಮ ಮಟ್ಟದಲ್ಲಿರುತ್ತದೆ, ಸರ್ಕಾರಿ ಶಾಲೆಗಳ ಶಿಕ್ಷಕರು ಕೈ ತುಂಬಾ ಸಂಬಳ ಪಡೆದರೂ ಈ ಶಾಲೆಗಳಲ್ಲಿ ಫಲಿತಾಂಶ ಮಾತ್ರ ಕಡಿಮೆ ಇರುತ್ತದೆ. ಕೆಲವು ಸರ್ಕಾರಿ ಶಾಲೆಗಳು ಈಗಾಗಲೇ ಮಕ್ಕಳಿಲ್ಲದೇ ಮುಚ್ಚಿವೆ. ಇಂತಹ ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಹೆಚ್ಚು ಗಮನಹರಿಸಬೇಕು. ಗ್ರಾಮೀಣ ಭಾಗದ ವಿದ್ಯಾರ್ಥಿಗಳು, ಸರ್ಕಾರಿ ಶಾಲೆಯಲ್ಲೇ ಶಿಕ್ಷಣವನ್ನು ಪಡೆಯುತ್ತಿರುವುದರಿಂದ ಸರ್ಕಾರ ಇತ್ತ ಹೆಚ್ಚಿನ ಗಮನಹರಿಸಿ, ಎಲ್ಲಾ ರೀತಿಯ ಸೌಕರ್ಯವನ್ನು ಇಂತಹ ಶಾಲೆಗಳಿಗೆ ನೀಡಿ, ಮಕ್ಕಳ ಹಾಜರಾತಿ ಹೆಚ್ಚಾಗುವಂತೆ ಕ್ರಮ ಕೈಗೊಳ್ಳಬೇಕು, ಗುಣಾತ್ಮಕ ಶಿಕ್ಷಣವನ್ನು ನೀಡಿದರೆ, ಸರ್ಕಾರಿ ಶಾಲೆಗಳು ಉಳಿಯುತ್ತವೆ, ಶಾಲೆಗಳು ಆಕರ್ಷಣೀಯವಾಗಿದ್ದರೆ ವಿದ್ಯಾರ್ಥಿಗಳು ದಾಖಲಾಗುತ್ತಾರೆ.

ಈ ಸರ್ಕಾರವು ಉಚಿತ ಮತ್ತು ಗ್ಯಾರಂಟಿ ಭಾಗ್ಯಗಳನ್ನು ನೀಡುವುದರ ಬದಲು ಶಾಲೆಗಳ ಉನ್ನತಿಕರಣಕ್ಕೆ ಹೆಚ್ಚು ಗಮನಹರಿಸಿದ್ದರೆ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ದೊರೆಯುತ್ತಿತ್ತು. ಇದರಿಂದ ಎಲ್ಲರ ಬಾಳು ಬೆಳಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಎಲ್ಲಾ ಸಮಸ್ಯೆಗಳಿಗೂ ಗುಣಾತ್ಮಕ ಶಿಕ್ಷಣ ಒಂದೇ ಪರಿಹಾರ ಎಂಬುದನ್ನು ಯಾರು ಕೂಡ ಮರೆಯಬಾರದು..

– ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾಲೂಕು.

ಆಸೆ, ಆಮಿಷಗಳಿಗೆ ಮತವನ್ನು ಅಡವಿಟ್ಟ ಮತದಾರ!

ಮಾನ್ಯರೆ,

ಅಂತೂ 2023ರ ವಿಧಾನಸಭಾ ಚುನಾವಣೆ ಮುಗಿದು ಹೋಯ್ತು. ಎಲ್ಲಾ ಪಕ್ಷಗಳು ಹಲವಾರು ಆಸೆ ಆಮಿಷ, ಹಣ ಹಂಚುವ ಮೂಲಕ ಭ್ರಷ್ಟಾಚಾರದ ಎಲ್ಲೆಯೂ ಮೀರಿದೆ. ಚುನಾವಣಾಧಿಕಾರಿಗಳು ಹಲವಾರು ಕೋಟಿ ರೂ.ಗಳನ್ನು, ಗೃಹೋಪಯೋಗಿ ವಸ್ತುಗಳನ್ನು ವಶಪಡಿಸಿಕೊಂಡಿರುವುದರ ಮಾಹಿತಿಯನ್ನು ದಿನನಿತ್ಯ ಪತ್ರಿಕೆಗಳಲ್ಲಿ ಓದಿದ್ದೇವೆ. ಅಂತೂ ಮತದಾರರು ಆಸೆ, ಆಮಿಷ, ಉಚಿತ ಗ್ಯಾರಂಟಿಯನ್ನು ನೀಡಿದ ಪಕ್ಷಕ್ಕೆ ತಮ್ಮ ಮತಗಳನ್ನು ಒತ್ತೆ ಇಟ್ಟಿರುವುದಂತೂ ಸ್ಪಷ್ಟವಾಗಿ ಗೋಚರವಾಗುತ್ತದೆ. ಸ್ವಾಭಿಮಾನಿ ಮತದಾರರನ್ನು ಭ್ರಷ್ಟಾಚಾರದ ಕೂಪಕ್ಕೆ ತಳ್ಳಿ ಭ್ರಷ್ಟ ಮತದಾರರನ್ನಾಗಿ ಮಾಡಿದ ಕೀರ್ತಿಯು ನಮ್ಮ ಘನ ಜನನಾಯಕರುಗಳಿಗೆ ಸಲ್ಲುತ್ತದೆ. ಏನೋ ಆದದ್ದೆಲ್ಲ ಆಗಿ ಹೋಗಿದೆ. ಚುನಾಯಿತ ಸರ್ಕಾರವು ಯಾವುದೇ ಷರತ್ತು ಇಲ್ಲದೆ ಘೋಷಣೆ ಮಾಡಿರುವ 5 ಗ್ಯಾರಂಟಿಗಳನ್ನು ಜಾರಿ ಮಾಡಬೇಕಾಗಿರುವುದು ಅವರ ಆದ್ಯ ಕರ್ತವ್ಯ.

– ಎನ್.ಆರ್. ವಿಜಯಕುಮಾರ್, ಮೈಸೂರು.



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಸಾಮಾಜಿಕ ಜಾಲವೆಂಬ ಜಗಳ ತಾಣಗಳು...


ಇದೊಂದು ಘಟನೆಯನ್ನು ನಿಮಗೆ ಹೇಳಲೇಬೇಕು. ನಾವೆಲ್ಲ ಪ್ರೈಮರಿ ಶಾಲೆಯ ವಿದ್ಯಾರ್ಥಿಗಳಾಗಿದ್ದಾಗ ಈಗಿನಂತೆ ಶಾಲಾ ಮಕ್ಕಳನ್ನು ಕರೆದುಕೊಂಡು ಹೋಗುವ ಆಟೋ, ವ್ಯಾನು, ಬಸ್ಸುಗಳು ಇನ್ನೂ ರೋಡಿಗಿಳಿಯದಿದ್ದ ಕಾಲ ಅದು. ಅಷ್ಟಕ್ಕೂ ಶಾಲೆ ಬಿಟ್ಟ ಮೇಲೆ ತಂದೆ–ತಾಯಿಗಳು ಗೇಟಿನ ಹತ್ತಿರ ನಿಂತು ಮಕ್ಕಳನ್ನು ಮನೆಗೆ ಕರೆದುಕೊಂಡು ಹೋಗುವ ಧಾವಂತಗಳು ಇರದಿದ್ದ ಕಾಲವದು. ಶಾಲೆ ಬಿಟ್ಟ ಮೇಲೆ ಹಳೇ ಸ್ಕೂಲ್ ಬ್ಯಾಗಿನ ದಾರಕ್ಕೊಂದು ಗಂಟು ಹಾಕಿ, ಬೆನ್ನಿಗಾನಿಸಿಕೊಂಡು ಎದೆಯ ಮುಂಭಾಗದ ಬ್ಯಾಗಿನ ದಾರಕ್ಕೆ ಕೈ ಸಿಕ್ಕಿಸಿಕೊಂಡು ಅವರವರ ಏರಿಯಾಗಳ ಮಕ್ಕಳು ಮಾತಾಡಿಕೊಂಡು ಮನೆ ಸೇರುತ್ತಿದ್ದರೆ ಬಾನಂಗಳದಲ್ಲಿ ಬೆಳ್ಳಕ್ಕಿಯ ಸಾಲು ಗೂಡಿನ ಕಡೆಗೆ ಹಾರುತ್ತಿದ್ದಂತೆ ಕಾಣುತ್ತಿತ್ತು.

ಇಂಥಾ ಹೊತ್ತಿನಲ್ಲಿ ಒಂದು ದಿನ, ನಮ್ಮ ಶಾಲೆಯ ಬಳಿ ಅದೊಂದು ವಿಚಿತ್ರವಾದ ಘಟನೆ ನಡೆದು ಹೋಯ್ತು. ಮಾಸಲು ಬಟ್ಟೆಯ ಮುದುಕನೊಬ್ಬ ನಮ್ಮ ಪ್ರೈಮರಿ ಶಾಲೆಯ ಗೇಟಿನ ಬಳಿ ನಿತ್ಯವೂ ಬರುತ್ತಿದ್ದ. ಮಧ್ಯಾಹ್ನ ಮಕ್ಕಳನ್ನು ಊಟಕ್ಕೆ ಬಿಟ್ಟಾಗ ಶಾಲೆಯ ಗೇಟಿನ ಬಳಿ ಬರುತ್ತಿದ್ದ ಆ ಮುದುಕ ನಮ್ಮ ತರಗತಿಯಲ್ಲೇ ಓದುತ್ತಿದ್ದ ಹುಡುಗನೊಬ್ಬನನ್ನು ಕೈ ಬೀಸಿ ಕರೆಯುತ್ತಿದ್ದ, ಅವನಿಗೆ ತನ್ನ ಕಾಸಿನಲ್ಲೇ ನೆಲ್ಲಿಕಾಯಿ, ಸೀಬೆಕಾಯಿ ಕೊಡಿಸುತ್ತಿದ್ದ . ಒಮ್ಮೊಮ್ಮೆ ಬರುವಾಗ ಕಾಯಿ ಬೆಲ್ಲ ತರುತ್ತಿದ್ದ. ಆ ಹುಡುಗನನ್ನು ಬಿಟ್ಟು ಮುದುಕ ಬೇರೆ ಯಾವ ಹುಡುಗರನ್ನೂ ತನ್ನ ಹತ್ತಿರಕ್ಕೆ ಕರೆಯುತ್ತಿರಲಿಲ್ಲ. ನಿರ್ದಿಷ್ಟವಾಗಿ ಆ ಒಬ್ಬನೇ ಹುಡುಗನಿಗೆ ತಿಂಡಿ ಕೊಡಿಸುತ್ತಿದ್ದ.

ಹಾಗೆ ಕೊಡಿಸಿ ಹುಡುಗನನ್ನು ಮುದ್ದು ಮಾಡುತ್ತಿದ್ದ. ಆ ಹುಡುಗನಿಗೆ ಅದು ಸಹ್ಯ ಅನ್ನಿಸುತ್ತಿರಲಿಲ್ಲ. ಅವನ ಮುಖದ ತುಂಬೆಲ್ಲ ಅತಿಯಾಗಿ ಗಡ್ಡ ಮೀಸೆ ಬೆಳೆದಿದ್ದರಿಂದ, ಮುತ್ತು ಕೊಡಲು ಬಂದಾಗ ಹುಡುಗ ಮುಖ ಕಿವುಚುತ್ತಿದ್ದ. ಆದರೆ, ಮಾಸಲು ಬಟ್ಟೆಯೊಂದಿಗೆ ಅರೆ ಹುಚ್ಚನಂತೆ ಕಾಣುತ್ತಿದ್ದವನ ಎದೆಯಲ್ಲಿ ಮಾತ್ರ ಆ ಹುಡುಗನ ಬಗ್ಗೆ ವಿಪರೀತ ವ್ಯಾಮೋಹ, ಮಮಕಾರ, ಬೆಳೆಸಿಕೊಂಡಿದ್ದ, ದೇವರ ಮೇಲೆ ಹೂವು ತಪ್ಪಿದರೂ ಆ ಮುದುಕ ಮಾತ್ರ ಪ್ರತಿದಿನ ಆ ಹುಡುಗನಿಗೆ ತಿನ್ನಲು ಏನಾದರೊಂದು ತಿನಿಸನ್ನು ಕೈಯ್ಯಲ್ಲಿ ಹಿಡಿದು ಗೇಟು ಕಾಯುವ ವ್ರತ ತಪ್ಪುತ್ತಿರಲಿಲ್ಲ. ನಮ್ಮ ಓರಗೆಯ ಗೆಳೆಯರೆಲ್ಲಾ ಆ ಮುದುಕನನ್ನ ಕಂಡು ಹೆದರಿ ಓಡುತ್ತಿದ್ದೆವು. ಅವನಿಂದ ಅನತಿ ದೂರ ನಿಂತು ಅವನನ್ನು ಅಣಕಿಸುತ್ತಿದ್ದೆವು. ಏಕೆಂದರೆ ಅವನು ತರುತ್ತಿದ್ದ ಯಾವ ತಿಂಡಿಯನ್ನೂ ಆತ ನಮಗಾರಿಗೂ ಕೊಡುತ್ತಿರಲಿಲ್ಲ ಅದಕ್ಕೆ ನಾವು ಹಾಗೆ ಮಾಡುತ್ತಿದ್ದೆವು.

ಆದರೆ ಆ ಮುದುಕ ಆ ಹುಡುಗನಿಗೆ ಮಾತ್ರ ಎಲ್ಲವನ್ನೂ ಕೊಡುತ್ತಿದ್ದ. ಅವನಿಗಾಗಿ ಗೇಟು ಕಾಯುತ್ತಿದ್ದ. ತಿಂಡಿ ಕೊಟ್ಟು ನೀರು ಕುಡಿಸಿ ಮುದ್ದು ಮಾಡಿ ಬಿಟ್ಟು ಹೋಗುತ್ತಿದ್ದ. ಅವನು ಎಲ್ಲಿಂದ ಬರುತ್ತಿದ್ದ? ಆತ ಯಾರು? ಏಕೆ ಹೀಗೆ ಮಾಡುತ್ತಿದ್ದ ಅಂತ ಶೋಧನೆ ಮಾಡುವ ಮನಸ್ಥಿತಿಯಲ್ಲಿ ಅಲ್ಲಿ ಯಾರೂ ಇರಲಿಲ್ಲ. ತುಂಬ ದಿನಗಳವರೆಗೆ ಹೀಗೆಯೇ ನಡೆಯುತ್ತಿತ್ತು. ಯಾವುದೂ ಅಡ್ಡಿಯಾಗಲಿಲ್ಲ, ಯಾರಿಗೂ ತೊಂದರೆಯಾಗಲಿಲ್ಲ. ನಮ್ಮೂರಿನಲ್ಲಿ ಇದ್ದಕ್ಕಿದಂತೆ ಒಂದು ಸುಳ್ಳು ಸುದ್ದಿ ಹಬ್ಬಿತು. ಅದು ಊರಿಗೆ ಮಕ್ಕಳ ಕಳ್ಳರು ಬಂದಿದ್ದಾರಂತೆ. ಒಂಟಿಯಾಗಿ ಸಿಕ್ಕುವ ಶಾಲೆಯ ಮಕ್ಕಳನ್ನು ಅವರು ಅಪಹರಿಸುತ್ತಾರಂತೆ ಎನ್ನುವ ವಿಷಯ ಊರ ತುಂಬಾ ಹರಿದಾಡಿತು. ಯಾವಾಗ ಈ ವಿಷಯ ವ್ಯಾಪಕವಾಗಿ ಪ್ರಚಾರಕ್ಕೆ ಬಂತೋ ಮಕ್ಕಳನ್ನು ಶಾಲೆಯಿಂದ ಮನೆಗೆ ಕರೆದುಕೊಂಡು ಹೋಗಲು ಪೋಷಕರು ಶಾಲೆಯ ಗೇಟಿನ ಬಳಿಬಂದು ತಮ್ಮ ತಮ್ಮ ಮಕ್ಕಳಿಗಾಗಿ ಕಾಯುತ್ತಾ ನಿಲ್ಲುವುದು ಆರಂಭವಾಯಿತು.

ಪೋಷಕರು ಬರಲು ಪ್ರಾರಂಭವಾದ ವಿಷಯ ಆ ಮುದುಕನಿಗೂ ಗೊತ್ತಾಯಿತು. ಆಗ ಆ ಮುದುಕ ತನ್ನ ಮುದ್ದಿನ ಆ ಹುಡುಗನಿಗಾಗಿ ಒಂದು ದುಸ್ಸಾಸಕ್ಕೆ ಕೈ ಹಾಕಿದ. ಪೋಷಕರು ಬರುವ ಒಂದೈದು ನಿಮಿಷ ಮೊದಲೇ ತಾನು ಮುಂಚಿತವಾಗಿ ಬಂದು ಆ ಹುಡುಗನಿಗೆ ಏನಾದರೊಂದು ತಿಂಡಿಕೊಟ್ಟು ಹೊರಟುಬಿಡಲು ಸಮಯಕ್ಕಾಗಿ ಹೊಂಚು ಹಾಕುತ್ತಿದ್ದ. ಮಕ್ಕಳನ್ನು



ಕದಿಯುವ ಕಳ್ಳರ ಬಗ್ಗೆ ವದಂತಿ ಹಬ್ಬಿಸಿದವರು ಜೊತೆಗೆ ಮತ್ತೊಂದು ಮಹತ್ತರ ಸಂಗತಿಯನ್ನೂ ಹರಿಯಬಿಟ್ಟಿದ್ದರು. ಮಕ್ಕಳ ಕಳ್ಳರು ಮಕ್ಕಳನ್ನು ಕದಿಯಲು ಬರಿಗೈಲಿ ಬರುವುದಿಲ್ಲ. ಬರುವಾಗ ಏನಾದರೊಂದು ತಿಂಡಿ ತಂದು, ಆ ತಿಂಡಿಯನ್ನು ಉಪಾಯ ಮಾಡಿ ಮಕ್ಕಳಿಗೆ ತಿನ್ನಲು ಕೊಡುತ್ತಾರೆ. ಆ ತಿಂಡಿಗೆ ಮತ್ತು ಬರುವ ಔಷಧಿ ಹಾಕಿರುತ್ತಾರೆ. ತಿಂಡಿ ತಿಂದ ಮಗು ಪ್ರಜ್ಞೆ ತಪ್ಪುತ್ತೆ ಮಕ್ಕಳ ಕಳ್ಳರು ಮಕ್ಕಳನ್ನು ಅಪಹರಿಸುತ್ತಾರೆ. ಅಂತ ಹುಯಿಲೆಬ್ಬಿಸಿದ್ದರು.

ಬಂತಲ್ಲ ಗ್ರಹಚಾರ! ಪಾಪ ನಮ್ಮ ಶಾಲೆಗೆ ಬರುತ್ತಿದ್ದ ಆ ಮುದುಕನಿಗೆ ದುರಾದೃಷ್ಟವೋ ಏನೋ ಹೀಗೆ ಊರಲ್ಲಿ ಹಬ್ಬಿಸಿರುವ ವದಂತಿಯ ಸಾರಾಂಶವೆಲ್ಲಾ ಆ ನೆಲ್ಲಿಕಾಯಿ ಮುದುಕನ ಚಟುವಟಿಕೆಗಳಿಗೆ ತಾಳೆಯಾಗುತ್ತಿತ್ತು. ನಮ್ಮ ಊರಲ್ಲಿ ಆ ಕಾಲದಲ್ಲೇ ಯುವಕರ ಗುಂಪೊಂದು ಮಕ್ಕಳ ಕಳ್ಳರ ಗ್ಯಾಂಗನ್ನು ತಾವೇ ಹಿಡಿದು ಬುದ್ದಿ ಕಲಿಸಲು ಹೊರಟಿತು. 'ಹಿಟ್ಟು ಹಳಸಿತ್ತು' ನಾಯಿ ಹಸಿದಿತ್ತು' ಅನ್ನೋ ಗಾದೆ ಮಾತಿನ ಹಾಗೆ ಆ ನೆಲ್ಲಿಕಾಯಿ ಮುದುಕ ಈ ಪ್ರಕರಣದಲ್ಲಿ ವಿನಾಕಾರಣ ತಗುಲಿಹಾಕಿಕೊಂಡ. ಅಂದು ಕೊಂಡ ಹಾಗೆಯೇ ಎಂದಿನಂತೆ ಆ ಹುಡುಗನಿಗೆ ಅದೇನೋ ತಿಂಡಿ ತಂದು ಶಾಲೆಯ ಗೇಟಿನ ಬಳಿ ನಿಂತು ಊಟಕ್ಕೆ ಬೆಲ್ಲು ಹೊಡೆದ ಕೂಡಲೇ ಆ ಹುಡುಗನಿಗಾಗಿ ಕಾಯುತ್ತಾ ನಿಂತ. ಹುಡುಗ ನಮ್ಮೊಟ್ಟಿಗೆ ಶಾಲೆಯಿಂದ ಹೊರಬಂದ, ಬಂದವನೇ ಗೇಟಿನ ಕಡೆ ನೋಡಿದ ಗೇಟಿನ ಬಳಿ ನಿಂತಿದ್ದ ನೆಲ್ಲಿಕಾಯಿ ಮುದುಕ ಒಂದು ಕೈಯಲ್ಲಿ ತಿಂಡಿ ತೋರಿಸಿ ಮತ್ತೊಂದು ಕೈಲಿ ಹುಡುಗನನ್ನು ಕರೆಯುತ್ತಿದ್ದ ಆ ಮುದುಕ ಸುಳ್ಳು ವದಂತಿಯಲ್ಲಿ ತಿಳಿಸಿದ್ದ ಹಾಗೆಯೇ ಅನುಮಾನಾಸ್ಪದವಾಗಿ ನಡೆದುಕೊಂಡಂತೆ ಅದು ಕಾಣುತ್ತಿತ್ತು.

ತಿಂಡಿಯ ಆಸೆಗಾಗಿ ಹಿಂದಿನಂತೆ ಆ ಹುಡುಗ ಮುದುಕನ ಬಳಿಗೆ ಓಡೋಡಿ ಬಂದ, ಆದರೆ ಅಷ್ಟರಲ್ಲಾಗಲೇ ಅಲ್ಲಿ ಬಂದು ನಿಂತಿದ್ದ ಅವರ ಅಮ್ಮ ಮಕ್ಕಳ ಕಳ್ಳ, ಮಕ್ಕಳ ಕಳ್ಳ ಅಯ್ಯೋ ನನ್ನ ಮಗೂ ಮಗೂ ಅಂತ ಬೊಬ್ಬೆ ಹಾಕಿದಳು. ನಮ್ಮ ಶಾಲೆಯಿದ್ದದ್ದು ಪೇಟೆ ಬೀದಿಯಲ್ಲಿ ತುಂಬಾ ಜನ ಓಡಾಡುವ ಜಾಗ ಅದು. ಕೂಡಲೇ ಜನ ಸೇರಿದರು ಆ ಮುದುಕನ ಬಳಿಗೆ ಓಡಿ ಬಂದ ಆ ಮಗುವನ್ನು ಆ ಮುದುಕನಿಂದ ಕಿತ್ತು ಜನ ಅದರ ತಾಯಿಯ ಕೈಗೆ ಕೊಟ್ಟರು. ಕೈಯಲ್ಲಿದ್ದ ತಿಂಡಿಯಲ್ಲಿ ಅವನು ಮತ್ತು ಬರಿಸುವ ಔಷಧಿ ಹಾಕಿದ್ದಾನೆ ಅಂತ ಭಾವಿಸಿ ಅದನ್ನು ಕಿತ್ತು ಕೊಂಡು ಥಳಿಸಿದರು... ಥಳಿಸಿದರೂ ದೇವರೇ! ಮನಸೋ ಇಚ್ಛೆ ಆ ಮುದುಕನನ್ನು ಹೊಡೆದು ಅಟ್ಟಾಡಿಸಿಬಿಟ್ಟರು.

ಆ ಹಲ್ಲೆ ಎಷ್ಟರ ಮಟ್ಟಿಗೆ ನಡೆಯಿತು ಎಂದರೆ, ಆ ಮುದುಕ ಸಾವು ಬದುಕಿನ ನಡುವೆ ಹೋರಾಡುವ ಹಂತಕ್ಕೆ ತಲುಪಿದ. ತಲೆ, ಮೂಗು, ಕೈಕಾಲುಗಳೆಲ್ಲ ರಕ್ತ ಸಿಕ್ತವಾಗಿ ಹೋದವು. ಆ ಮುದುಕನನ್ನು ಜನ ಹೊಡೆಯುತ್ತಿದ್ದರೆ ಶಾಲೆಯ ಮಕ್ಕಳೆಲ್ಲಾ, ಅಧ್ಯಾಪಕರೆಲ್ಲಾ ನಿಂತು ನೋಡುತ್ತಿದ್ದರೇ ವಿನಹ ಯಾರೊಬ್ಬರೂ ಹತ್ತಿರ ಹೋಗಿ ಏನು ನಡೆಯುತ್ತಿದೆ? ಯಾಕೆ ಹೊಡೆಯುತ್ತಿದ್ದೀರಿ? ಏನಾಯಿತು? ಎಂದು ವಿಚಾರಿಸುವ ಗೋಜಿಗೆ ಹೋಗಲಿಲ್ಲ. ಎಲ್ಲರೂ ಮಕ್ಕಳ ಕಳ್ಳರನ್ನು ಹಿಡಿದು ಥಳಿಸಬೇಕು ಎಂಬ ಸಮೂಹ ಸನ್ನಿಗೆ ಒಳಗಾಗಿ ದ್ದರು. ಜನ ಆ ಮುದುಕನಿಗೆ ಹೊಡೆಯುತ್ತಿದ್ದರೆ ದಿನಾಲೂ ಅವನು ತರುತ್ತಿದ್ದ ತಿಂಡಿ ತಿಂದು ಮುದ್ದು ಮಾಡಿಸಿಕೊಳ್ಳುತ್ತಿದ್ದ ಆ ಹುಡುಗ ಮಾತ್ರ ತನ್ನ ತಾಯಿಯ ಬಳಿ ನಿಂತು 'ತಾತ–ತಾತ' ಎಂದು ಅಳುತ್ತಿದ್ದ.

ಅವನು ಹಾಗೆ 'ತಾತ–ತಾತ' ಎನ್ನುತ್ತಿದ್ದುದನ್ನು ನೋಡಿ, ಆ ಹುಡುಗನ ತಾಯಿ ಅವನ ಬಾಯಿ ಮೇಲೆ ಫಟಾರ್ ಅಂತ ಬಡಿದು ಕಳ್ಳರನ್ನೆಲ್ಲಾ 'ತಾತ' ಅಂತೀಯ ನಡೀ ಮನೆಗೆ ಅಂತ, ಅಳುತ್ತಿದ್ದ ಮಗನನ್ನು ಬಡಿದುಕೊಂಡೇ ಎಳೆದುಕೊಂಡು ಮನೆಗೆ ಹೋದಳು. ಆ ಮುದುಕ ಅನಾಥ ಶವದಂತೆ ಬಿದ್ದಿದ್ದ ಆ ಮೇಲೆ ಬಂದ ಪೊಲೀಸರು, ಜಟಕಾ ಗಾಡಿಗೆ ಹಾಕಿಕೊಂಡು ಆತನನ್ನು ಸರ್ಕಾರಿ ಆಸ್ಪತ್ರೆಗೆ ಸೇರಿಸಿದರು. ಮರುದಿನ ಬೆಳಿಗ್ಗೆ ಶಾಲಾ ಪ್ರಾರ್ಥನೆಯ ಅಸೆಂಬ್ಲಿ ವೇಳೆಯಲ್ಲಿ ಶಿಕ್ಷಕರು ಸಾಮೂಹಿಕವಾಗಿ ಮಕ್ಕಳಿಗೆ ಶಾಲೆಯಲ್ಲಿ ಎಚ್ಚರಿಕೆ ಕೊಟ್ಟರು. ಅಪರಿಚಿತರು ಯಾರಾದರೂ ಬಂದು ಕರೆದರೆ ಅವರ ಕೂಡ ಹೋಗಬಾರದು, ತಿನ್ನಲು ಏನನ್ನಾದರೂ ಕೊಟ್ಟರೆ ಯಾರೂ ತಿನ್ನಬಾರದೆಂದು ಎಚ್ಚರಿಕೆ ಕೊಟ್ಟು ತರಗತಿಗೆ ಕಳುಹಿಸಿದರು. ಅವತ್ತು ಮಧ್ಯಾಹ್ನ ಊಟದ ವಿರಾಮದಲ್ಲಿ ಶಾಲೆಯ ಗೇಟು ತೆರೆದಿತ್ತು. ಆ ಹುಡುಗ ಅಜ್ಜ ಬಂದಾನೆಂದು ಅವನಿಗಾಗಿ ಅಳುತ್ತಾ ಕಾಯುತ್ತಿದ್ದ, ಆದರೆ ಅಜ್ಜ ಬರಲಿಲ್ಲ.

ಗೇಟಿನ ಮುಂದೆ ನೆಲ್ಲಿಕಾಯಿ ಮಾರುತ್ತಿದ್ದ ಅಜ್ಜಿ ನಮ್ಮ ಶಿಕ್ಷಕರೊಬ್ಬರಿಗೆ ಹೇಳುತ್ತಿದ್ದಳು "ಸ್ವಾಮ್ಯಾರೆ ನಿನ್ನೆ ಒದೆ ತಿದ್ನಲ್ಲ ಆ ಮುದುಕ, ಅವನು ಮಕ್ಕಳ ಕಳ್ಳ ಅಲ್ವಂತೆ! ದೊಡ್ಡ ಮಾವತ್ತೂರಿನ ಕಡೆಯವನಂತೆ, ಅವನೂ ಚೆನ್ನಾಗಿ ಬಾಳಿ ಬದುಕಿದವನಂತೆ. ಆಸ್ತಿಯನ್ನೆಲ್ಲಾ ಬರೆಸಿಕೊಂಡು ಅವರ ಮಗ, ಸೊಸೆ ಮನೆಯಿಂದ ಓಡಿಸಿಬಿಟ್ಟವರಂತೆ. ಆದರೆ ಆಯಪ್ಪನಿಗೆ ಇರೋ ಒಬ್ನೆ ಒಬ್ಬ ಮೊಮ್ಮಗನನ್ನ ಕಂಡರೆ ಪ್ರಾಣ ಅಂತೆ, ನಿಮ್ಮಿಸ್ಕೂಲ್ನಾಗೋತ್ತಾ ಇರೋ ಆ ಹುಡುಗ ಥೇಟ್ ಆತನ ಮೊಮ್ಮಗನ ಥರಾ ಕಾಣಿಸ್ತಾ ಇದ್ನಂತೆ. ಅದಕ್ಕೇ ದಿನಾಲೂ ಬಂದು ಆ ಹುಡುಗನನ್ನು ನೋಡ್ಕೊಂಡು ಸಮಾಧಾನ ಪಟ್ಕೊಂಡು ಹೋಗ್ತಿದ್ನಂತೆ. ಆದರೆ ಈ ಮಕ್ಕಳ ಕಳ್ಳರ ಸುದ್ದಿ ಸಮಾಚಾರ ಯಾವ್ದುವೆ ಆಯಪ್ಪನಿಗೆ ಗೊತ್ತಿಲ್ಲ ಸ್ವಾಮಿ, ಪಾಪ ಆ ಬಡಪಾಯಿ ಮುದುಕ, ಈ ಜನಗಳ ಕ್ವಾಪಕ್ಕೆ ಬಲಿಯಾಗೋದ! ಏನ್ ಮಾಡೋದ್ ಹೇಳಿ ಎಲ್ಲ ಅವರ್‌ವರ್ ತಂದಿದ್ದು.–ಎನ್ನುತ್ತಾ ಮಾತಾಡುತ್ತಿದ್ದಳು. ಶಾಲೆಯಲ್ಲಿ ಗಂಟೆ ಬಾರಿಸಿತು ಮುದುಕನಿಗಾಗಿ ಕಾಯುತ್ತಾ ನಿಂತಿದ್ದ ಆ ಹುಡುಗ ಬೆಂಚಿನ ಮೇಲೆ ಕುಳಿತು ಮಗ್ಗಿ ಕಲಿಯುತ್ತಿದ್ದ ನಮ್ಮಂತ ಹುಡುಗರ ಕಣ್ಣಲ್ಲಿ ಈ ಪ್ರಸಂಗ ಅಚ್ಚಳಿಯದೇ ಉಳಿದಿತ್ತು.

ಬಹಳ ದಿನಗಳಿಂದ ಇದನ್ನು ಬರೆಯಬೇಕೆಂದು ಕೊಂಡು ಬರೆಯಲಾಗಲಿಲ್ಲ. ಹೈದರಾಬಾದ್‌ನ ಚಂದ್ರಯಾನಗುತ್ತ ಎಂಬಲ್ಲಿ ಭಿಕ್ಷುಕನೊಬ್ಬನನ್ನು ಮಕ್ಕಳಕಳ್ಳ ಎಂದು ತಪ್ಪು ತಿಳಿದು ಹಿಗ್ಗಾಮುಗ್ಗಾ ಥಳಿಸಿದ್ದರು ಅಂತ ವರದಿಯಾಗಿದ್ದೂ ಉಂಟು. ಕನ್ನಡದ ಮನಸುಗಳನ್ನು ಔದಾರ್ಯವಂತರು ಎಂದು ಕರೆಯುತ್ತಾರೆ. ಆದರೆ ನಮ್ಮ ಯುವಕರು ನಡೆದ ಘಟನೆಯನ್ನು ವಿವೇಚಿಸದೆ ಕಾನೂನನ್ನು ಕೈಗೆತ್ತಿಕೊಂಡು ತಾವೇ ಶಿಕ್ಷೆ ಕೊಟ್ಟು ಬಿಡುವ ಹಂತಕ್ಕೆ ಬಂದಿದ್ದಾರೆ.

ಈ ವರ್ತನೆ ನಮ್ಮ ತಲೆಮಾರಿಗೆ ಖಂಡಿತ ಅಪಾಯಕಾರಿ. ಇವತ್ತು ಕರ್ನಾಟಕವಷ್ಟೇ ಅಲ್ಲ, ದಕ್ಷಿಣ ಭಾರತದ ತಮಿಳುನಾಡು, ಆಂಧ್ರ ಪದೇಶ, ಕೇರಳ ಸೇರಿದಂತೆ ನಾಲ್ಕು ರಾಜ್ಯಗಳಲ್ಲೂ ಮಕ್ಕಳ ಕಳ್ಳರ ಸಮೂಹ ಸನ್ನಿಯ ಅಧ್ವಾನಗಳು ಹೆಡೆಯೆತ್ತಿವೆ. ಕೊಪ್ಪಳದ ಕಾರಟಗಿಯಲ್ಲಿ ಮಕ್ಕಳ ಕಳ್ಳರೆಂದು ಶಂಕಿಸಿ ಅಣ್ಣ ತಂಗಿಯನ್ನು ಹಿಡಿದು ಥಳಿಸಿದ್ದರು, ಅವರ ಕಾರನ್ನು ಜಖಂಗೊಳಿಸಿದ್ದರು.. ಪೊಲೀಸರು ಬಂದ ಮೇಲೆ ಗೊತ್ತಾಗಿದ್ದು ರಾಜಶೇಖರಗೌಡ ಮತ್ತು ಅವನ ತಂಗಿ ಮೋನಿಕಾ ಬಸವನದುರ್ಗದ ನಿವಾಸಿಗಳು, ಯಾವುದೋ ಕೆಲಸದ ನಿಮಿತ್ತ ತೆರಳಿ ವಾಪಸ್ಸಾಗುತ್ತಿದ್ದ ವೇಳೆ ಟೈರ್ ಬ್ಲಾಸ್ಟ್ ಆಗಿ ಕಾರು ನಿಲ್ಲಿಸಿದರು ಅಂತ. ಅಷ್ಟರಲ್ಲಾಗಲೇ ಮಕ್ಕಳ ಕಳ್ಳರ ಬಗ್ಗೆ ಸಮೂಹ ಸನ್ನಿಗೆ ಒಳಗಾಗಿದ್ದ ಗ್ರಾಮಸ್ಥರ ಗುಂಪೊಂದು ಅವರ ಮೇಲೆ ಹಲ್ಲೆ ಮಾಡಿಬಿಟ್ಟಿತ್ತು.

ಅಪರಿಚಿತರು, ಆಗುಂತಕರು, ಅಮಾಯಕರು, ಎಲ್ಲೆಂದರಲ್ಲಿ ಸಾರ್ವಜನಿಕವಾಗಿ ಓಡಾಡಲೂ ಆಗದ ಭಯದ ವಾತಾವರಣ ಸೃಷ್ಟಿಯಾಗಿದೆ. ಅಷ್ಟೇ ಆಗಿದ್ದರೂ ಪರಿಹಾರ ಹುಡುಕಬಹುದಾಗಿತ್ತು, ಆದರೆ ಈ ಸಂಬಂಧ ಜನ ಆಂಧ್ರಪ್ರದೇಶ ಮತ್ತು ತೆಲಂಗಾಣಗಳಲ್ಲಿ ಐವರನ್ನು, ತಮಿಳುನಾಡಿನಲ್ಲಿ ನಾಲ್ವರನ್ನು ಕೊಂದೇ ಬಿಟ್ಟ ಉದಾಹರಣೆಯಿದೆ. ಒಮ್ಮೆ ಬೆಂಗಳೂರಿನಲ್ಲಿ ಕಾಲೂರಾಂ ಎಂಬ ರಾಜಸ್ತಾನ ಮೂಲದ ಹುಡುಗನೊಬ್ಬನನ್ನು ನಡು ರಸ್ತೆಯಲ್ಲಿ ಕೆಡವಿಕೊಂಡು ಬ್ಯಾಟು ಬೀಸಿ ಬಡಿದು ಕೊಂದೇ ಬಿಟ್ಟರಲ್ಲಾ! ಆ ದೃಶ್ಯಗಳನ್ನು ಟಿ.ವಿ. ಮಾಧ್ಯಮಗಳಲ್ಲಿ ನೋಡುತ್ತಿದ್ದರೆ ಎದೆ ಜಲ್ಲೆನಿಸುತ್ತಿತ್ತು. ಯಾವ ತಾಯಿ ಹೆತ್ತ ಮಗನೋ! ಮಾಡದ ತಪ್ಪಿಗೆ ಬಲಿಯಾಗಿ ಹೋದ ಅದರಲ್ಲೂ ಸುಮ್ಮನೆ ಕೊಲ್ಲಲಿಲ್ಲ, ಬಡಿದು ಬಡಿದು ಕೊಂದರು. ಆಮೇಲೆ ಪೊಲೀಸ್ ಕಮೀಷನರ್ ಮಾತಾಡಿದರು, ಮುಖ್ಯಮಂತ್ರಿಗಳು ಮನವಿ ಮಾಡಿದರು ಇಷ್ಟೆಲ್ಲಾ ಅಧ್ವಾನಗಳಿಗೆ ಕಾರಣವೇ ನಮ್ಮ ಸಾಮಾಜಿಕ ಜಾಲ ತಾಣಗಳು.

ಒಮ್ಮೆ ಬಳ್ಳಾರಿಯಲ್ಲಿ ಮಕ್ಕಳ ಕಳ್ಳರು ಬಂದಿದ್ದಾರೆ ನಿಮ್ಮ ನಿಮ್ಮ ಮಕ್ಕಳನ್ನು ಸುರಕ್ಷಿತವಾಗಿಟ್ಟುಕೊಳ್ಳಿ ಎಂದು ವಾಟ್ಸಪ್ ಸಂದೇಶವೊಂದು ಹರಿದಾಡಿದ ಪರಿಣಾಮ ಎಷ್ಟೊಂದು ಅಮಾಯಕ ಜೀವಗಳು ಬಲಿಯಾಗಿ ಹೋದವು. ಇನ್ನೂ ಕೆಲವರು ಕೊರಟಗೆರೆಯ ಬಳಿ ಬೆಟ್ಟದಲ್ಲಿ ನಿಂತು ಯಾರೋ ಮಕ್ಕಳ ಕಣ್ಣು, ಕಿಡ್ನಿ, ಎದೆಯ ಭಾಗಗಳನ್ನು ತಿನ್ನಲು ಬಂದಿದ್ದಾರಂತೆ ಅವರನ್ನ ಬೆಟ್ಟದಲ್ಲಿ ಹುಡುಕುತ್ತಿದ್ದೇವೆ, ನಿಮಗೇನಾದರೂ ಸಿಕ್ಕರೆ ಮಾಹಿತಿ ಕೊಡಿ, ನಮಗಿಲ್ಲಿ ಅಂತಹವರು ಯಾರೂ ಕಂಡಿಲ್ಲ. ಅವರು ಹಾಗಿದ್ದಾರಂತೆ, ಹೀಗಿದ್ದಾರಂತೆ, ಅಂತ ಮಾತಾಡಿ ಕೈಯಲ್ಲಿ ಆಯುಧಗಳನ್ನಿಡಿದು ವಿಡಿಯೋ ಪೋಸ್ಟ್ ಮಾಡಿದ್ದರು.

ಮಕ್ಕಳ ಕಳ್ಳರನ್ನು ಹುಡುಕಿಕೊಂಡು ಮಚ್ಚು ಕೊಡಲಿ ಹಿಡಿದು ಹೀಗೆ ಬೆಟ್ಟ ಗುಡ್ಡಗಳಲ್ಲಿ ಅಲೆಯುತ್ತಿದ್ದ ಯುವಕರು ಇಂಥಾ ಅಪಾಯಕಾರಿ ಸಮೂಹ ಸನ್ನಿಗೆ ಒಳಗಾದರೆ ಹೇಗೆ? ಕಾನೂನು ರಕ್ಷಕರಾದ ಪೊಲಿಸರಿದ್ದಾರೆ. ಎಂತೆಂಥವರನ್ನೊ ಹೆಡೆಮುರಿಕಟ್ಟಿ ಜೈಲಿಗಟ್ಟಿದ ಟಫ್‌ಕಾಫ್‌ಗಳಿದ್ದಾರೆ. ಅಂಥವರೇನಾದರೂ ಇದ್ದರೆ ಅವರಿಗೆ ಮಾಹಿತಿ ನೀಡಿ ಸಹಕರಿಸಿ. ನಿರಾಧಾರ ಸುದ್ದಿಯ ಸಮ್ಮೋಹನಕ್ಕೆ ಒಳಗಾಗಿ ಅತಿರೇಕ ಸೃಷ್ಟಿಸಿ ಜೀವ ಹಾನಿ ಮಾಡಬಾರದು.

ಸಾಮಾಜಿಕ ಜಾಲ ತಾಣಗಳು ಇವತ್ತು ಜಗಳ ತಾಣಗಳಾಗಿ, ಕೆಸರೆರಚಾಟದ ಪಂದ್ಯಾವಳಿಯಂತಾಗಿ ಹೋಗಿದೆ. ಇಂತಹ ವಾಟ್ಸಪ್ ಪೋಸ್ಟ್‌ಗಳು ತರುವ ದುರ್ವಾರ್ತೆಗಳು ಹೇಗಿರುತ್ತವೆ ನೋಡಿ! ಯಾರೋ ಮಹಾನುಭಾವರು ಸಾಲು ಮರದ ತಿಮ್ಮಕ್ಕ ಇನ್ನಿಲ್ಲ ಅಂತ ಸುಳ್ಳು ಸುದ್ದಿ ಹಬ್ಬಿಸಿದ್ದರು. ಅದು ಇನ್ನೂ ಮುಂದುವರೆದು ಸಮಾಜದ ಸಾಮಾಜಿಕ ಸ್ವಾಸ್ಥ್ಯದ ಮೇಲೆ ದಾಳಿ ಮಾಡಿದ್ದರೆ ಹೇಗೆ? ಮಕ್ಕಳನ್ನು ಕದ್ದು, ಅವರನ್ನ ಅಂಗವಿಕಲರನ್ನಾಗಿ ಮಾಡಿ ಭಿಕ್ಷೆ ಬೇಡಲು ಕಳುಹಿಸುತ್ತಾರೆ. ಅವರ ಅಂಗಾಂಗ ಬಿಚ್ಚಿ ಮಾರಾಟ ಮಾಡುತ್ತಾರೆ ಎಚ್ಚರಿಕೆಯಿಂದಿರಿ! ಎಂದು ಮೊದಲು ವಾಟ್ಸಪ್ ಮಾಡಿದ ಸಮಾಜ ಸುಧಾರಕನೊಬ್ಬನನ್ನು ಪೊಲೀಸರು ತಮಿಳುನಾಡಿನಲ್ಲಿ ಬಂಧಿಸಿದ್ದರಂತೆ. ಈ ಅಂತೆ–ಕಂತೆಗಳ ಸಂತೆ ಕಟ್ಟುವುದರಿಂದಲೇ ಅನಾಹುತದ ಆಹುತಿಗೆ ಅಮಾಯಕರು ಬಲಿಯಾಗುತ್ತಿರುವುದು. ಏನಂತೀರಿ?

> ಒಮ್ಮೆ ಬಳ್ಳಾರಿಯಲ್ಲಿ ಮಕ್ಕಳ ಕಳ್ಳರು ಬಂದಿದ್ದಾರೆ ನಿಮ್ಮ ನಿಮ್ಮ ಮಕ್ಕಳನ್ನು ಸುರಕ್ಷಿತವಾಗಿಟ್ಟುಕೊಳ್ಳಿ ಎಂದು ವಾಟ್ಸಪ್ ಸಂದೇಶವೊಂದು ಹರಿದಾಡಿದ ಪರಿಣಾಮ ಎಷ್ಟೊಂದು ಅಮಾಯಕ ಜೀವಗಳು ಬಲಿಯಾಗಿ ಹೋದವು. ಇನ್ನೂ ಕೆಲವರು ಕೊರಟಗೆರೆಯ ಬಳಿ ಬೆಟ್ಟದಲ್ಲಿ ನಿಂತು ಯಾರೋ ಮಕ್ಕಳ ಕಣ್ಣು, ಕಿಡ್ನಿ, ಎದೆಯ ಭಾಗಗಳನ್ನು ತಿನ್ನಲು ಬಂದಿದ್ದಾರಂತೆ ಅವರನ್ನ ಬೆಟ್ಟದಲ್ಲಿ ಹುಡುಕುತ್ತಿದ್ದೇವೆ, ನಿಮಗೇನಾದರೂ ಸಿಕ್ಕರೆ ಮಾಹಿತಿ ಕೊಡಿ, ನಮಗಿಲ್ಲಿ ಅಂತಹವರು ಯಾರೂ ಕಂಡಿಲ್ಲ. ಅವರು ಹಾಗಿದ್ದಾರಂತೆ, ಹೀಗಿದ್ದಾರಂತೆ, ಅಂತ ಮಾತಾಡಿ ಕೈಯಲ್ಲಿ ಆಯುಧಗಳನ್ನಿಡಿದು ವಿಡಿಯೋ ಪೋಸ್ಟ್ ಮಾಡಿದ್ದರು.

ಮಹಾರಾಣಿ ಕಾಲೇಜಿನಲ್ಲಿ ವಿಶ್ವ ಪರಿಸರ ದಿನ

ಮೈಸೂರು, ಜೂ.5(ಎಸ್‌ಪಿಎನ್)– ನಗರದ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತ ಕಾಲೇಜಿನಲ್ಲಿ ಸೋಮವಾರ ವಿಶ್ವ ಪರಿಸರ ದಿನ ಆಚರಿಸಲಾಯಿತು.

ಮೈಸೂರು ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತ ಕಾಲೇಜಿನ ಆಂತರಿಕ ಗುಣಮಟ್ಟ ಭರವಸೆ ಕೋಶ, ರೆಡ್ ಕ್ರಾಸ್, ರಾಷ್ಟ್ರೀಯ ಸೇವಾ ಯೋಜನೆ, ಸಸ್ಯಶಾಸ್ತ್ರ ಮತ್ತು ಪರಿಸರ ವಿಜ್ಞಾನ ವಿಭಾಗದ ಸಂಯುಕ್ತಾಶ್ರಯದಲ್ಲಿ, "ಪ್ಲಾಸ್ಟಿಕ್ ಬಳಕೆ ತಡೆಯಿರಿ' ಎಂಬ ಧ್ಯೇಯ ವಾಕ್ಯದ ಅಡಿಯಲ್ಲಿ ನಡೆದ ಪರಿಸರ ದಿನ ಕಾರ್ಯಕ್ರಮವನ್ನು ಗಿಡ ನೆಡುವ ಮೂಲಕ ಆಚರಿಸಲಾಯಿತು.

ಸೂಕ್ಷ್ಮ ಜೀವಶಾಸ್ತ್ರ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥ ಡಾ. ಎಂ.ಪಿ.ರಾಘವೇಂದ್ರ ಮಾತನಾಡಿ, ಪ್ಲಾಸ್ಟಿಕ್ ಬಳಕೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಪ್ರತಿಯೊಬ್ಬ ವಿದ್ಯಾರ್ಥಿಯು ತಿಳಿದುಕೊಳ್ಳಬೇಕು. ಪ್ಲಾಸ್ಟಿಕ್ ತಾಯಿಯ ಗರ್ಭ ಮತ್ತು ಪ್ರಾಣಿಗಳ ಒಡಲನ್ನು ಸೇರುತ್ತಿದೆ. ಇದರಿಂದ ಬದುಕು ದುಸ್ತರವಾಗಿದೆ. ಹಾಗಾಗಿ ಪ್ಲಾಸ್ಟಿಕ್ ಬಳಕೆ ನಿಯಂತ್ರಣ ಮಾಡಬೇಕು ಎಂದರು. ಕಾಲೇಜು ಪ್ರಾಂಶುಪಾಲ ಡಾ.ಡಿ.ರವಿ ಮಾತನಾಡಿ, ಸಹಜ ಕೃಷಿಯತ್ತ ಯುವ ಸಮುದಾಯ ಮುಖ ಮಾಡಿದರೆ, ಈಗ ಆಗುತ್ತಿರುವ ಪರಿಸರ ಮಾಲಿನ್ಯ ತಕ್ಕಮಟ್ಟಿಗೆ ತಡೆಯಬಹುದು ಎಂದು ಹೇಳಿದರು. ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ಇವರ ತಂಡದಿಂದ ಪರಿಸರ ಜಾಗೃತಿ ಕುರಿತು ಬೀದಿ ನಾಟಕವನ್ನು ಪ್ರದರ್ಶನ ಮಾಡಲಾಯಿತು. ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕದ ಅಧ್ಯಕ್ಷ ನಾಗರಾಜ ಬೈರಿ, ಮಹಿಳಾ ಘಟಕದ ಅಧ್ಯಕ್ಷೆ ರೇಖಾ ಯೋಗ ನರಸಿಂಹ, ವಿಶ್ವ ಪರಿಸರ ಮಾಹೆ ಸಮಿತಿಯ ಅಧ್ಯಕ್ಷ ಯೋಗನರಸಿಂಹ, ಆಂತರಿಕ ಗುಣಮಟ್ಟ ಭರವಸೆ ಕೋಶದ ಸಂಚಾಲಕ ಡಾ.ನಂದಕುಮಾರ್. ಅಧ್ಯಾಪಕರಾದ ಡಾ.ದೀಪಾ ಆರ್ ಹೆಬ್ಬಾರ್, ಡಾ.ಲಕ್ಷ್ಮೀ ಎಂ. ಪಳೋಟಿ, ಡಿ.ಗೀತಾ, ಡಾ.ಪುಷ್ಪಲತಾ, ಡಾ.ಮಂಜುಳಾ ಶೇಷಗಿರಿ, ಎಂ.ಡಿ.ಅಂಬಿಕಾ ಮತ್ತು ಇತರೆ ಅಧ್ಯಾಪಕರು, ಕಚೇರಿ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬಿಡಾಡಿ ದನ, ನಾಯಿಗಳ ಬಗ್ಗೆ ಮೈಸೂರು ನಗರಪಾಲಿಕೆಯಲ್ಲಿ ಸದಸ್ಯರ ಒಮ್ಮತದ ಆಗ್ರಹ

ಜನತೆ ಮಾತ್ರವಲ್ಲ ನಾವೂ ಇವುಗಳ ಹಾವಳಿಯಿಂದ ಸಮಸ್ಯೆಗೀಡಾಗಿದ್ದೇವೆ

● ಸೂಕ್ತ ಕ್ರಮಕ್ಕೆ ಮೇಯರ್ ಶಿವಕುಮಾರ್ ಅಧಿಕಾರಿಗಳಿಗೆ ಸೂಚನೆ ● ನಾಯಿಗಳ ಬಗ್ಗೆ ಚರ್ಚೆ; ಕೋರ್ಟ್ ಆದೇಶದಿಂದ ನಿಸ್ಸಹಾಯಕ ಪರಿಸ್ಥಿತಿ

ಮೈಸೂರು, ಜೂ.5 (ಎಸ್‌ಬಿಡಿ)– ಯಾವುದೇ ಕಾರಣಕ್ಕೂ ಬಿಡಾಡಿ ರಾಸುಗಳು ರಸ್ತೆಗೆ ಬರದಂತೆ ಕ್ರಮ ವಹಿಸುವಂತೆ ಮೇಯರ್ ಶಿವಕುಮಾರ್, ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ.



ಮೈಸೂರು ನಗರ ಪಾಲಿಕೆಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ 2023–24ನೇ ಸಾಲಿನ ಬಜೆಟ್ ಮಂಡನೆ ನಂತರ ನಡೆದ ಚರ್ಚೆ ವೇಳೆ ಬಿಡಾಡಿ ರಾಸುಗಳು ಹಾಗೂ ಬೀದಿನಾಯಿಗಳ ಹಾವಳಿ ಬಗ್ಗೆ ಗಂಭೀರ ಚರ್ಚೆಯಾಯಿತು. ಸಭೆಗೆ ಲೆಕ್ಕ ಶೀರ್ಷಿಕೆ ವಿವರಣೆ ನೀಡಿದ ಲೆಕ್ಕಾಧಿಕಾರಿ, ಬಿಡಾಡಿ ರಾಸುಗಳ ದಂಡ ಮತ್ತು ಜುಲ್ಮಾನೆಯಿಂದ 6 ಲಕ್ಷ ರೂ. ನಿರೀಕ್ಷಿಸಲಾಗಿದೆ ಎಂದು ಪ್ರಸ್ತಾಪಿಸುತ್ತಿದ್ದಂತೆ ಅನೇಕ ಸದಸ್ಯರು, ಬಿಡಾಡಿ ರಾಸುಗಳಿಂದಾಗಿ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗಿದ್ದು, ಇದನ್ನು ನಿಯಂತ್ರಿಸುವ ನಿಟ್ಟಿನಲ್ಲಿ ದಂಡದ ಮೊತ್ತ ಹೆಚ್ಚಿಸುವಂತೆ ಒತ್ತಾಯಿಸಿದರು.

ಬಿಡಾಡಿ ರಾಸುಗಳಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ಹಸುಗಳು ಗುದ್ದಿ ಅನೇಕರು ಗಾಯಗೊಂಡಿದ್ದಾರೆ. ಅಪಘಾತಗಳು ಸಂಭವಿಸುತ್ತಿವೆ. ಇದನ್ನು ನಿಯಂತ್ರಿಸುವಲ್ಲಿ ಪಾಲಿಕೆ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಸದಸ್ಯರಾದ ಪುಷ್ಪಲತಾ ಜಗನ್ನಾಥ್, ಶಾಂತಕುಮಾರಿ, ಪಲ್ಲವಿ ಬೇಗಂ ಮತ್ತಿತರರು ಬೇಸರ ವ್ಯಕ್ತಪಡಿಸಿದರು. ನಮ್ಮ ವಾರ್ಡ್‌ನಲ್ಲಿ ಬಿಡಾಡಿ ದನಗಳಿಂದ ತೀವ್ರ ಸಮಸ್ಯೆಯಾಗುತ್ತಿವೆ. ಅಪಘಾತ ಸಂಭವಿಸಿ ಅನೇಕರು ಪೆಟ್ಟು ತಿಂದಿದ್ದಾರೆ. ಬಿಡಾಡಿ ಬಿಡುವವರಿಗೆ ವಿಧಿಸುವ ದಂಡದ ಮೊತ್ತವನ್ನು 500ರಿಂದ ಸಾವಿರ ರೂ.ಗೆ ಹೆಚ್ಚಿಸಿ. ಬೇಜವಾಬ್ದಾರಿ ತೋರಿರುವ ಅಧಿಕಾರಿಯನ್ನು ಪಾಲಿಕೆ ಸೇವೆಯಿಂದ ಬಿಡುಗಡೆ ಮಾಡಿ ಕಳುಹಿಸಿ ಎಂದು ಅಯೂಬ್‌ಖಾನ್ ಹಾಗೂ ಸೈಯದ್ ಹಸ್ರತ್ ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮೇಯರ್ ಶಿವಕುಮಾರ್, ದಂಡದ ಮೊತ್ತ ಹೆಚ್ಚಿಸುವುದರಿಂದ ಬಿಡಾಡಿ ದನಗಳ ನಿಯಂತ್ರಣ ಸಾಧ್ಯವಿಲ್ಲ. ನಮ್ಮ ಅಧಿಕಾರಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡಿದರೆ ಮಾತ್ರ ಸಾಧ್ಯ. ಅದಕ್ಕೆ ಪೂರಕವಾದ ವ್ಯವಸ್ಥೆಯನ್ನು ಪಾಲಿಕೆ ಮಾಡಿಕೊಡಲಿದೆ. ಯಾವುದೇ ಕಾರಣಕ್ಕೂ ಬಿಡಾಡಿ ರಾಸುಗಳು ರಸ್ತೆಗೆ ಬರದಂತೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ನಂತರವೂ ಈ ಸಮಸ್ಯೆ ಪರಿಹರಿಸದಿದ್ದರೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದರು.

ಈ ವೇಳೆ ಸದಸ್ಯ ಅಯೂಬ್ ಖಾನ್, ಬಿಡಾಡಿ ರಾಸುಗಳು ರಸ್ತೆಯಲ್ಲಿ ಕಾಣಿಸದಂತೆ ಇನ್ನು 15 ದಿನಗಳಲ್ಲಿ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ನೀವು ರಾಜೀನಾಮೆ ನೀಡುವಿರಾ ಎಂದು ಮೇಯರ್ ಅವರನ್ನು ಪ್ರಶ್ನಿಸಿದರು. ಇದಕ್ಕೆ ಮೇಯರ್, ಹಾಗಾದರೆ ನಿಮ್ಮ ಒತ್ತಾಯದಂತೆ ದಂಡದ ಮೊತ್ತ ಹೆಚ್ಚಿಸಿದರೆ, ಬಿಡಾಡಿ ರಾಸುಗಳನ್ನು ನೀವು ನಿಯಂತ್ರಿಸುವಿರಾ ಎಂದು ಮರುಪ್ರಶ್ನೆ ಹಾಕಿದರಲ್ಲದೆ, ದಂಡ ಹೆಚ್ಚು ಮಾಡಿದರೆ ಬಿಡಾಡಿ ದನಗಳ ನಿಯಂತ್ರಣ ಸಾಧ್ಯವಾಗುವುದಿಲ್ಲ. ಹಾಗಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದು ಸ್ಪಷ್ಟಪಡಿಸಿದರು. ಬಿಡಾಡಿ ರಾಸುಗಳ ಸಂಬಂಧ ಕೈಗೊಳ್ಳಲಿರುವ ಕ್ರಮದ ಬಗ್ಗೆ ಸಾರ್ವಜನಿಕ ಪ್ರಕಟಣೆ ನೀಡುವಂತೆ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷ ಆರ್.ನಾಗರಾಜ್ ಸಲಹೆ ನೀಡಿದರು.

ಬೀದಿನಾಯಿಗಳ ಹಾವಳಿ: ಬೀದಿನಾಯಿ ಹಾಗೂ ಇತರೆ ಪ್ರಾಣಿಗಳ ಹಾವಳಿಗೆ ತುತ್ತಾದವರಿಗೆ ಪರಿಹಾರ ಕಲ್ಪಿಸಲು 10 ಲಕ್ಷ ರೂ. ಕಾಯ್ದಿರಿಸಲಾಗುವುದು ಎಂದು ಲೆಕ್ಕಾಧಿಕಾರಿ ತಿಳಿಸಿದರು. ಈ ವೇಳೆ ಸದಸ್ಯ ರಂಗಸ್ವಾಮಿ, ನನಗೆ ನಾಯಿ ಕಚ್ಚಿದ್ದರಿಂದ 5 ಇಂಜೆಕ್ಷನ್ ಪಡೆದಿದ್ದೇನೆ. ಪರಿಹಾರ ಕೊಡುವುದು ಬೇಡ, ನಾಯಿ ಹಿಡಿಯುವಂತೆ ಕೇಳಿದರೆ ವ್ಯಾನ್ ಇಲ್ಲ ಎನ್ನುತ್ತಾರೆ ಎಂದರು. ಈ ವೇಳೆ ಪ್ರೇಮಾ ಶಂಕರೇಗೌಡ ಅವರು ನನಗೂ ನಾಯಿ ಕಚ್ಚಿದ್ದಾಗಿ ಹೇಳಿದರು. ವಿ.ರಮೇಶ್, ಭಾಗ್ಯ ಮಾದೇಶ್ ಹಾಗೂ ಅಶ್ವಿನಿ ಅನಂತು ಅವರು ಹಂದಿಗಳ ಉಪಟಳವೂ ಹೆಚ್ಚಾಗಿದೆ ಎಂದು ದೂರಿದರು. ಈ ಹಿಂದೆ ನಾಯಿ ಕಚ್ಚಿದರೆ ಅದರ ಹಲ್ಲುಗಳ ಗುರುತು ಮಾತ್ರ ಕಾಣುತ್ತಿತ್ತು. ಆದರೆ ಈಗ ಚಿರತೆ, ಹುಲಿಗಳಂತೆ ಭಯಾನಕವಾಗಿ ಕಚ್ಚುತ್ತಿವೆ. ಕಡಿತಕ್ಕೊಳಗಾದ ಕೆಲ ಮಕ್ಕಳಿಗೆ ಪ್ಲಾಸ್ಟಿಕ್ ಸರ್ಜರಿ ಮಾಡಿಸಿರುವ ನಿದರ್ಶನಗಳಿವೆ. ಹಾಗಾಗಿ ಈ ಬಗ್ಗೆಯೂ ಅಧ್ಯಯನವಾಗಬೇಕೆಂದು ಅಯೂಬ್ ಖಾನ್ ಆಗ್ರಹಿಸಿದರು. ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ, ಬೀದಿನಾಯಿಗಳನ್ನು ಸ್ಥಳಾಂತರಿಸುವಂತಿಲ್ಲ, ಒಂದೆಡೆ ಬಂಧನದಲ್ಲಿಡುವಂತಿಲ್ಲ ಎಂದು ನ್ಯಾಯಾಲಯದ ಆದೇಶವಿದೆ ಎಂದರು. ಹಾಗಾದರೆ ಈ ಬಗ್ಗೆ ಸಾರ್ವಜನಿಕರಿಗೆ ತಿಳಿಯುವಂತೆ ಪ್ರಕಟಣೆ ನೀಡಿ ಎಂದು ಸತ್ಯರಾಜ್ ಹೇಳಿದರು. ಪುನರ್ವಸತಿ ವ್ಯವಸ್ಥೆ ಕಲ್ಪಿಸಲು ಅವಕಾಶವಿಲ್ಲ ಎಂದಾದರೆ ಇದಕ್ಕಾಗಿ ಬಜೆಟ್‌ನಲ್ಲಿ ಹಣ ಕಾಯ್ದಿರಿಸುವ ಅವಶ್ಯಕತೆ ಇಲ್ಲ ಎಂದು ಬಿ.ವಿ.ಮಂಜುನಾಥ್ ಅಭಿಪ್ರಾಯಿಸಿದರು.

ಪ್ರಿಕಾಸ್ಟ್ ಮ್ಯಾನ್‌ಹೋಲ್: ವಾಣಿ ವಿಲಾಸ ವಾಟರ್ ವರ್ಕ್ಸ್ ಆವರಣದಲ್ಲಿ ಪ್ರಿಕಾಸ್ಟ್ ಮ್ಯಾನ್‌ಹೋಲ್ ಬಿಡಿಭಾಗಗಳನ್ನು ದಾಸ್ತಾನು ಮಾಡಿರುವ ಬಗ್ಗೆ ಸದಸ್ಯ ಎಂ.ಸಿ.ರಮೇಶ್ ಪ್ರಶ್ನಿಸಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ಮೇಯರ್ ಶಿವಕುಮಾರ್, ಸಮರ್ಪಕ ರೀತಿಯಲ್ಲಿ ಮ್ಯಾನ್‌ಹೋಲ್ ನಿರ್ಮಿಸುತ್ತಿಲ್ಲ.. ಸರಿಯಾಗಿ ಕ್ಯೂರಿಂಗ್ ಮಾಡುತ್ತಿಲ್ಲ. ಹಾಗಾಗಿ ಉತ್ಕೃಷ್ಟವಾಗಿ ಸಿದ್ಧಪಡಿಸಿದ ಪ್ರಿಕಾಸ್ಟ್ ಮ್ಯಾನ್‌ಹೋಲ್ ಅಳವಡಿಸಬೇಕೆಂಬ ಚಿಂತನೆ ಇದೆ ಎಂದರು. ಮೊದಲು ಈ ವ್ಯವಸ್ಥೆಯನ್ನು ಜಾರಿ ಮಾಡಿ ಎಂದು ಪ್ರೇಮಾ ಶಂಕರೇಗೌಡ ಆಗ್ರಹಿಸಿದರು.

ಅಧಿಕಾರಿಗಳಿಗೆ ಎಚ್ಚರಿಕೆ: ಸಾರ್ವಜನಿಕ ಶೌಚಾಲಯ ಅಪೂರ್ಣ ಕಾಮಗಾರಿ ಬಗ್ಗೆ ಸದಸ್ಯರು ದೂರಿದ್ದರಿಂದ ಸಿಟ್ಟಾದ ಮೇಯರ್, ಸಾರ್ವಜನಿಕ ಶೌಚಾಲಯ ನಿರ್ಮಾಣದ ಸ್ಥಿತಿ–ಗತಿ, ವಿದ್ಯುತ್, ನೀರಿನ ವ್ಯವಸ್ಥೆ ಬಗ್ಗೆ ಪರಿಶೀಲನೆ ನಡೆಸಿ ಜೂ.9ರ ಕೌನ್ಸಿಲ್ ಸಭೆಯೊಳಗೆ ವರದಿ ಕೊಡಬೇಕು. ಇಲ್ಲವಾದರೆ ನಿಮ್ಮನ್ನು ರಿಲೀವ್ ಮಾಡಲಾಗುತ್ತದೆ ಎಂದು ಅಧಿಕಾರಿಗಳಿಗೆ ಎಚ್ಚರಿಸಿದರು. ಡಾ.ಅಶ್ವಿನಿ ಶರತ್ ಅವರು ಗಾಂಧಿನಗರದಲ್ಲಿ ನೀರಿನ ಸಮಸ್ಯೆ ಬಗ್ಗೆ ತಿಳಿಸಿದ್ದಾರೆ. ಕೂಡಲೇ ಸಮಸ್ಯೆ ಪರಿಹರಿಸಿ, ವರದಿ ನೀಡುವಂತೆ ಸೂಚಿಸಿದರು. ಮಳೆಗಾಲ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಎಲ್ಲಾ ವಾರ್ಡ್‌ಗಳಲ್ಲೂ ಫಾಗಿಂಗ್ ಮಾಡುವಂತೆ ಬಿ.ಲಕ್ಷ್ಮೀ, ಬಿ.ವಿ.ಮಂಜುನಾಥ್, ಪ್ರೇಮಾ ಶಂಕರೇಗೌಡ, ಪ್ರಮಿಳಾ ಭರತ್ ಮತ್ತಿತರರು ಆಗ್ರಹಿಸಿದರು. ಪಾಲಿಕೆ ಆವರಣದಲ್ಲಿ ಕ್ಯಾಂಟಿನ್ ವ್ಯವಸ್ಥೆ ಮಾಡುವಂತೆ ರಜನಿ ಅಣ್ಣಯ್ಯ ಹೇಳಿದರು.

ಪಾಲಿಕೆಯಲ್ಲಿ ರೋಬೋಟ್ ರಾದ್ಧಾಂತ...

ಪಾಲಿಕೆ ಬಜೆಟ್ ಮೇಲಿನ ಚರ್ಚೆ ವೇಳೆ ರೋಬೋಟ್ ರಾದ್ಧಾಂತ ನಡೆಯಿತು. ಯಂತ್ರೋಪಕರಣ ಖರೀದಿಗೆ ಹಣ ಕಾಯ್ದಿರಿಸಿದ ವಿಷಯದ ಬಗ್ಗೆ ಚರ್ಚಿಸುವಾಗ ಮೇಯರ್ ಶಿವಕುಮಾರ್, ಸರಿಯಾದ ರೀತಿಯಲ್ಲಿ ಡಿ–ಶಿಲ್ಟಿಂಗ್ ಮಾಡದಿರುವ ಕಾರಣ ಯುಜಿಡಿ ನಿರ್ವಹಣೆಗೆ ಕೋಟ್ಯಾಂತರ ರೂ. ವ್ಯಯವಾಗುತ್ತಿದೆ. ಅಧಿಕಾರಿಗಳು ಹೊಸ ಆವಿಷ್ಕಾರದ ತಂತ್ರಜ್ಞಾನ ಬಳಕೆ ಬಗ್ಗೆ ಗಮನಹರಿಸಬೇಕು ಎಂದು ತಿಳಿಸಿದರು. ಈ ವೇಳೆ ಪ್ರೇಮಾ ಶಂಕರೇಗೌಡ, ಒಂದು ಕಿ.ಮೀ. ಸ್ಕ್ಯಾನ್ ಮಾಡುತ್ತದೆ ಎಂದು ಹೇಳಿ ಒಳಚರಂಡಿ ನಿರ್ವಹಣೆಗೆ ಲಕ್ಷಾಂತರ ರೂ. ನೀಡಿ ತರಿಸಿದ್ದ ರೋಬೋಟ್ ಏನಾಯಿತು ಎಂದು ಪ್ರಶ್ನಿಸಿದರು. ವೇದಾವತಿ, ಎಂ.ಸಿ.ರಮೇಶ್, ಎಂ.ಯು.ಸುಬ್ಬಯ್ಯ ಸೇರಿದಂತೆ ಅನೇಕ ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು. ಈ ಬಗ್ಗೆ ವಿವರಣೆ ನೀಡುವಂತೆ ಮೇಯರ್ ಕೇಳಿದರೂ ಅಧಿಕಾರಿಗಳು ತುಟಿ ಬಿಚ್ಚಲಿಲ್ಲ. ಇದರಿಂದ ಮೇಯರ್ ಹಾಗೂ ಆಯುಕ್ತರು ಸಿಟ್ಟಾಗಿ, ರೋಬೋಟ್ ಏನಾಗಿದೆ ಹೇಳ್ರೀ ಎಂದು ಏರುಧ್ವನಿಯಲ್ಲಿ ಪ್ರಶ್ನಿಸಿದರು. ಕಡೆಗೆ ಅಧಿಕಾರಿಯೊಬ್ಬರು ಪೋಡಿಯಂ ಬಳಿ ಬಂದು, ರೋಬೋಟ್ ಸುಸ್ಥಿತಿಯಲ್ಲಿದ್ದು ದೂರು ಬಂದಾಗ ಕಳಹಿಸಿಕೊಡಲಾಗುವುದು ಎಂದರು. ಆದರೆ ಸದಸ್ಯರು, ನಾವ್ಯಾರೂ ರೋಬೋಟ್ ನೋಡಿಯೇ ಇಲ್ಲ ಎಂದರು. ಬಳಿಕ ಮುಂದಿನ ಕೌನ್ಸಿಲ್ ಸಭೆಯೊಳಗೆ ಸ್ಪಷ್ಟ ಮಾಹಿತಿ ನೀಡುವಂತೆ ಮೇಯರ್ ಸೂಚನೆ ನೀಡಿದರು. ಇದೇ ವೇಳೆ ಒಳಚರಂಡಿ ನಿರ್ವಹಣೆಗೆ ಅತ್ಯಾಧುನಿಕ ಸೀವರ್ ಸಕ್ಷನ್ ಮೆಷಿನ್ ಹಾಗೂ ತ್ವರಿತವಾಗಿ ರಸ್ತೆ ಗುಂಡಿ ಮುಚ್ಚುವ ಯಂತ್ರ ತರಿಸುವುದು ಉತ್ತಮ. ಅದಕ್ಕಾಗಿ ಯಂತ್ರೋಪಕರಣ ಖರೀದಿಗೆ ಕಾಯ್ದಿರಿಸಿರುವ ಮೊತ್ತವನ್ನು 5 ಕೋಟಿ ರೂ.ಗೆ ಹೆಚ್ಚಿಸುವಂತೆ ಮೇಯರ್, ಲೆಕ್ಕಾಧಿಕಾರಿಗೆ ಸೂಚಿಸಿದರು.

ಡಯೋಗ್ನೊಸ್ಟಿಕ್, ಡಯಾಲಿಸಿಸ್ ಸೆಂಟರ್‌ಗೆ ಆಗ್ರಹ

ಬಡ ಜನರ ಅನುಕೂಲಕ್ಕಾಗಿ ನಗರ ಪಾಲಿಕೆ ವತಿಯಿಂದ ಎಕ್ಸ್‌ರೇ, ಸ್ಕ್ಯಾನಿಂಗ್ ಇನ್ನಿತರ ಸೌಲಭ್ಯವುಳ್ಳ ಡಯಾಗ್ನೊಸ್ಟಿಕ್ ಸೆಂಟರ್ ಆರಂಭಿಸುವ ಪ್ರಸ್ತಾವನೆ ಇತ್ತು. ಅದನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಕ್ರಮ ವಹಿಸಬೇಕೆಂದು ಹಿರಿಯ ಸದಸ್ಯೆ ಶಾಂತಕುಮಾರಿ ಹೇಳಿದರು. ಬಿಬಿಎಂಪಿ ವತಿಯಿಂದ ಆಸ್ಪತ್ರೆಗಳು, ಅನಾಥಾಲಯಗಳನ್ನು ನಿರ್ಮಿಸಿ, ನಿರ್ವಹಿಸಲಾಗುತ್ತಿದೆ. ಹಾಗಾಗಿ ನಮ್ಮಲ್ಲಿ ಡಯಾಗ್ನೊಸ್ಟಿಕ್ ಸೆಂಟರ್ ತೆರೆದರೆ ಅನುಕೂಲವಾಗುತ್ತದೆ. ಇದಕ್ಕಾಗಿ 10 ಕೋಟಿ ರೂ. ಮೀಸಲಿಡಿ ಎಂದು ಅಯೂಬ್ ಖಾನ್ ಆಗ್ರಹಿಸಿದರು. ಈಗ ಕಿಡ್ನಿ ಸಮಸ್ಯೆಯಿಂದ ಹೆಚ್ಚು ಜನ ಬಳಲುತ್ತಿದ್ದಾರೆ. ಡಯಾಲಿಸಿಸ್ ಸೇವೆ ನೀಡಿದರೆ ತುಂಬಾ ಒಳ್ಳೆಯದು ಎಂದು ವಿ.ರಮೇಶ್ ಅಭಿಪ್ರಾಯಿಸಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ಮೇಯರ್, ಈ ಬಗ್ಗೆ ಪ್ರಾಯೋಗಿಕವಾಗಿ ಕ್ರಮ ವಹಿಸಬೇಕಾಗುತ್ತದೆ. ಮೊದಲು ಡಿಹೆಚ್‌ಓ ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಾಧಕ–ಬಾಧಕಗಳ ಬಗ್ಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳೋಣ ಎಂದರು.

ಮಲ್ಟಿ ಲೆವೆಲ್ ಪಾರ್ಕಿಂಗ್ ಸಂಕೀರ್ಣ

ನಮ್ಮ ಅವಧಿಯಲ್ಲಿ ಒಂದಾದರೂ ಮಲ್ಟಿ ಲೆವೆಲ್ ಪಾರ್ಕಿಂಗ್ ಲಾಟ್ ಮಾಡಬೇಕು. ಇದಕ್ಕಾಗಿ ಸಬರ್ಬನ್ ಬಸ್ ನಿಲ್ದಾಣದ ಎದುರಿನ ಜಾಗವನ್ನು ಗುರುತಿಸಲಾಗಿತ್ತು. ಅಲ್ಲಿ ನಾಲೆ ಇರುವುದರಿಂದ ಅಗತ್ಯದಷ್ಟು ಜಾಗ ಸಿಗುವುದಿಲ್ಲ. ಈ ಸಂಬಂಧ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿದಾಗ ನಂಜರಾಜ ಬಹದ್ದೂರ್ ಛತ್ರದ ಬಳಿ ಸ್ಥಳಾವಕಾಶ ಕಲ್ಪಿಸುವ ಭರವಸೆ ನೀಡಿದ್ದಾರೆ. ಅದು ಸಾಕಾರವಾದರೆ ಶೀಘ್ರದಲ್ಲೇ ಮಲ್ಟಿ ಲೆವೆಲ್ ಪಾರ್ಕಿಂಗ್ ಲಾಟ್ ನಿರ್ಮಿಸೋಣ. ಅಲ್ಲಿಂದ ಹಿರಿಯ ನಾಗರಿಕರು ಸೇರಿದಂತೆ ನಡೆಯಲು ಸಾಧ್ಯವಾಗದವರು ಮಾರ್ಕೆಟ್, ಇನ್ನಿತರ ಸ್ಥಳಗಳಿಗೆ ಹೋಗಲು 4 ಬ್ಯಾಟರಿ ವಾಹನಗಳ ವ್ಯವಸ್ಥೆ ಮಾಡೋಣ ಎಂದು ಮೇಯರ್ ಶಿವಕುಮಾರ್ ತಿಳಿಸಿದರು.

ಪಾಲಿಕೆ ಬಜೆಟ್‌ಗೆ ಸದಸ್ಯರು, ಶಾಸಕರ ಮಿಶ್ರ ಪ್ರತಿಕ್ರಿಯೆ

ಮೈಸೂರು,ಜೂ.5(ಆರ್‌ಕೆ)–ಮೈಸೂರು ನಗರಪಾಲಿಕೆಯು ಮಂಡಿಸಿದ ಪ್ರಸಕ್ತ ಸಾಲಿನ ಆಯ–ವ್ಯಯಕ್ಕೆ ಶಾಸಕರು, ಕಾರ್ಪೊರೇಟರ್‌ಗಳು ಪ್ರತಿಕ್ರಿಯೆ ನೀಡಿದ್ದಾರೆ.

ಅಯೂಬ್ ಖಾನ್: ಮಾರ್ಚ್ ಮಾಹೆಯಲ್ಲಿ ನಡೆಯಬೇಕಾದ ಬಜೆಟ್ ಸಭೆಯನ್ನು ಈಗ ನಡೆಸುತ್ತಿರುವ ಬಗ್ಗೆ ವ್ಯಂಗ್ಯವಾಡಿದ ಮಾಜಿ ಮೇಯರ್ ಅಯೂಬ್ ಖಾನ್, ಉಂಡುವಾಡಿ ಕುಡಿಯುವ ನೀರಿನ ಯೋಜನೆ ಬಗ್ಗೆ ಪ್ರಸ್ತಾಪಿಸಿಲ್ಲ. ಕೌನ್ಸಿಲ್ ಸಭೆಗಾದರೂ ವಿಷಯ ತಂದು ಚರ್ಚಿಸಿ ಎಂದರು.

ಉಳಿದಿರುವ ಕಡಿಮೆ ಅವಧಿಯಲ್ಲೇ ಯೋಜನೆಗಳನ್ನು ಅನುಷ್ಠಾನಗೊಳಿಸಿ. ಗ್ಯಾರಂಟಿ ಯೋಜನೆಗಳನ್ನು ಮುಖ್ಯಮಂತ್ರಿಗಳು ಘೋಷಿಸಿ ಜಾರಿಗೊಳಿಸಿದ ರೀತಿಯಲ್ಲಿ ಪಾಲಿಕೆಯೂ ಬಜೆಟ್‌ನಲ್ಲಿ ಪ್ರಕಟಿಸಿರುವ ಯೋಜನೆಗಳಿಗೆ ನಾಳೆಯಿಂದಲೇ ಪ್ರಕ್ರಿಯೆ ಆರಂಭಿಸುವಂತೆ ಸಲಹೆ ನೀಡಿದರು.

ಅಶ್ವಿನಿ ಅನಂತು: ನೀರಿನ ಬಿಲ್, ಇನ್ನಿತರ ತೆರಿಗೆಗೆ ಆನ್‌ಲೈನ್ ವ್ಯವಸ್ಥೆ ಮಾಡಿರುವುದು ಒಳ್ಳೆಯದು. ಕೆರೆ, ಕಲ್ಯಾಣಿಗಳ ಅಭಿವೃದ್ಧಿ, ಪೌರಕಾರ್ಮಿಕರ ವಿಶ್ರಾಂತಿ ಗೃಹ ಯೋಜನೆಗಳು ಉತ್ತಮ ಪ್ರಯತ್ನ ಎಂದು ಅಶ್ವಿನಿ ಅನಂತು ತಿಳಿಸಿದರು.

ಬಿ.ವಿ.ಮಂಜುನಾಥ್: ಬಿ.ವಿ. ಮಂಜುನಾಥ್ ಮಾತನಾಡಿ, ಕಳೆದ ಬಾರಿಯ ಬಜೆಟ್‌ನ ಪ್ರಸ್ತಾಪಗಳಲ್ಲಿ ಶೇ. 80ರಷ್ಟು ಅನುಷ್ಠಾನವಾಗಿದೆ ಎಂದು ಹೇಳಲಾಗುತ್ತಿದೆ. ಅದರ ಬಗ್ಗೆ ಲಿಖಿತ ಮಾಹಿತಿಗಳಿಲ್ಲ. ಈಗ ಶೇ. 100ರಷ್ಟು ಜಾರಿಗೆ ತರಲು ಪ್ರಯತ್ನಿಸಿ, ಕಾಗದ ರಹಿತ ಆಯ–ವ್ಯಯ ಮಂಡನೆಗೆ ಒತ್ತು ನೀಡಬಹುದಿತ್ತು. ಇನ್ನೂ ಹಲವು ವೃತ್ತಗಳನ್ನು ಅಭಿವೃದ್ಧಿಪಡಿಸಿ ಎಂದರು.

ಈವರೆಗೆ 20ಕ್ಕೂ ಹೆಚ್ಚು ಬಜೆಟ್ ಬುಕ್ ನೋಡಿದ್ದೇನೆ. ಮಂಡನೆಯಾದ ಎಲ್ಲಾ ಯೋಜನೆಗಳೂ ಜಾರಿಯಾಗಿಲ್ಲ. ಈಗಲಾದರೂ ಪ್ರಯತ್ನಿಸಿ ಎಂದ ಮಾಜಿ ಮೇಯರ್ ಅಯೂಬ್ ಖಾನ್, ವೃತ್ತಗಳ ಅಭಿವೃದ್ಧಿ ಸ್ವಾಗತಾರ್ಹ, ಅದೇ ರೀತಿ ಟಿಪ್ಪು ಸರ್ಕಲ್ ಅನ್ನೂ ಸೇರಿಸಿಕೊಳ್ಳಿ ಎಂದು ಸಲಹೆ ನೀಡಿದರು.


ಎಸ್‌ಬಿಎಂ ಮಂಜು: ಬಜೆಟ್ ಯೋಜನೆಗಳ ಅನುಷ್ಠಾನಕ್ಕೆ ಸಮಿತಿ ರಚಿಸಿ, ವೃತ್ತಗಳ ಅಭಿವೃದ್ಧಿ ಮಾಡುವಾಗ ಕುವೆಂಪು, ಬಾಬು ಜಗಜೀವನ ರಾಮ್ ಪ್ರತಿಮೆಗಳಿಗೂ ರಾಜಗೋಪುರ ನಿರ್ಮಿಸಬೇಕು ಹಾಗೂ ಕ್ರೀಡಾಂಗಣಗಳ ಅಭಿವೃದ್ಧಿಗೂ ಮುನ್ನ ಅವುಗಳ ಸರ್ವೆ ಮಾಡಿಸಿ ಎಂದು ಎಸ್‌ಬಿಎಂ ಮಂಜು ತಿಳಿಸಿದರು.

ಕೂಲಿ ಕಾರ್ಮಿಕರು, ಪೌರಕಾರ್ಮಿಕರಿಗೆ ಅನುಕೂಲ ಮಾಡಿಕೊಡುತ್ತಿರುವುದು ಸ್ವಾಗತಾರ್ಹ, ಉದ್ಯಾನವನಗಳಲ್ಲಿ ಜಿಮ್ ಸಲಕರಣೆ ನಿರ್ವಹಣೆಗೆ ಸಿಬ್ಬಂದಿ ನಿಯೋಜಿಸಬೇಕೆಂದು ಮಾ.ವಿ. ರಾಮಪ್ರಸಾದ್ ಹೇಳಿದರೆ, ವಿಶೇಷಚೇತನರಿಗೆ ವ್ಹೀಲ್ ಛೇರ್ ವಿತರಿಸುವುದು ಸೂಕ್ತ, ನೀರಿನ ಶುಲ್ಕ ಮನ್ನಾ ಮಾಡುವ ಬಗ್ಗೆ ಆಲೋಚನೆ ಮಾಡಿ ಎಂದು ಮಾಜಿ ಮೇಯರ್ ಸುನಂದಾ ಪಾಲನೇತ್ರ ತಿಳಿಸಿದರು.

ಮೈಸೂರು ಸೌಂದರ್ಯಕ್ಕೆ ಒತ್ತು ನೀಡಲಾಗಿದೆ. ಮೈಸೂರು ಹೊರವಲಯದ ಅಭಿವೃದ್ಧಿಗೂ ಆದ್ಯತೆ ನೀಡಬೇಕಿತ್ತು. ಸ್ಮಶಾನ, ಗರಡಿ ಮನೆಗಳ ಉನ್ನತೀಕರಣಕ್ಕೆ ಪಾಲಿಕೆ ಬಜೆಟ್‌ನಲ್ಲಿ ಪ್ರಸ್ತಾಪಿಸಿಲ್ಲ ಎಂದು ಪ್ರೇಮಾ ಶಂಕರೇಗೌಡರು ತಿಳಿಸಿದರೆ, ಕಂದಾಯ ಬಡಾವಣೆಗಳಿಂದಲೂ ಆಸ್ತಿ ತೆರಿಗೆ ಸಂಗ್ರಹಿಸಬೇಕಿತ್ತು. ಕೆರೆಗಳ ಒತ್ತುವರಿಯಿಂದ ನಿರ್ಮಾಣವಾಗುತ್ತಿರುವ ಸ್ಲಂ ತಡೆಗೆ ಗಮನಹರಿಸಿ ಎಂದು ಶಾಂತಕುಮಾರಿ ನುಡಿದರು.

ಶಾಸಕರ ಅಭಿಪ್ರಾಯ: ಬಡತನ ರೇಖೆಗಿಂತ ಕೆಳಗಿರುವ ಕೊಳಚೆ ಪ್ರದೇಶದ ಜನರಿಗೆ ನೀರಿನ ಶುಲ್ಕದಲ್ಲಿ ಇನ್ನಷ್ಟು ರಿಯಾಯಿತಿ ನೀಡಲು ಸಾಧ್ಯವೇ ಎಂಬುದನ್ನು ಯೋಚಿಸಿ ಎಂದು ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದರಲ್ಲದೇ, ಪ್ರವಾಸಿಗರನ್ನು ಆಕರ್ಷಿಸಲು ಕಾರ್ಯಕ್ರಮ ರೂಪಿಸಿ, ರಾಜ್ಯ ಬಜೆಟ್‌ಗೂ ಮುನ್ನವೇ ಸಿಎಂ ಬಳಿಗೆ ನಿಯೋಗ ತೆರಳಿ ಮೈಸೂರಿನ ಸಮಗ್ರ ಅಭಿವೃದ್ಧಿಗೆ ಮನವಿ ಮಾಡಬೇಕು ಎಂದರು.

ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಮೈಸೂರಿನ ಅಭಿವೃದ್ಧಿಗೆ ಪಕ್ಷಾತೀತವಾಗಿ ಶ್ರಮಿಸೋಣ. ಕುಂಬಾರಕೊಪ್ಪಲು ಕ್ರೀಡಾಂಗಣ, ಈಜುಕೊಳದ ನಿರ್ಮಾಣ ಕಳೆದ ನಾಲ್ಕೈದು ವರ್ಷಗಳಿಂದ ಪ್ರಸ್ತಾಪವಾಗುತ್ತಿದೆ. ಈ ವರ್ಷವಾದರೂ ಅವುಗಳನ್ನು ಪೂರ್ಣಗೊಳಿಸಬೇಕು. ಎಲ್ಲರೂ ಜೊತೆಯಾಗಿ ಮುಖ್ಯಮಂತ್ರಿಗಳ ಬಳಿಗೆ ಹೋಗಿ ಅಭಿವೃದ್ಧಿ ಬಗ್ಗೆ ಚರ್ಚಿಸೋಣ ಎಂದರು.

ಸೋಮವಾರ ಮೈಸೂರಲ್ಲಿ 25ನೇ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಂಡ ಶ್ರೀಮತಿ ಸುಮಾ ಹಾಗೂ ಕೆ.ದಿನೇಶ್ ಅವರನ್ನು ಶಾಸಕ ಕೆ.ಹರೀಶ್‌ಗೌಡ, ಮುಖಂಡರಾದ ಸುಜಿತ್ ಕುಮಾರ್, ರವಿ ರಾಜಕೀಯ, ಕೆ.ಜಿ.ಕೊಪ್ಪಲು ಕೆ.ಗಿರೀಶ್, ಎಂ.ವಿಜಯಕುಮಾರ್, ಜಿ.ಮಂಜುಗೌಡ, ಉಮೇಶ್‌ಕುಮಾರ್, ಕೃಷ್ಣಪ್ಪ, ಜಯಂತ್, ಸಾಧಿಕ್, ವಿಶ್ವನಾಥ್, ಶೇಖರ್, ನಾಗೇಂದ್ರ ಇನ್ನಿತರರು ಅಭಿನಂದಿಸಿ, ಶುಭಾಶಯ ಕೋರಿದರು.

ಬಸವಮಾರ್ಗ ಫೌಂಡೇಶನ್‌ನಿಂದ ಪರಿಸರ ದಿನಾಚರಣೆ



ಮೈಸೂರು, ಜೂ.5(ಎಂಕೆ)– ಮೈಸೂರಿನ ಹೆಬ್ಬಾಳ ರಿಂಗ್ ರಸ್ತೆಯಲ್ಲಿರುವ ಬಸವಮಾರ್ಗ ಫೌಂಡೇಶನ್‌ನ ವ್ಯಸನ ಮುಕ್ತ ಕೇಂದ್ರದಲ್ಲಿ 150 ಸಸಿಗಳನ್ನು ನೆಡುವ ಮೂಲಕ 'ವಿಶ್ವ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಗಿಡ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಸವಮಾರ್ಗ ಫೌಂಡೇಶನ್ ಅಧ್ಯಕ್ಷ ಎಸ್.ಬಸವರಾಜು, ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಫೌಂಡೇಷನ್ ವತಿಯಿಂದ ವಿಶೇಷವಾಗಿ ಆಚರಿಸಲಾಗುತ್ತಿದೆ. 28ನೇ ಉಚಿತ ವ್ಯಸನ ಮುಕ್ತ ಶಿಬಿರದಲ್ಲಿ ಪಾಲ್ಗೊಂಡಿರುವ 100 ಮಂದಿ ಶಿಬಿರಾರ್ಥಿಗಳಿಗೆ ಪರಿಸರ ಪ್ರಜ್ಞೆ ಮತ್ತು ಜಾಗೃತಿ ಮೂಡಿಸುವ ಉದ್ದೇಶದಿಂದ ಅವರ ಕೈಯಿಂದಲೇ ಗಿಡ ನೆಡಿಸಿ, ಪಾಲನೆ ಮಾಡಲಾಗುವುದು ಎಂದರು.

ಗಿಡಗಳ ಸಂರಕ್ಷಣೆಗೆ ಅಗತ್ಯವಾದ ಟ್ರಿ ಗಾರ್ಡ್‌ಗಳನ್ನು ಜೆಡಿಎಸ್ ಮುಖಂಡ ಹೇಮಂತ್‌ಗೌಡ ಕೊಡುಗೆಯಾಗಿ ನೀಡಿ, ಪರಿಸರ ಸಂರಕ್ಷಣಾ ಕಾರ್ಯಕ್ಕೆ ಕೈಜೋಡಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಮಧು, ದೀಪು, ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ಟೋಲ್ ವಿಚಾರಕ್ಕೆ ಜಗಳ; ಯುವಕನ ಕೊಲೆಯಲ್ಲಿ ಅಂತ್ಯ

ರಾಮನಗರ: ಟೋಲ್ ಪಡೆಯುವ ವಿಚಾರಕ್ಕೆ ಸಿಬ್ಬಂದಿ ಹಾಗೂ ಯುವಕರ ನಡುವೆ ಗಲಾಟೆ ನಡೆದು ಟೋಲ್ ಸಿಬ್ಬಂದಿಯ ಕೊಲೆಯಲ್ಲಿ ಅಂತ್ಯವಾದ ಘಟನೆ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇಯ ರಾಮನಗರ ತಾಲೂಕಿನ ಶೇಷಗಿರಿಹಳ್ಳಿ ಟೋಲ್ ಪ್ಲಾಜಾ ಬಳಿ ಭಾನುವಾರ ಮಧ್ಯರಾತ್ರಿ ನಡೆದಿದೆ.

ಟೋಲ್ ಪಡೆಯುವ ವಿಚಾರಕ್ಕೆ ಸಿಬ್ಬಂದಿ ಹಾಗೂ ಕಾರಿನಲ್ಲಿ ಬಂದಿದ್ದ ಯುವಕರ ನಡುವೆ ಮಾರಾಮಾರಿಯಾಗಿತ್ತು. ಇದನ್ನೇ ಮನಸಿನಲ್ಲಿಟ್ಟುಕೊಂಡಿದ್ದ ಯುವಕರು ಟೋಲ್‌ನಲ್ಲಿ ಕೆಲಸ ಮಾಡ್ತಿದ್ದ ಪವನ್‌ಕುಮಾರ್(26)ನನ್ನು ಹತ್ಯೆ ಮಾಡಿದ್ದಾರೆ.

ಬೆಂಗಳೂರು ದಕ್ಷಿಣ ತಾಲೂಕಿನ ಕರಿಕಲ್ ತಾಂಡ್ಯ ನಿವಾಸಿ ಪವನ್‌ಕುಮಾರ್ ಕೆಲಸ ಮುಗಿಸಿ ಊಟಕ್ಕೆ ಹೋಗಿದ್ದಾಗ ಪವನ್ ಮೇಲೆ ಹಲ್ಲೆ ಮಾಡಿ ಕೊಲೆ ಮಾಡಲಾಗಿದೆ. ಟೋಲ್‌ನಿಂದ ಹಿಂಬಾಲಿಸಿಕೊಂಡು ಬಂದು ದುಷ್ಕರ್ಮಿಗಳು ಪವನ್ ಹತ್ಯೆಗೈದಿದ್ದಾರೆ. ರಾತ್ರಿ ಹತ್ತು ಗಂಟೆ ಸುಮಾರಿಗೆ ಟೋಲ್ ಬಳಿ ಗಲಾಟೆ ನಡೆದಿತ್ತು. ಬಳಿಕ ರಾತ್ರಿ 12 ಗಂಟೆಗೆ ಕೆಲಸ ಮುಗಿಸಿಕೊಂಡು ಊಟಕ್ಕೆಂದು ಹೊರಟಿದ್ದ. ಈ ವೇಳೆ ಪವನ್‌ನನ್ನು ಹಿಂಬಾಲಿಸಿದ ಯುವಕರು ಆತನ ಮೇಲೆ ಹಾಕಿ ಸ್ಟಿಕ್‌ನಿಂದ ಹಲ್ಲೆ ನಡೆಸಿ ಕೊಲೆ ಮಾಡಿದ್ದಾರೆ. ಹತ್ಯೆ ಮಾಡಿದ ಆರೋಪಿಗಳಿಗಾಗಿ ಬಿಡದಿ ಪೊಲೀಸರಿಂದ ಹುಡುಕಾಟ ನಡೆಯುತ್ತಿದೆ.

ಜೆಎಸ್‌ಎಸ್ ಕಾಲೇಜು ಪದವಿ ಪರೀಕ್ಷೆ ಫಲಿತಾಂಶ ಪ್ರಕಟ

ಮೈಸೂರು, ಜೂ. 5– ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು (ಸ್ವಾಯತ್ತ) ಏಪ್ರಿಲ್/ಮೇ 2023ರಲ್ಲಿ ನಡೆಸಿದ ಸ್ನಾತಕ ಪದವಿಯ ಮೊದಲನೇ ಮತ್ತು ಮೂರನೇ ಚತುರ್ಮಾಸ (ಎನ್‌ಇಪಿ) ಪರೀಕ್ಷೆಗಳ ಫಲಿತಾಂಶಗಳನ್ನು ಪ್ರಕಟಿಸಿದೆ. ಎಲ್ಲಾ ಫಲಿತಾಂಶಗಳನ್ನು UUCMS-Student Login ಮೂಲಕ ಪಡೆಯಬಹುದು. ಅಂಕಗಳ ಮರು ಎಣಿಕೆಗೆ ಮತ್ತು ಫೋಟೋಪ್ರತಿ ಪಡೆಯಲು ಕೊನೆಯ ದಿನ 15–06–2023 ಹಾಗೂ ಮರು ಮೌಲ್ಯಮಾಪನಕ್ಕೆ ಕೊನೆಯ ದಿನ 17–06–2023 ಆಗಿರುತ್ತದೆ.

ಪಾಲಿಕೆ ಬಜೆಟ್ ಪ್ರತಿಯಲ್ಲಿ ನಾಲ್ವಡಿ ಭಾವಚಿತ್ರ, ಸಂದೇಶ ಹಾಕದ್ದಕ್ಕೆ ಲೋಕೇಶ್ ಪಿಯಾ ಆಕ್ಷೇಪ



ಮೈಸೂರು,ಜೂ.5(ಎಂಕೆ)– ಮೈಸೂರು ನಗರಪಾಲಿಕೆ ಬಜೆಟ್ ಕೈಪಿಡಿಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರ ಹಾಗೂ ಅವರ ಸಂದೇಶ ಬಳಸದೇ ಇರುವುದಕ್ಕೆ ಪಾಲಿಕೆ ಸದಸ್ಯ ಲೋಕೇಶ್ ಪಿಯಾ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕೈಪಿಡಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್, ಕುವೆಂಪು, ಸರ್.ಎಂ.ವಿಶ್ವೇಶ್ವರಯ್ಯ ಹಾಗೂ ಕೌಟಿಲ್ಯ ಅವರ ಭಾವಚಿತ್ರ ಹಾಗೂ ಅವರ ಸಂದೇಶವನ್ನು ಮುದ್ರಿಸಲಾಗಿದೆ. ಆದರೆ, ಮೈಸೂರಿನ ಸರ್ವಾಂಗೀಣ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರ ಹಾಗೂ ಸಂದೇಶವನ್ನು ಹಾಕಬೇಕಾಗಿತ್ತು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತ್ಯುತ್ಸವ ಸಂದರ್ಭದಲ್ಲಿ ಪಾಲಿಕೆಯಿಂದ ನಾಲ್ವಡಿಯವರನ್ನು ಕಡೆಗಣಿಸಲಾಗಿದೆ. ಮೈಸೂರು ಮಹಾರಾಜರನ್ನು ನಾವು ಸಾಯುವವರೆಗೂ ಮರೆಯುವಂತಿಲ್ಲ. ಕೆ.ಆರ್.ಆಸ್ಪತ್ರೆ, ಜಿಲ್ಲಾಧಿಕಾರಿಗಳ ಕಚೇರಿ ಸೇರಿದಂತೆ ಹಲವಾರು ಪಾರಂಪರಿಕ ಕಟ್ಟಡಗಳು ಸೇರಿದಂತೆ ನಗರಪಾಲಿಕೆಯ ಕಟ್ಟಡವೂ ಕೂಡ ಮೈಸೂರು ಒಡೆಯರ್ ಕೊಡುಗೆಯಾಗಿದೆ. ಇಷ್ಟೆಲ್ಲಾ ಕೊಡುಗೆ ನೀಡಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರವನ್ನು ಬಳಸದೆ ಬಜೆಟ್ ಸಿದ್ಧಪಡಿಸಿದ ನಗರಪಾಲಿಕೆ ಆಯುಕ್ತರು ಮೈಸೂರಿಗರನ್ನು ಅವಮಾನಿಸಿದ್ದಾರೆ. ಕೂಡಲೇ ಕ್ಷಮಾಪಣೆ ಕೇಳಬೇಕು ಎಂದು ಲೋಕೇಶ್ ಪಿಯಾ ಒತ್ತಾಯಿಸಿದ್ದಾರೆ.

ಜೂ.9ರಂದು ಪಾಲಿಕೆ ವಿಶೇಷ ಕೌನ್ಸಿಲ್ ಸಭೆ

ಮೈಸೂರು, ಜೂ.5– ಜೂ.9ರ ಬೆಳಗ್ಗೆ 11 ಗಂಟೆಗೆ ಮಹಾನಗರ ಪಾಲಿಕೆಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ 2023ನೇ ಜೂನ್ ಮಾಹೆಯ ವಿಶೇಷ ಕೌನ್ಸಿಲ್ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.



ಚಾಮರಾಜ ವಿಧಾನಸಭಾ ಕ್ಷೇತ್ರದ ನೂತನ ಶಾಸಕ ಕೆ.ಹರೀಶ್‌ಗೌಡ ಅವರನ್ನು ಭಾನುವಾರ ಕೆ.ಜಿ.ಕೊಪ್ಪಲಿನಲ್ಲಿ ನಡೆದ ಸಮಾರಂಭದಲ್ಲಿ ಅಭಿನಂದಿಸಲಾಯಿತು. ಚಿತ್ರದಲ್ಲಿ ಕಾರ್ಪೊರೇಟರ್ ಪ್ರೇಮಾ ಶಂಕರೇಗೌಡ, ಡಿ.ರಾಮಚಂದ್ರು, ರವಿ ಮಂಚೇಗೌಡನಕೊಪ್ಪಲು, ಸಿ.ಮಂಜುನಾಥ್, ಮರಿಸ್ವಾಮಿ ಗೌಡ ಇನ್ನಿತರರಿದ್ದಾರೆ.

ಮಂಡ್ಯ ರಮೇಶ್‌ಗೆ ಅಮೆರಿಕದಲ್ಲಿ 'ಕನ್ನಡ ರಂಗಸಿರಿ' ಪ್ರಶಸ್ತಿ ಪ್ರದಾನ

ಮೈಸೂರು,ಜೂ.5(ಪಿಎಂ)– ಅಮೆರಿಕ ರಾಜಧಾನಿ ವಾಷಿಂಗ್ಟನ್‌ನಲ್ಲಿ ನೆಲೆಸಿರುವ



ಕನ್ನಡಿಗರ 'ರಂಗವರ್ತುಲ' ತಂಡದ ವತಿಯಿಂದ ವಾಷಿಂಗ್ಟನ್ ಡಿಸಿಯಲ್ಲಿರುವ ಸಿನೆಟಿಕ್ ಥಿಯೇಟರ್‌ನಲ್ಲಿ ತಂಡದ ಮೊಟ್ಟ ಮೊದಲ ರಂಗ ಪ್ರಸ್ತುತಿಯಾಗಿ ಡಾ.ಚಂದ್ರಶೇಖರ ಕಂಬಾರರ ಪ್ರಸಿದ್ಧ ನಾಟಕ 'ಕರಿಮಾಯಿ' ಶನಿವಾರ (ಜೂನ್ 3) ಪ್ರದರ್ಶನ ಕಂಡಿತು. ಇದೇ ವೇಳೆ ಕನ್ನಡ ರಂಗಭೂಮಿ ಕ್ಷೇತ್ರದಲ್ಲಿನ ಶ್ರೇಷ್ಠ ಸಾಧನೆಗಾಗಿ ರಂಗಕರ್ಮಿ ಮಂಡ್ಯ ರಮೇಶ್ ಅವರಿಗೆ 'ಕನ್ನಡ ರಂಗಸಿರಿ' ಪ್ರಶಸ್ತಿ ಪ್ರದಾನ ಮಾಡಲಾಯಿತು. ನಾಟಕ ಪ್ರದರ್ಶನದ ಬಳಿಕ ಮಾತನಾಡಿದ ಅಮೆರಿಕನ್ನಡ ಸಾಹಿತಿ ಡಾ.ಮೈಸೂರು ನಟರಾಜ್, ಕರ್ನಾಟಕದ ವೃತ್ತಿರಂಗಭೂಮಿ ಕಲಾವಿದರಂತೆಯೇ ಉತ್ಕೃಷ್ಟ ಮಟ್ಟದ ಪ್ರದರ್ಶನವನ್ನು ರಂಗವರ್ತುಲ ತಂಡದ 30ಕ್ಕೂ ಹೆಚ್ಚು ಹವ್ಯಾಸಿ ರಂಗಾಸಕ್ತರು ನೀಡಿದ್ದು, ನಿಜಕ್ಕೂ ನಿಮ್ಮ ಉತ್ಸಾಹ ಮೆಚ್ಚುವಂತದ್ದದ್ದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಾಟಕ ಪ್ರದರ್ಶನಕ್ಕೂ ಮುನ್ನ ಸುನೀತಾ ಅನಂತಸ್ವಾಮಿ ರಂಗಗೀತೆಗಳನ್ನು ಸಾದರಪಡಿಸಿದರು. ರಂಗವರ್ತುಲ ಸ್ಥಾಪಕ ನಿರ್ದೇಶಕ ನಿತೀಶ್ ಶ್ರೀಧರ್ ಸೇರಿದಂತೆ ತಂಡದ ಸದಸ್ಯರು ಹಾಜರಿದ್ದರು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಹಸಿರನ್ನು ಉಳಿಸಿ ಪರಿಸರ ಸಂರಕ್ಷಿಸಲು ಸಂಗೀತ ವಿವಿ ಕುಲಪತಿ ಕರೆ

ಮೈಸೂರು, ಜೂ.5–ಹಸಿರೇ ನಮ್ಮ ಉಸಿರು. ಆದ್ದರಿಂದ ಗಿಡವನ್ನು ನೆಟ್ಟು ಹಸಿರನ್ನು ಹೆಚ್ಚಿಸಿ ಪರಿಸರವನ್ನು ಸಂರಕ್ಷಿಸಿ ಎಂದು ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ನಾಗೇಶ್ ವಿ ಬೆಟ್ಟಕೋಟೆ ಕರೆ ನೀಡಿದರು.

ವಿಶ್ವವಿದ್ಯಾಲಯ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಗಿಡ ನೆಟ್ಟು ನಂತರ ಅವರು ಮಾತನಾಡಿದರು. ಪ್ಲಾಸ್ಟಿಕ್ ಮಾಲಿನ್ಯವನ್ನು ತಡೆಗಟ್ಟುವುದು 2023ರ ಧ್ಯೇಯವಾಕ್ಯವಾಗಿದ್ದು, ಈ ಮೂಲಕ ಪ್ಲಾಸ್ಟಿಕ್ ಅನ್ನು ತ್ಯಜಿಸಿ ಪರಿಸರವನ್ನು ಸಂರಕ್ಷಿಸಬೇಕಿದೆ ಎಂದು ಹೇಳಿದರು.



ನಮ್ಮೆಲ್ಲರ ಬದುಕಿಗೆ ಆಧಾರವಾಗಿರುವ ಪರಿಸರದ ರಕ್ಷಣೆಯ ಬಗ್ಗೆ ಮಕ್ಕಳಿಗೆ ತಿಳಿಹೇಳುವ ಮೂಲಕ ಅವರಲ್ಲಿ ಪರಿಸರ ಪ್ರೇಮ ಬೆಳೆಸುವ ಕಾರ್ಯಕ್ಕೆ ಪ್ರಜ್ಞಾವಂತ ಸಮುದಾಯ ಮುಂದಾಗಬೇಕಿದೆ. ಮುಂದಿನ ದಿನಗಳಲ್ಲಿ ಪರಿಸರ ಉಳಿಯಬೇಕಾದರೆ ನಾವೆಲ್ಲ ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತರಾಗಬೇಕಿದೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಮಾನವ ತನ್ನ ಅತೀಆಸೆಗೆ ಪರಿಸರದ ಮೇಲೆ ದೌರ್ಜನ್ಯ ಎಸಗುತ್ತಿದ್ದು, ಇದನ್ನು ತಪ್ಪಿಸುವ ಕೆಲಸಕ್ಕೆ ನಾವೆಲ್ಲ ಮುಂದಾಗಬೇಕು ಎಂದು ಕರೆ ನೀಡಿದರು. ಕಾಲಕಾಲಕ್ಕೆ ತಕ್ಕಂತೆ ಮಳೆ ಬೆಳೆ ಆಗಬೇಕಿದ್ದರೆ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳಬೇಕು. ನಮ್ಮೆಲ್ಲರಿಗೂ ಜೀವದಾತೆಯಾಗಿರುವ ಪರಿಸರದ ಬಗ್ಗೆ ನಾವು ಯಾವುದೇ ಕಾರಣಕ್ಕೂ ತಾತ್ಸಾರ ಮಾಡಬಾರದು. ಪ್ರತಿಯೊಂದು ಮನೆಯ ಮುಂದೆ ಗಿಡ ನೆಟ್ಟು ಬೆಳೆಸುವ ಪ್ರವೃತ್ತಿಯನ್ನು ನಾವು ಬೆಳೆಸಿಕೊಳ್ಳಬೇಕು. ವಾತಾವರಣದಲ್ಲಿ ಮರ ಹೆಚ್ಚಾದಂತೆ ಮರಗಿಡಗಳು ಮೋಡಗಳನ್ನು ಆಕರ್ಷಿಸಿ ಮಳೆ ಬರುವಂತೆ ಮಾಡುತ್ತವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಎನ್.ಎಸ್.ಎಸ್ ಸಂಯೋಜಕ ರಮೇಶ್ ಮತ್ತು ವಿವಿಯ ಅಧ್ಯಾಪಕ ವೃಂದ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಬ್ರಿಟಿಷರಿಂದ ದೇಶದ ಅರಣ್ಯ ಸಂಪತ್ತು ನಾಶ

ಪರಿಸರವಾದಿ, ಲೇಖಕ ಶಿವಾನಂದ ಕಳವೆ ವಿಷಾದ





ಪಾಂಡವಪುರದ ಹರವು ಗ್ರಾಮದಲ್ಲಿ ನಡೆದ ಪರಿಸರ ದಿನಾಚರಣೆಯಲ್ಲಿ ಮಕ್ಕಳು ಪರಿಸರ ಗೀತೆ ಹಾಡಿದರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಣ್ಯರು

ಪಾಂಡವಪುರ, ಜೂ.5– ಸಾಂಬಾರ್ ಪದಾರ್ಥಗಳ ವ್ಯಾಪಾರಕ್ಕೆಂದು ಭಾರತಕ್ಕೆ ಬಂದ ಬ್ರಿಟಿಷರು ದೇಶದ ಅರಣ್ಯ ಸಂಪತ್ತನ್ನು ನಾಶಗೊಳಿಸಿದರು ಎಂದು ಪರಿಸರವಾದಿ ಮತ್ತು ಲೇಖಕ ಶಿವಾನಂದ ಕಳವೆ ವಿಷಾದ ವ್ಯಕ್ತಪಡಿಸಿದರು.

ತಾಲೂಕಿನ ಹರವು ಗ್ರಾಮದ ರಾಮದೇವರ ದೇವಾಲಯದ ಆವರಣದ ದೇವರ ಕಾಡಿನಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪರಿಸರ ಬಳಗದ ಹರವು ದೇವೇಗೌಡ ನೇತೃತ್ವದಲ್ಲಿ 'ಇರುವುದೊಂದೇ ಭೂಮಿ, ಉಳಿಸಿಕೊಳ್ಳೋಣ ಸ್ವಾಮಿ' ಎಂಬ ಶೀರ್ಷಿಕೆಯಡಿ ನಡೆದ ವಿನೂತನ ಕಾರ್ಯಕ್ರಮದಲ್ಲಿ 'ಮರ ಅಭಿವೃದ್ಧಿಯ ಮರು ವಿಮರ್ಶೆ' ಎಂಬ ವಿಚಾರ ಕುರಿತು ಅವರು ಮಾತನಾಡಿದರು. ಡಚ್ಚರು ಮತ್ತು ಫ್ರೆಂಚರು ಸಾಂಬಾರ್ ಪದಾರ್ಥ ಗಳಲ್ಲೊಂದಾದ ಕಾಳು ಮೆಣಸಿನ ದರವನ್ನು ಏರಿಕೆ ಮಾಡಿದ ಪರಿಣಾಮ ಸಾಂಬಾರ್ ಪದಾರ್ಥಗಳ ನೇರ ಖರೀದಿಗೆ ಭಾರತಕ್ಕೆ ಆಗಮಿಸಿದ ಬ್ರಿಟಿಷರು ಇಲ್ಲಿನ ಕಾಡುಗಳನ್ನು ನಾಶ ಮಾಡಿದರು ಎಂದರು.

ಸರ್ಕಾರ ರೂಪಿಸುವ ಬೃಹತ್ ಯೋಜನೆಗಳು ಕೂಡ ಅರಣ್ಯ ನಾಶಕ್ಕೆ ಕಾರಣವಾಗಿದೆ. ಮರ ಬೆಳೆಸುವ ವಿಚಾರದಲ್ಲಿ ರೈತರು ಮಂಚೂಣಿಯಲ್ಲಿದ್ದಾರೆ. ರಾಜ್ಯದ ಅನೇಕ ರೈತರು ತಮ್ಮ ಜಮೀನುಗಳಲ್ಲಿ ನೂರಾರು ಮರಗಳನ್ನು ಬೆಳೆಸಿ ಪೋಷಣೆ ಮಾಡುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ರೈತ ಮರವನ್ನು ಕಡಿಯಲು ಅನುಮತಿ ನೀಡುವುದಿಲ್ಲ. ಮರವನ್ನು ಮಕ್ಕಳಂತೆ ಬೆಳೆಸಿದ್ದೇನೆ. ಕಡಿಸಲು ಮನಸು ಬರುವುದಿಲ್ಲ ಎಂದು ಹೇಳುತ್ತಾನೆ. ಇದು ರೈತರಿಗೆ ಪರಿಸರದ ಮೇಲಿರುವ ನಿಜವಾದ ಕಾಳಜಿ ಎಂದರು.

ಸರ್ಕಾರಗಳು ಜನರನ್ನು ಹೊರಗಿಟ್ಟು ಅರಣ್ಯ ರಕ್ಷಿಸಲು ಯೋಚಿಸುತ್ತವೆ. ಆದರೆ ವಾಸ್ತವವಾಗಿ ಇದು ಸಾಧ್ಯವಿಲ್ಲ. ಅರಣ್ಯಕ್ಕೆ ಬೇಲಿ ಹಾಕುವ ಅವಶ್ಯಕತೆ ಇಲ್ಲ. ಬದಲಾಗಿ ಅದರ ರಕ್ಷಣೆಯಾದರೆ ಸಾಕು. 1988ರ ಅರಣ್ಯ ಕಾಯ್ದೆ ಪ್ರಕಾರ ಅರಣ್ಯದಿಂದ ಹೊರಗೆ ಅರಣ್ಯ ಬೆಳೆಸುವುದಕ್ಕೆ ಮಹತ್ವ ಸಿಕ್ಕಿದೆ. ಅರಣ್ಯ ರಕ್ಷಣೆಗಾಗಿ ರೂಪಿಸಬೇಕಾದ ಯೋಜನೆಗಳ ಬಗ್ಗೆ ಅನೇಕರು ವರದಿ ನೀಡಿದ್ದಾರೆ. ಅದರ ಅನುಷ್ಠಾನಗೊಳಿಸಲು ಕಾಳಜಿಯ ಕೊರತೆ ಇದೆ. ಕಾಡಿಗೆ ಬೀಳುವ ಬೆಂಕಿ ಅರಣ್ಯ ಸುಡುತ್ತಿಲ್ಲ. ಬದಲಾಗಿ ಮನುಷ್ಯರನ್ನೇ ಸುಡುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಗಿಡಗಳನ್ನು ನೆಡಲಾಯಿತು. ಬಳಿಕ ಪರಿಸರ ಗೀತೆಗಳು, ಪ್ರಶ್ನೋತ್ತರ, ಸಂವಾದ ಹಾಗೂ ಮೈಸೂರು ಹರೀಶ್ ಅವರು ತಾರಸಿ ತೋಟಗಾರಿಕೆ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಾಮಾಜಿಕ ಹೋರಾಟಗಾರರಾದ ಹರವು ದೇವೇಗೌಡ, ಪ್ರಕಾಶ್, ಪರಶುರಾಮೇಗೌಡ, ಧನ್ಯಕುಮಾರ್, ಡಿ.ಕೆ.ಅಂಕಯ್ಯ, ಕೋ.ಪು. ಗುಣಶೇಖರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮುಂದಿನ ಪೀಳಿಗೆಗೆ ಪರಿಸರ ಉಳಿಸಿ: ಡಿಸಿ ಗೋಪಾಲಕೃಷ್ಣ



ಮಂಡ್ಯ, ಜೂ.5– ಪ್ರತಿಯೊಬ್ಬರೂ ಪರಿಸರವನ್ನು ತಮ್ಮ ಜೀವನದ ಭಾಗವಾಗಿಸಿಕೊಳ್ಳಬೇಕು. ಆ ಮೂಲಕ ಪರಿಸರ ಉಳಿಸಿ ಮುಂದಿನ ಪೀಳಿಗೆಗೂ ನೀಡುವ ಕೆಲಸ ಮಾಡಬೇಕಿದೆ ಎಂದು ಜಿಲ್ಲಾಧಿಕಾರಿ ಡಾ.ಹೆಚ್.ಎನ್. ಗೋಪಾಲಕೃಷ್ಣ ತಿಳಿಸಿದರು.

ಜಿಲ್ಲಾಡಳಿತ, ಜಿಪಂ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಚೇರಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ, ಮೈಸೂರು ಸಕ್ಕರೆ ಕಾರ್ಖಾನೆ, ವಲಯ ಅರಣ್ಯ ಅಧಿಕಾರಿಗಳ ಕಚೇರಿ ಪ್ರಾದೇಶಿಕ ಅರಣ್ಯ ವಿಭಾಗ, ಪರಿಸರ ರೂರಲ್ ಡೆವಲಪ್‌ಮೆಂಟ್ ಸೊಸೈಟಿ ವತಿಯಿಂದ ಮೈಸೂರು ಸಕ್ಕರೆ ಕಾರ್ಖಾನೆ ಆವರಣದಲ್ಲಿ ವಿಶ್ವ ಪರಿಸರ ದಿನದ ಪ್ರಯುಕ್ತ ಏರ್ಪಡಿಸಿದ್ದ ಸಸ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪರಿಸರ ಉಳಿಸುವ ಕೆಲಸ ಈಗಿನಿಂದಲೇ ಪ್ರಾರಂಭಿಸಿ. ಜೂ.5ಕ್ಕೆ ಮಾತ್ರ ಪರಿಸರ ದಿನ ಸೀಮಿತವಾಗದೇ ವರ್ಷಪೂರ್ತಿ ಪರಿಸರ ದಿನ ಆಚರಿಸಬೇಕು ಎಂದರು.

ಮಾನವನ ಮಿತಿಮೀರಿದ ಆಸೆಯಿಂದ ಅರಣ್ಯ ನಾಶವಾಗುತ್ತಿದ್ದು, ಜಲ ಮೂಲಗಳು ಬತ್ತಿ ಹೋಗಿ, ಪರಿಸರ ಕಲುಷಿತವಾಗುತ್ತಿದೆ. ಪರಿಸರದ ಉಳಿವಿಗೆ ಸರ್ಕಾರ ಹಲವು ಯೋಜನೆಗಳನ್ನು ರೂಪಿಸಿದ್ದು, ಪ್ರತಿಯೊಬ್ಬರೂ ಪರಿಸರದ ಉಳಿವಿಗೆ ಕೈಜೋಡಿಸಬೇಕು ಎಂದರು. ಯುವಜನರು ಹಾಗೂ ಮಕ್ಕಳಿಗೆ ಚಿಕ್ಕಂದಿನಿಂದಲೇ ಪರಿಸರದ ಬಗ್ಗೆ ಅರಿವು ಮೂಡಿಸಬೇಕು ಹಾಗೂ ಶಾಲಾ– ಕಾಲೇಜು ಪಠ್ಯದಲ್ಲಿ ಪರಿಸರದ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು ಎಂದರು.

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ನಿರ್ಮಿಸಿರುವ ಕೃಷ್ಣರಾಜಸಾಗರ, ಮೈಸೂರು ಸಕ್ಕರೆ ಕಾರ್ಖಾನೆ ಮಂಡ್ಯ ಜಿಲ್ಲೆಯ ಜನರ ಅಭಿವೃದ್ಧಿಗೆ ಕಾರಣವಾಗಿವೆ. ರೈತರ ಬೆಳವಣಿಗೆಗೆ ಮೂಲ ಕಾರಣವಾಗಿರುವ ಮೈಷುಗರ್ ಸಕ್ಕರೆ ಕಾರ್ಖಾನೆಯನ್ನು ಪುನರ್ ಆರಂಭ ಮಾಡಲು ಸರ್ಕಾರ ಚಾಲನೆ ಕೊಟ್ಟಿದೆ. ಅದನ್ನು ಉಳಿಸಿಕೊಂಡು ಹೋಗುವ ಕೆಲಸವನ್ನು ಜನರು ಮಾಡಬೇಕು ಎಂದರು.

ಇದೇ ವೇಳೆ ಜಿಪಂ ಸಿಇಓ ಶೇಕ್ ತನ್ವೀರ್ ಆಸಿಫ್ ಮಾತನಾಡಿದರು. ಚಿತ್ರಕಲೆಯಲ್ಲಿ ವಿಜೇತರಾದ ಶಾಲಾ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಮೈಷುಗರ್ ವ್ಯವಸ್ಥಾಪಕ ನಿರ್ದೇಶಕ ಪಾಟೀಲ್ ಅಪ್ಪಾ ಸಾಹೇಬ್, ಪರಿಸರ ಅಧಿಕಾರಿ ಬಿ.ಪಿ.ಗೀತಾ, ಮೈಷುಗರ್ ಪ್ರಧಾನ ವ್ಯವಸ್ಥಾಪಕ ಎನ್.ಆರ್. ವೇಣುಗೋಪಾಲ್, ಅರಣ್ಯಾಧಿಕಾರಿ ಶಂಕರೇಗೌಡ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್, ಪರಿಸರ ರೂರಲ್ ಡೆವಲಪ್‌ಮೆಂಟ್ ಸೊಸೈಟಿ ಅಧ್ಯಕ್ಷ ಎಂ. ಯೋಗೀಶ್ ಸೇರಿದಂತೆ ಇತರರಿದ್ದರು.

ನಾಲೆಗೆ ಉರುಳಿದ ಕಾರು: ನಾಲ್ವರು ಪಾರು



ಮಂಡ್ಯ, ಜೂ.5– ವಿ.ಸಿ.ನಾಲೆಗೆ ಕಾರು ಉರುಳಿ ಬಿದ್ದ ಪರಿಣಾಮ ನಾಲ್ವರು ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ತಾಲೂಕಿನ ಮಾಚಹಳ್ಳಿ ಗ್ರಾಮದಲ್ಲಿ ನಡೆದಿದೆ. ಪಾಂಡವಪುರ ಮೂಲದ ವ್ಯಕ್ತಿಯೊಬ್ಬರು ಪತ್ನಿ ಹಾಗೂ ಇಬ್ಬರು ಮಕ್ಕಳೊಂದಿಗೆ ಪಾಂಡವಪುರ ಕಡೆ ತೆರಳುತ್ತಿದ್ದ ಸಂದರ್ಭ ಮಾಚಹಳ್ಳಿಯ ತಿರುವಿನಲ್ಲಿ ನಿಯಂತ್ರಣ ತಪ್ಪಿದ ಕಾರು ನಾಲೆಗೆ ಉರುಳಿದೆ. ನಾಲೆಯಲ್ಲಿ ನೀರಿನ ಪ್ರಮಾಣ ಕಡಿಮೆ ಇದ್ದ ಕಾರಣ ಕಾರಿನಲ್ಲಿದ್ದ ಇಡೀ ಕುಟುಂಬ ಪ್ರಾಣಾಪಾಯದಿಂದ ಪಾರಾಗಿದೆ. ವಿ.ಸಿ.ನಾಲೆಗೆ ಕಾರು ಬಿದ್ದ ತಕ್ಷಣ ರಕ್ಷಣೆಗೆ ಧಾವಿಸಿದ ಮಾಚಹಳ್ಳಿ ಗ್ರಾಮಸ್ಥರು, ಕಾರಿನೊಳಗಿದ್ದವರನ್ನು ರಕ್ಷಿಸಿದ್ದಾರೆ. ಬಳಿಕ ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ಗ್ರಾಮಸ್ಥರು ರವಾನಿಸಿದ್ದು, ಈ ಸಂಬಂಧ ಶಿವಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಾಯಗೊಂಡಿದ್ದ ಬಾಲಕ ಸಾವು

ಭಾರತೀನಗರ, ಜೂ.5– ಉಯ್ಯಾಲೆ ಆಡಲು ಹೋಗಿ ಚರಂಡಿಗೆ ಬಿದ್ದು ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಬಾಲಕನೋರ್ವ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾನೆ. ಇಲ್ಲಿಗೆ ಸಮೀಪದ ಎಸ್.ಐ.ಹಾಗಲಹಳ್ಳಿ ಗ್ರಾಮದ ನಿವಾಸಿ ಪೂರ್ಣಿಮಾ ನಾಗೇಶ್‌ಚಾರಿ ದಂಪತಿ ಪುತ್ರ ಮಹೇಂದ್ರ (9) ಸಾವನ್ನಪ್ಪಿದವನು. ಈತ ಜೂ.2 ರಂದು ಮಂಡ್ಯದ ಹೊರಳು ಸರ್ಕಲ್ ಬಳಿಯ ತಮ್ಮ ನಿವಾಸದ ಮುಂದೆ ಮರಕ್ಕೆ ಉಯ್ಯಾಲೆ ಕಟ್ಟಿಕೊಂಡು ಆಡುತ್ತಿದ್ದಾಗ ಚರಂಡಿಗೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದಾನೆ. ಈತನಿಗೆ ಸ್ಥಳೀಯವಾಗಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಾಣಿವಿಲಾಸ್ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾನೆ.

ಕ್ಯಾಂಟರ್, ಗೂಡ್ಸ್ ಆಟೋ ನಡುವೆ ಡಿಕ್ಕಿ: ಓರ್ವ ಸಾವು

ಮದ್ದೂರು, ಜೂ.5– ಕ್ಯಾಂಟರ್ ಹಾಗೂ ಗೂಡ್ಸ್ ಆಟೋ ನಡುವೆ ಡಿಕ್ಕಿ ಸಂಭವಿಸಿದ ಪರಿಣಾಮ ಆಟೋ ಚಾಲಕ ಮೃತಪಟ್ಟು, ಕ್ಲೀನರ್ ಗಾಯಗೊಂಡಿರುವ ಘಟನೆ ತಾಲೂಕಿನ ಕೆಸ್ತೂರು ಪೊಲೀಸ್ ಠಾಣೆ ವ್ಯಾಪ್ತಿಯ ಚಾಕನಕೆರೆ ಗ್ರಾಮದ ಬಳಿ ನಡೆದಿದೆ.

ಹಾಸನ ಜಿಲ್ಲೆ ಶಾಂತಿ ಗ್ರಾಮ ಸಮೀಪದ ಚಾಮನಕೊಪ್ಪಲಿನ ತಿಮ್ಮೇಗೌಡರ ಪುತ್ರ ರಘು (52) ಮೃತ ಆಟೋ ಚಾಲಕ. ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಆತ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾನೆ. ಗೂಡ್ಸ್ ಆಟೋ ಕ್ಲೀನರ್ ಬೆಂಗಳೂರು ಕೆಂಗೇರಿ ಸಮೀಪದ ಅಂಚೆಪಾಳ್ಯದ ನಿವಾಸಿ ಚಿಕ್ಕೇಗೌಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಮೃತ ಚಾಲಕ ರಘು ಹುಲಿಯೂರು ದುರ್ಗದ ಕೋಳಿ ವ್ಯಾಪಾರಿಯೊಬ್ಬರ ಬಳಿ ವಾಹನ ಚಾಲಕನಾಗಿ ಕೆಲಸ ಮಾಡುತ್ತಿದ್ದ ಎನ್ನಲಾಗಿದೆ.

ಅಪಘಾತದ ನಂತರ ಕ್ಯಾಂಟರ್ ಚಾಲಕ ಸ್ಥಳದಿಂದ ಪರಾರಿಯಾಗಿದ್ದು, ಕೆಸ್ತೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಕೆರೆಗೆ ಹಾರಿ ಯುವತಿ ಆತ್ಮಹತ್ಯೆ

ಮಂಡ್ಯ, ಜೂ.5– ಯುವತಿಯೊಬ್ಬಳು ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಬೂದನೂರು ಗ್ರಾಮದಲ್ಲಿ ನಡೆದಿದೆ.

ನಂಜನಗೂಡು ತಾಲೂಕಿನ ಕುರಹಟ್ಟಿ ಗ್ರಾಮದ ಚಾಂದಿನಿ (22) ಆತ್ಮಹತ್ಯೆ ಮಾಡಿಕೊಂಡ ಯುವತಿ. ಬೂದನೂರು ಗ್ರಾಮದ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ಕೆರೆ ಬಳಿಗೆ ಯುವಕನೊಂದಿಗೆ ಬೈಕ್‌ನಲ್ಲಿ ಬಂದ ಯುವತಿ ಕೆಲಕಾಲ ಕೆರೆ ಸ್ನಾನಘಟ್ಟದ ಬಳಿ ಕುಳಿತಿದ್ದಳು. ಕೆಲ ಹೊತ್ತಿನ ಬಳಿಕ ಯುವಕ ಅಲ್ಲಿಂದ ತೆರಳಿದ್ದು, ಯುವತಿ ತನ್ನ ಬ್ಯಾಗು, ಚಪ್ಪಲಿ ಮುಂತಾದ ವಸ್ತುಗಳನ್ನು ಕೆರೆ ದಡದ ಮೇಲೆ ಇಟ್ಟು ಕೆರೆಗೆ ಹಾರಿದ್ದಾಳೆ.

ಸಂಜೆ ಕೆರೆ ದಡದ ಮೇಲೆ ಬ್ಯಾಗ್ ಇರುವುದನ್ನು ಗಮನಿಸಿದ ಗ್ರಾಮಸ್ಥರು ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದಾರೆ. ಭಾನುವಾರ ಸಂಜೆ ವೇಳೆಗೆ ಶವ ತೇಲುತ್ತಿರುವುದನ್ನು ನೋಡಿದ ಗ್ರಾಮಸ್ಥರು ಪೊಲೀಸರಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ಆಗಮಿಸಿ ಪೊಲೀಸರು ಶವವನ್ನು ಕೆರೆಯಿಂದ ಹೊರತೆಗೆದು ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ಮರಣೋತ್ತರ ನಡೆಸಿ, ವಾರಸುದಾರರಿಗೆ ಒಪ್ಪಿಸಿದ್ದಾರೆ.

ಘಟನೆ ಕುರಿತು ಪ್ರತಿಕ್ರಿಯಿಸಿರುವ ಮೃತಳ ಪೋಷಕರು, ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಉದ್ಯೋಗಿಯಾಗಿದ್ದ ಚಾಂದಿನಿ ಗ್ರಾಮಕ್ಕೆ ಬಂದಿದ್ದಳು. ಊರಿನಿಂದ ಬೆಂಗಳೂರಿಗೆ ತೆರಳುವ ವೇಳೆ ಈ ಘಟನೆ ಸಂಭವಿಸಿದೆ. ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ ಎಂದಿದ್ದಾರೆ. ಈ ಸಂಬಂಧ ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ನೂತನ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರನ್ನು ಹಿರಿಯ ಕಾಂಗ್ರೆಸ್ ಮುಖಂಡ, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಸಾದುಲ್ಲಾಖಾನ್ ಹಾಗೂ ಇತರರು ಅಭಿನಂದಿಸಿದರು.

ಎಕ್ಸ್‌ಪ್ರೆಸ್ ವೇನಲ್ಲಿ ಕಾರು ಪಲ್ಟಿ: ಇಬ್ಬರು ಗಂಭೀರ



ಮಂಡ್ಯ, ಜೂ.5– ಕಾರು ಪಲ್ಟಿ ಹೊಡೆದ ಪರಿಣಾಮ ಇಬ್ಬರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಚಿಕ್ಕಮಂಡ್ಯ ಬಳಿ ಸೋಮವಾರ ಮಧ್ಯಾಹ್ನ ನಡೆದಿದೆ. ಬೆಂಗಳೂರು ಮೂಲದ ಅರ್ಜುನ್(30), ಮಂಜುನಾಥ್ ಜಿ.ಅಡಿಗ(25) ಗಂಭೀರವಾಗಿ ಗಾಯಗೊಂಡವರು. ಕಾರಿನಲ್ಲಿದ್ದ ಇನ್ನುಳಿದ ಮೂವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಇವರೆಲ್ಲಾ ಬೆಂಗಳೂರಿನಿಂದ ಮೈಸೂರಿಗೆ ತೆರಳುತ್ತಿದ್ದರು. ಆದರೆ ಚಿಕ್ಕಮಂಡ್ಯ ಬಳಿ ಟೈರ್ ಸಿಡಿದ ಪರಿಣಾಮ ಚಾಲಕನ ನಿಯಂತ್ರಣ ಕಳೆದುಕೊಂಡ ಕಾರು 2 ಬಾರಿ ಪಲ್ಟಿ ಹೊಡೆದು ಈ ದುರ್ಘಟನೆ ಸಂಭವಿಸಿದೆ. ಅಪಘಾತಕ್ಕೀಡಾದ ವೇಳೆ ಕಾರಿನ ಮುಂದೆ ಯಾವುದೇ ವಾಹನಗಳು ಇಲ್ಲದ ಪರಿಣಾಮ ತಪ್ಪಿದ ದೊಡ್ಡ ಅನಾಹುತ ತಪ್ಪಿದೆ. ಗಾಯಗೊಂಡವರಿಗೆ ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುತ್ತಿದ್ದು, ಸ್ಥಳಕ್ಕೆ ಮಂಡ್ಯ ಸೆಂಟ್ರಲ್ ಠಾಣಾ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಒಂದನೇ ಪುಟದಿಂದ

ಅನುಕೂಲಸ್ಥರು ಗ್ಯಾರಂಟಿ ತ್ಯಜಿಸಿ

ಈಡೇರಿಸಿದ್ದೇವೆ. ಹಾಗೆಂದು ಅನಗತ್ಯವಾಗಿ ವಿದ್ಯುತ್ ಬಳಕೆ ಮಾಡಬಾರದು. ನೀವು ಈ ಹಿಂದೆ ಎಷ್ಟು ಬಳಸುತ್ತಿದ್ದಿರೋ ಅಷ್ಟಕ್ಕೆ ಸೀಮಿತರಾಗಿ. ನೀವು ಬಳಕೆ ಮಾಡುವುದಕ್ಕಿಂತ ಶೇ.10 ರಷ್ಟು ವಾರ್ಷಿಕ ಹೆಚ್ಚುವರಿ ವಿದ್ಯುತ್ ನೀಡುತ್ತೇವೆ. ಸರ್ಕಾರ ನಿಗದಿಪಡಿಸಿರುವ ಮಿತಿಯಲ್ಲಿ ನೀವು ಎಷ್ಟು ಬಳಸುತ್ತಿದ್ದಿರೋ ಅಷ್ಟಕ್ಕೆ ಸೀಮಿತವಾಗಿ. ಇಲ್ಲದಿದ್ದರೆ ಹೆಚ್ಚುವರಿ ಬಳಕೆಗೆ ದರ ತೆರಬೇಕಾಗುತ್ತದೆ ಎಂದು ಹೇಳಿದರು.

ಅರಣ್ಯ ಇಲಾಖೆ ಆಯೋಜಿಸಿದ್ದ ವಿಶ್ವ ಪರಿಸರ 2023 ಪ್ರಶಸ್ತಿಗಳನ್ನು ವಿತರಿಸಿ ಮಾತನಾಡಿದ ಅವರು, ಸಂಕಷ್ಟದಲ್ಲಿರುವ ನಾಡಿನ ಬಡವರು ಮತ್ತು ಮಧ್ಯಮವರ್ಗದವರ ನೆರವಿಗಾಗಿ ನಾವು ಉಚಿತ ವಿದ್ಯುತ್ ನೀಡಲು ಮುಂದಾಗಿದ್ದೇವೆ.

ಬಿಜೆಪಿ ಕುಮ್ಮಕ್ಕು: ಉಳ್ಳವರು ತಮಗೆ ಅಗತ್ಯವಿಲ್ಲವೆಂದರೆ, ಗ್ಯಾರಂಟಿ ಯೋಜನೆಗಳನ್ನು ಕೈ ಬಿಟ್ಟು, ಈ ವರ್ಗಕ್ಕೆ ಸಹಕರಿಸಿ. ಜನರಿಂದ ತಿರಸ್ಕರಿಸಲ್ಪಟ್ಟ ಬಿಜೆಪಿಯು ವಿದ್ಯುತ್ ಅನ್ನು ಅನಗತ್ಯ ದುರ್ಬಳಕೆ, ದುಂದುವೆಚ್ಚ ಹಾಗೂ ದುರುಪಯೋಗ ಮಾಡಲು ಕುಮ್ಮಕ್ಕು ಕೊಡುತ್ತಿದೆ. ಇದು ಅತ್ಯಂತ ಜನ ವಿರೋಧಿ. ಗ್ಯಾರಂಟಿ ಯೋಜನೆಯಡಿ ದುಂದುವೆಚ್ಚಕ್ಕೆ ಅವಕಾಶವಿರುವುದಿಲ್ಲ. ನಾಡಿನ ಪ್ರಜ್ಞಾವಂತ ಜನತೆ ಬಿಜೆಪಿಯ ಮಾತುಗಳಿಗೆ ಸೊಪ್ಪು ಹಾಕದೆ, ಪ್ರಯೋಜನವನ್ನು ಬಳಸಿಕೊಳ್ಳುವಂತೆ ಮನವಿ ಮಾಡಿದರು.

ಮನುಷ್ಯ ಪ್ರಕೃತಿಯ ಅವಿಭಾಜ್ಯ ಅಂಗ. ಪ್ರಕೃತಿಯ ನಾಶ. ನಮ್ಮ ನಾಶ. ಹೀಗಾಗಿ ಗಾಳಿ, ಬೆಳಕು, ನೀರು, ವಿದ್ಯುತ್ ಅನ್ನು ದುಂದುವೆಚ್ಚ ಮಾಡಬಾರದು ಎಂದರು.

ಪೂರ್ವಿಕರಿಗೆ ನಮ್ಮ ಪರಿಸರ ಮತ್ತು ಪ್ರಕೃತಿಯ ಬಗ್ಗೆ ಇದ್ದ ಕಾಳಜಿ ಅನನ್ಯ. ಒಂದು ಮರ ಕಡಿದರೆ ಮತ್ತೊಂದು ಗಿಡ ನೆಡುತ್ತಿದ್ದರು. ಆದರೆ ಈಗ ಕೇವಲ ಮರ ಕಡಿಯುವುದಾಗಿದೆ. ಇದೇ ನಮ್ಮ ಪೂರ್ವಿಕರಿಗೂ, ನಮಗೂ ಇರುವ ವ್ಯತ್ಯಾಸ. ಪ್ರಕೃತಿ ಮತ್ತು ಮನುಷ್ಯನ ಜೀವನ ಒಂದಕ್ಕೊಂದು ಹೊಂದಿಕೊಂಡಿದೆ ಎಂದು ಅವರು ತಿಳಿಸಿದರು.

ಪ್ರಕೃತಿಯ ಜೊತೆಗೆ ಮನುಷ್ಯ ಬದುಕಬೇಕು. ಕಾಡು ಚೆನ್ನಾಗಿದ್ದರೆ ಒಳ್ಳೆಯ ಮಳೆ, ಬೆಳೆಯಾಗಿ ಜೀವನ ಸುಗಮವಾಗುತ್ತದೆ. ನಾವು ಪ್ರಕೃತಿಯನ್ನೂ, ಭೂಮಿತಾಯಿಯನ್ನು ಪ್ರೀತಿಸಬೇಕು. ನಾವು ಅದನ್ನು ನಮ್ಮ ಕರ್ತವ್ಯ ಎಂದು ಭಾವಿಸಬೇಕು. ಪರಿಸರ ಉತ್ತಮವಾಗಿದ್ದರೆ, ಆರೋಗ್ಯಕರ ಜೀವನ ಸಾಧ್ಯ ಎಂದರು. ಪರಿಸರದ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ಜನರಲ್ಲಿ ಜಾಗೃತಿ ಮೂಡಿಸಲು ವಿಶ್ವದಾದ್ಯಂತ ಇಂದು ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ನಮ್ಮ ಪರಿಸರವನ್ನು ಚೊಕ್ಕಟವಾಗಿಡುವಂತಹ ಜಾಗೃತಿ ಎಲ್ಲರಲ್ಲೂ ಮೂಡಬೇಕು. ಪ್ರಕೃತಿ,, ಭೂಮಿ ಆರೋಗ್ಯಕರವಾಗಿದ್ದರೆ ಮಾತ್ರ ನಮ್ಮ ಬದುಕು ಹಸನಾಗಿರುತ್ತದೆ . ಪ್ರಕೃತಿಯ ವಿಕೋಪಕ್ಕೆ ನಾವು ಒಳಗಾಗುತ್ತಿದ್ದೇವೆ. ಪ್ರಕೃತಿಯಲ್ಲಿ ಅನೇಕ ಬದಲಾವಣೆ ಕಾಣುತ್ತಿದ್ದೇವೆ. ಪ್ರಕೃತಿಯಲ್ಲಾಗುವ ಅನಾಹುತಗಳನ್ನು ತಪ್ಪಿಸಬೇಕಿದೆ ಎಂದು ಹೇಳಿದರು.

2016 ರಲ್ಲಿ ನಮ್ಮ ಸರ್ಕಾರದ ಅವಧಿಯಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಲಾಗಿತ್ತು. ಪ್ಲಾಸ್ಟಿಕ್ ನಿಂದ ಪ್ರಕೃತಿಗೆ ಹಾನಿಯಾಗುತ್ತದೆ. ಕೈಗಾರಿಕೆ ತ್ಯಾಜ್ಯ ವಸ್ತುಗಳು, ಪ್ಲಾಸ್ಟಿಕ್ ಬಳಕೆ, ಕಾಡು ಕಡಿಯುವುದು, ನೀರಿನ ಬಳಕೆಯನ್ನು ಪ್ರಕೃತಿಯ ಹಿತದೃಷ್ಟಿಯಿಂದ ಬಳಸುವುದನ್ನು ಕಲಿತರೆ, ನಮಗೆ ಹಾಗೂ ಪ್ರಕೃತಿಗೆ ಒಳಿತು ಎಂದರು.

ಮಕ್ಕಳಲ್ಲಿ ಪ್ರಕೃತಿಯನ್ನು ಕಾಪಾಡುವ ಮನೋಭಾವ ಬಂದರೆ ಅದು ಮುಂದಿನ ಪೀಳಿಗೆಗೆ ಅನುಕೂಲವಾಗುತ್ತದೆ. ನಾವು ಮಾಡುವುದನ್ನೇ ಮಕ್ಕಳು ಕಲಿಯುತ್ತಾರೆ. ಎಳೆ ಮನಸ್ಸಿನ ಮೇಲೆ ಒಳ್ಳೆಯದರ ಪರಿಣಾಮವನ್ನು ಉಂಟು ಮಾಡಬೇಕು. ಒಳ್ಳೆಯದನ್ನು ಅನುಸರಿಸಿ ಜೀವನ ನಡೆಸಿದರೆ ಮುಂದಿನ ಪೀಳಿಗೆಗೆ ಅನುಕೂಲ ಹಾಗೂ ಮಾರ್ಗದರ್ಶನವಾಗುತ್ತದೆ ಎಂದು ತಿಳಿಸಿದರು.

ಉಳಿತಾಯ ಬಜೆಟ್

ಸ್ಥಾವರಗಳ ವಿದ್ಯುತ್ ಬಿಲ್ ಪಾವತಿಗಾಗಿ 9,538 ಲಕ್ಷ ರೂ., ನೌಕರರ ವೇತನ, ಪಿಂಚಣಿಗಾಗಿ 7,959 ಲಕ್ಷ ರೂ., 15ನೇ ಹಣಕಾಸು ಆಯೋಗದ ಅನುದಾನ 5,452 ಲಕ್ಷ ರೂ., ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಿಂದ 50 ಲಕ್ಷ ರೂ. ಸೇರಿದಂತೆ ವಿವಿಧ ಮೂಲಗಳಿಂದ ಒಟ್ಟು 1,05,801.64 ಲಕ್ಷ ರೂ. ಆದಾಯವನ್ನು ಪಾಲಿಕೆಯು ನಿರೀಕ್ಷಿಸಲಾಗಿದೆ ಎಂದು ಆಯ–ವ್ಯಯದಲ್ಲಿ ನಮೂದಿಸಲಾಗಿದೆ.

ವೆಚ್ಚಗಳು: ನಗರ ಬೆಳೆಯುತ್ತಿದ್ದಂತೆಯೇ ಜನಸಂಖ್ಯೆಯೂ ಹೆಚ್ಚಾಗುತ್ತಿದ್ದು, ವೇಗವಾಗಿ ಅಭಿವೃದ್ಧಿಯಾಗುತ್ತಿರುವ ಕಾರಣ, ನಾಗರಿಕರಿಗೆ ಮೂಲ ಸೌಕರ್ಯ ಒದಗಿಸಲು ಕ್ರೋಢೀಕರಣವಾಗುವ ನೀರು ಪೂರೈಕೆ, ರಸ್ತೆ, ಚರಂಡಿ ಅಭಿವೃದ್ಧಿ, ಬೀದಿ ದೀಪ, ಪಾರ್ಕ್, ಸ್ಮಶಾನ ನಿರ್ವಹಣೆ, ಸ್ವಚ್ಛತೆ, ಕೆರೆ, ಕ್ರೀಡಾಂಗಣ ಅಭಿವೃದ್ಧಿ ಸೇರಿದಂತೆ ವಿವಿಧ ಬಾಬ್ತುಗಳಿಗೆ ಈ ವರ್ಷ ಒಟ್ಟು 1,04,896.50 ಲಕ್ಷ ರೂ. ಖರ್ಚು ಮಾಡಲು ನಿರ್ಧರಿಸಲಾಗಿದೆ. ಶಾಸಕರಾದ ಕೆ. ಹರೀಶ್‌ಗೌಡ, ಟಿಎಸ್. ಶ್ರೀವತ್ಸ ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಉಪಮೇಯರ್ ಡಾ. ಜಿ. ರೂಪಾ, ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ, ಹಣಕಾಸು ಸ್ಥಾಯಿ ಸಮಿತಿ ಸದಸ್ಯರು, ಪಾಲಿಕೆ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಪರಿಣಾಮಕಾರಿ ವ್ಯವಸ್ಥೆ ಜಾರಿ

ಗಣಕೀಕರಣಗೊಳಿಸಲು ಮುಂದಾಗಿರುವ ಪಾಲಿಕೆಯು, ಪ್ರಕ್ರಿಯೆಗೆ ಶೀಘ್ರ ಚಾಲನೆ ನೀಡಲು ತಯಾರಿ ನಡೆಸಿದೆ. ಜ್ಞಾನ ಸಿರಿ ಯೋಜನೆಯಡಿ ಪಾಲಿಕೆ ವ್ಯಾಪ್ತಿಯ ಸರ್ಕಾರಿ ಪ್ರೌಢಶಾಲೆ, ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ಹೆಚ್ಚು ಅಂಕ ಗಳಿಸಿದ 10 ಮಂದಿ ವಿದ್ಯಾರ್ಥಿನಿಯರಿಗೆ ತಲಾ 50,000 ರೂ. ಶಿಕ್ಷಣ ಪ್ರೋತ್ಸಾಹ ಧನ ನೀಡಲು ನಿರ್ಧರಿಸಲಾಗಿದೆ. ಅದೇ ರೀತಿ ಕ್ಷೌರಿಕ, ಮಡಿವಾಳ, ಮಂಗಳವಾದ್ಯ ನುಡಿಸುವವರು, ವಿಶ್ವಕರ್ಮ, ಕೆತ್ತನೆ ಕೆಲಸ ಮಾಡುವವರಿಗೆ ಒಂದು ಬಾರಿಗೆ 10,000 ರೂ. ಪ್ರೋತ್ಸಾಹ ಧನ ನೀಡಲು ಉದ್ದೇಶಿಸಲಾಗಿದೆ.

ಎಸ್‌ಸಿ, ಎಸ್‌ಟಿ ಕಲ್ಯಾಣ ಕಾರ್ಯಕ್ರಮ: ಪಾಲಿಕೆ ವ್ಯಾಪ್ತಿಯಲ್ಲಿ ಎಸ್‌ಸಿ–ಎಸ್‌ಟಿ ಸಮುದಾಯದವರಿಗೆ ಸ್ವಯಂ ಉದ್ಯೋಗ, ವ್ಯಾಸಂಗ, ಕ್ರೀಡಾ, ವೈದ್ಯಕೀಯ ಸಹಾಯ ಧನ, ಬಿಪಿಎಲ್ ಕಾರ್ಡ್ ಹೊಂದಿರುವ ಅಶಕ್ತ 10 ಮಹಿಳಾ ಆಟೋ ಚಾಲಕರಿಗೆ ಇ–ಆಟೋ (ಎಲೆಕ್ಟ್ರಿಕ್ ಪ್ಯಾಸೆಂಜರ್ ಆಟೋ)ಗಳನ್ನು ನೀಡಲುದ್ದೇಶಿಸಲಾಗಿದೆ. ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳನ್ನೂ ಮುಂದುವರಿಸಲು ನಿರ್ಧರಿಸಲಾಗಿದೆ.

ವೃತ್ತಗಳ ಅಭಿವೃದ್ಧಿ: ವಾಹನ ದಟ್ಟಣೆಯಿಂದ ಟ್ರಾಫಿಕ್ ಜಾಮ್ ಆಗುವುದನ್ನು ತಡೆಯಲು ಕೆ.ಆರ್. ಕ್ಷೇತ್ರದ ನಿಜಲಿಂಗಪ್ಪ ವೃತ್ತ, ಅಶೋಕ ವೃತ್ತ ಮತ್ತು ಅಗ್ರಹಾರ ವೃತ್ತ, ಚಾಮರಾಜ ಕ್ಷೇತ್ರದ ಕುಂಬಾರ ಕೊಪ್ಪಲು ಸರ್ಕಲ್, ವಾಲ್ಮೀಕಿ ರಸ್ತೆ ಹುಣಸೂರು ರಸ್ತೆ ಜಂಕ್ಷನ್, ಹೆಬ್ಬಾಳು ಸರ್ಕಲ್, ನರಸಿಂಹರಾಜ ಕ್ಷೇತ್ರದ ಮಿಲೇನಿಯಂ ಸರ್ಕಲ್, ಫೌಂಟೇನ್ ಸರ್ಕಲ್ ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಶಾರದಾದೇವಿನಗರ ಸರ್ಕಲ್‌ಗಳನ್ನು ಪಾಲಿಕೆ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ.

ಉದ್ಯಾನವನ, ಕೆರೆ ಅಭಿವೃದ್ಧಿ: ಮೈಸೂರಿನ ನಾಲ್ಕು ವಿಧಾನಸಭಾ ಕ್ಷೇತ್ರಗಳ ತಲಾ 2 ಉದ್ಯಾನವನ, ಕೆರೆ ಕಲ್ಯಾಣಿಗಳನ್ನು ಅಭಿವೃದ್ಧಿಪಡಿಸಲು ಪಾಲಿಕೆಯು ಬಜೆಟ್‌ನಲ್ಲಿ ಪ್ರಕಟಿಸಿದೆ. ಸರಸ್ವತಿಪುರಂ, ಎಂಆರ್‌ಸಿ ಯಾರ್ಡ್ ಬಳಿಯ ಕಲ್ಯಾಣಿಗಳ ಹೂಳು ತೆಗೆದು ಅಭಿವೃದ್ಧಿಪಡಿಸಲು ಪಾಲಿಕೆ ಮುಂದಾಗಿದೆ.

ಕ್ರೀಡಾಂಗಣ, ಈಜುಕೊಳ: ಪ್ರತೀ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ ಕಿರು ಕ್ರೀಡಾ ಸಂಕೀರ್ಣ (Small Sports Complex) ಅಭಿವೃದ್ಧಿಪಡಿಸುವುದು ಹಾಗೂ ಕುಂಬಾರಕೊಪ್ಪಲು ಕ್ರೀಡಾಂಗಣ ಅಭಿವೃದ್ಧಿ ಜೊತೆಗೆ ಸುಬ್ಬರಾಯನ ಕೆರೆಯ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನಕ್ಕೆ ಹೊಂದಿಕೊಂಡಂತಿರುವ ಜಾಗದಲ್ಲಿ ಸುಸಜ್ಜಿತ ಈಜುಕೊಳ ನಿರ್ಮಿಸಲು ಪಾಲಿಕೆ ನಿರ್ಧರಿಸಿದೆ.

ನಂಜನಗೂಡು ರಸ್ತೆಯ ಮೌಂಟೇನ್ ವ್ಯೂ ಅಪಾರ್ಟ್‌ಮೆಂಟ್ ಎದುರಿನಲ್ಲಿರುವ ಪಾರಂಪರಿಕ ಗೋಪುರ ಅಭಿವೃದ್ಧಿ, ಮೈಸೂರಿನ ಆಯ್ದ ಭಾಗಗಳಲ್ಲಿ ಹೊಸ ಗ್ರಂಥಾಲಯ ನಿರ್ಮಾಣ, ವಾಲ್ಮೀಕಿ ರಸ್ತೆ ಮತ್ತು ಲಲಿತ ಮಹಲ್ ರಸ್ತೆ ಬದಿಯಲ್ಲಿ ಆಧುನಿಕ ಮಾದರಿಯ ಫುಡ್ ಸ್ಟ್ರೀಟ್ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಮೈಸೂರಿನ ಹಲವು ವಾರ್ಡ್‌ಗಳಲ್ಲಿ ಪೌರಕಾರ್ಮಿಕರಿಗೆ ವಿಶ್ರಾಂತಿ ಗೃಹ ನಿರ್ಮಿಸುವುದು ಸೇರಿದಂತೆ ಹಲವು ಹೊಸ ಯೋಜನೆಗಳನ್ನು ಮೈಸೂರು ಮಹಾನಗರ ಪಾಲಿಕೆಯು ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಪ್ರಕಟಿಸಿದೆ.

ಫಲಿತಾಂಶ ಆಧಾರಿತ ಶಿಕ್ಷಣದಿಂದ ವಿದ್ಯಾರ್ಥಿಗಳಿಗೆ ಔದ್ಯೋಗಿಕ ಕ್ಷೇತ್ರಗಳು ಹತ್ತಿರವಾಗುತ್ತವೆ

ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಅಭಿಮತ



ಮೈಸೂರು, ಜೂ. 5– ಫಲಿತಾಂಶ ಆಧಾರಿತ ಶಿಕ್ಷಣದಿಂದ ಸಾಕಷ್ಟು ಅನು ಕೂಲಗಳು ಇವೆ. ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡ ಪ್ರತಿಯೊಂದು ವಿಷಯದ ಮೇಲೆ ಆಳವಾದ ಮತ್ತು ಸ್ಪಷ್ಟವಾದ ತಿಳಿ ವಳಿಕೆ ಮತ್ತು ಜ್ಞಾನವನ್ನು ಪಡೆಯಬಹುದು. ವಿದ್ಯಾರ್ಥಿಗಳಿಗೆ ಶಿಕ್ಷಣದ ನಂತರ ಕಾಡುವ ಪ್ರಶ್ನೆ ಔದ್ಯೋಗಿಕ ಬದುಕಿನದ್ದು. ಈ ಔದ್ಯೋಗಿಕ ಬದುಕಿಗೆ ವಿದ್ಯಾರ್ಥಿಗಳನ್ನು ಹತ್ತಿರ ತೆಗೆದುಕೊಂಡು ಹೋಗುವುದರಲ್ಲಿ ಮತ್ತು ಪರಿಣಾಮಕಾರಿಯಾಗಿ ತೊಡಗಿಸಿ ಕೊಳ್ಳುವುದರಲ್ಲಿ ಫಲಿತಾಂಶ ಆಧಾರಿತ ಶಿಕ್ಷಣ ಹೆಚ್ಚು ಪ್ರಯೋಜನಕಾರಿಯಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ. ಎನ್.ಕೆ. ಲೋಕನಾಥ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾಲೇಜಿನಲ್ಲಿ ನಡೆದ ಫಲಿ ತಾಂಶ ಆಧಾರಿತ ಶಿಕ್ಷಣ ಎಂಬ ಎರಡು ದಿನಗಳ ಬೋಧಕರ ತರಬೇತಿ ಕಾರ್ಯಾ ಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪ್ರಾಮಾಣಿಕತೆ ಪರಿಶ್ರಮ ಮತ್ತು ಸ್ಥಿರತೆಯಿಂದ ಪ್ರಾಧ್ಯಾಪಕರು ಬೋಧನೆ ಮತ್ತು ಮೌಲ್ಯಮಾಪನದಲ್ಲಿ ತೊಡಗಿಸಿಕೊಳ್ಳುತ್ತಾರೆ. ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಯಲ್ಲಿ ಅವರ ಪಾತ್ರ ಮಹತ್ವದ್ದು. ಬೋಧನೆಯಲ್ಲಿ ಫಲಿತಾಂಶ ಆಧಾರಿತ ಶಿಕ್ಷಣದ ವಿಧಾನವನ್ನು ಅಳ ವಡಿಸಿಕೊಂಡಾಗ ಬೋಧನೆಯಲ್ಲಿ ನಿಖರತೆ ಪ್ರಾಪ್ತವಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಹೆಚ್ಚು ಲಾಭವಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮುಗೇಶಪ್ಪ ಮಾತನಾಡುತ್ತಾ, ಪಠ್ಯಪುಸ್ತಕ ಗಳು ಬದಲಾವಣೆಯಾದಂತೆ ಪಠ್ಯಕ್ರಮಗಳ ಬೋಧನಾ ವಿಧಾನಗಳು ಬದಲಾಗು ತ್ತಿರುತ್ತವೆ. ಬೋಧನೆ ಮತ್ತು ಸಂಶೋ ಧನೆಯಲ್ಲಿ ಸಿಗುವ ಫಲಿತಾಂಶ ಗಳ ಕುರಿತು ಪ್ರಾಧ್ಯಾಪಕರು ಆಲೋಚಿಸಬೇಕು. ಇದರಿಂದ ವಿದ್ಯಾರ್ಥಿಗಳಿಗೆ ನೀಡಬಹು ದಾದ ಉತ್ತಮ ಬೋಧನೆಯ ಮಾರ್ಗಗಳು ತೆರೆದುಕೊಳ್ಳುತ್ತವೆ ಎಂದರು.

ಕೇರಳದ ಐಪಿಎಸ್‌ಆರ್ ಸಲ್ಯೂಷನ್ ಲಿಮಿಟೆಡ್‌ನ ಮುಖ್ಯ ಕಾರ್ಯನಿರ್ವಹ ಣಾಧಿಕಾರಿ ಡಾ. ಮೆಂಡಸ್ ಜೋಕೋಬ್ ಆಶಂಯ ನುಡಿಗಳನ್ನಾಡುತ್ತಾ "ವಿದ್ಯಾರ್ಥಿ ಗಳಲ್ಲಿ ಕಲಿಕಾ ಆಸಕ್ತಿ ಮತ್ತು ಸಾಮರ್ಥ್ಯ ವನ್ನು ಹೆಚ್ಚಿಸಲು ಫಲಿತಾಂಶ ಆಧಾರಿತ ಶಿಕ್ಷಣದ ಮಾತುಗಳನ್ನು ಅಳವಡಿಸಿಕೊಳ್ಳಬೇಕು. ಇದರಿಂದ ವಿದ್ಯಾರ್ಥಿಗಳಿಗೆ ಮತ್ತು ಪ್ರಾಧ್ಯಾಪಕರುಗಳಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ. ಪ್ರಾಧ್ಯಾಪಕರುಗಳಿಗೆ ಇದರ ಬಗ್ಗೆ ಅರಿವು ಮೂಡಿಸಲು ಆಯೋಜಿಸಿರುವ ಈ ಕಾರ್ಯಾಗಾರ ಅತ್ಯುತ್ತಮವಾದ ಕಾರ್ಯವಾಗಿದೆ. ಇದರ ಸದುಪಯೋಗವನ್ನು ಪಡೆಯಿರಿ ಎಂದು ಹೇಳಿದರು.

ಕಾಲೇಜಿನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಪ್ರೊ. ಬಿ.ವಿ. ಸಾಂಬ ಶಿವಯ್ಯ, ಪ್ರಾಂಶುಪಾಲ ಪ್ರೊ. ಎಂ.ಸಿ. ವಿಜಯೇಂದ್ರ ಕುಮಾರ್ ಉಪಸ್ಥಿತರಿದ್ದರು.

ಪ್ರಭಾವಿ ಅಪಾರ್ಟ್‌ಮೆಂಟ್ ಮಾಲೀಕರಿಗೆ ನೆರವಾಗಲು ಕೆರೆ ಮಧ್ಯೆ ರಸ್ತೆ ನಿರ್ಮಾಣ

ಸಂಬಂಧಿಸಿದ ಎಲ್ಲಾ ಅಧಿಕಾರಿಗಳ ಅಮಾನತಿಗೆ ಡಿಸಿಎಂ ಶಿವಕುಮಾರ್ ಸೂಚನೆ



ಬೆಂಗಳೂರು, ಜೂ. 5(ಕೆಎಂಶಿ)– ಪ್ರಭಾವಿ ಅಪಾರ್ಟ್‌ಮೆಂಟ್ ಮಾಲೀಕರಿಗೆ ಅನುಕೂಲ ಮಾಡಿಕೊಡಲು ಬೆಂಗಳೂರಿನ ಹೊಸಕೆರೆಹಳ್ಳಿ ಕೆರೆ ಮಧ್ಯೆ ರಸ್ತೆ ನಿರ್ಮಾಣ ಯೋಜನೆ ರೂಪಿಸಿ, ಅನುಷ್ಠಾನಕ್ಕೆ ತಂದ ಎಲ್ಲ ಅಧಿಕಾರಿಗಳು, ಇಂಜಿನಿಯರ್‌ಗಳನ್ನು ಸೇವೆಯಿಂದ ಅಮಾನತು ಮಾಡುವಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಿಬಿಎಂಪಿ ಕಮಿಷನರ್ ತುಷಾರ್ ಗಿರಿನಾಥ್ ಅವರಿಗೆ ಸೂಚನೆ ನೀಡಿದರು.

ಬೆಂಗಳೂರು ಅಭಿವೃದ್ಧಿ ಕುರಿತಂತೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸ್ಥಳೀಯ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳೊಟ್ಟಿಗೆ ನಡೆಸುವ ಸಂದರ್ಭದಲೇ ಭ್ರಷ್ಟರಿಗೆ ಬಿಸಿ ಮುಟ್ಟಿಸಿದ್ದಾರೆ. ಈ ಕೆರೆ ಮಧ್ಯೆ ರಸ್ತೆ ನಿರ್ಮಾಣ ಮಾಡುವ ಐಡಿಯಾ ಕೊಟ್ಟವರು ಯಾರು, ಯೋಜನೆ ರೂಪಿಸಿದವರು ಯಾರು, ಅನುಷ್ಠಾನಕ್ಕೆ ತಂದವರು ಯಾರು. ಯಾಕಾಗಿ ಇದನ್ನು ಮಾಡಿದ್ದೀರಿ, ಯಾರಿಗೆ ಅನುಕೂಲ ಮಾಡಿಕೊಡಲು ಮಾಡಿದ್ದೀರಿ, ಯಾರ್‍ಯಾರು ಇದರಲ್ಲಿ ಭಾಗಿಯಾಗಿದ್ದೀರಿ ಎಂದು ಶಿವಕುಮಾರ್ ಅವರು ಸಭೆಯಲ್ಲಿ ಪ್ರಶ್ನಿಸಿದರು.

ಅಧಿಕಾರಿಗಳು ಇದಕ್ಕೆ ಉತ್ತರಿಸಲು ತಡಬಡಾಯಿಸಿದರು. ತಕ್ಷಣವೇ ಉಪಮುಖ್ಯಮಂತ್ರಿಗಳು ಹೊಸಕೆರೆಹಳ್ಳಿ ಕೆರೆ ಭಾಗ ಮಾಡಿ ರಸ್ತೆ ನಿರ್ಮಾಣ ಮಾಡಿದ ಅಧಿಕಾರಿಗಳನ್ನು ಅಮಾನತು ಮಾಡುವಂತೆ ಸೂಚನೆ ನೀಡಿದರು. ಈಜಿಪುರ ಮೇಲ್ಸೇತುವೆ ಯೋಜನೆಯನ್ನು ತಕ್ಷಣ ಪೂರ್ಣಗೊಳಿಸಬೇಕು. ಈ ಬಗ್ಗೆ ಅಗತ್ಯವಿರುವ ಆಡಳಿತಾತ್ಮಕ ನಿರ್ಣಯಗಳನ್ನು ತಕ್ಷಣ ಕೈಗೊಳ್ಳಬೇಕು ಎಂದು ಇದೇ ಸಂದರ್ಭದಲ್ಲಿ ಸೂಚನೆ ನೀಡಿದರು.

ಬೆಂಗಳೂರಿನ ಮುಂದಿನ 20 ವರ್ಷಗಳ ಅಗತ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಜನೆಗಳನ್ನು ರೂಪಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಹೇಳಿದರು. ಬೆಂಗಳೂರು ಬಗ್ಗೆ ದೂರದೃಷ್ಟಿ ಯೋಜನೆಗಳನ್ನು ರೂಪಿಸದಿರುವ ಬಗ್ಗೆ ಬೇಸರ ವ್ಯಕ್ತಪಡಿಸಿದರು. ಬೆಂಗಳೂರಿನ ಕೆಲವೆಡೆ ಹೋರ್ಡಿಂಗ್ಸ್ ಇವೆ. ಇದಕ್ಕೆ ಅನುಮತಿ ಕೊಟ್ಟವರು ಯಾರು ಒಂದೊಂದು ಪ್ರದೇಶಕ್ಕೆ ಒಂದೊಂದು ನೀತಿ ಹೇಗೆ ಎಂದು ಪ್ರಶ್ನಿಸಿದರು. ಎಲ್ಲೆಡೆ ಅನ್ವಯ ಆಗುವಂತೆ ಸಾಮಾನ್ಯ ನೀತಿ ರೂಪಿಸುವಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದರು.

NEET/JEE/KCETಗೆ ತರಬೇತಿ

ಮೈಸೂರು, ಜೂ.5– ಕೃಷಿಕ್ ಸರ್ವೋದಯ ಫೌಂಡೇಷನ್, ಮೈಸೂರು ಶಾಖೆಯ ವತಿ ಯಿಂದ ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳಿಗೆ ವಾರದ ಕೊನೆಯ ಎರಡು ದಿನಗಳು (ಶನಿವಾರ ಮತ್ತು ಭಾನುವಾರ) ಮತ್ತು ರಜೆಯ ದಿನಗಳಲ್ಲಿ NEET/JEE/KCETಗೆ ತರಬೇತಿ ಕಾರ್ಯಕ್ರಮವನ್ನು ಕೃಷಿಕ್ ಭವನ ಸಿ.ಎ.–25 ಜ॥ ಕೆ.ಎಸ್. ತಿಮ್ಮಯ್ಯ ರಸ್ತೆ, ವಿಜಯನಗರ 2ನೇ ಹಂತ ಮೈಸೂರು ಇಲ್ಲಿ ಏರ್ಪಡಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಜುಲೈ 10 ರೊಳಗಾಗಿ ಮೇಲ್ಕಂಡ ವಿಳಾಸದಲ್ಲಿ ನೋಂದಾವಣಿ ಮಾಡಿಕೊಳ್ಳಬಹುದು. ಮೊದಲು ಬಂದ 50 ವಿದ್ಯಾರ್ಥಿಗಳಿಗೆ ಅವಕಾಶ. ಹೆಚ್ಚಿನ ಮಾಹಿತಿಗಾಗಿ ಶೈಕ್ಷಣಿಕ ಮುಖ್ಯ ಸಂಯೋಜಕರಾದ ಡಾ. ಜಿ. ಗೋವಿಂದರಾಜು ಅವರನ್ನು ಭೇಟಿಯಾಗಬಹುದು ಅಥವಾ ದೂ.ಸಂಖ್ಯೆ 0821–2301564/9945752592/ ವಾಟ್ಸಾಪ್ ನಂ. 9686221564 ಮೂಲಕವೂ ಸಂಪರ್ಕಿಸಬಹುದು.

ಮಡಿಕೇರಿಯಲ್ಲಿ ವಿಶ್ವ ಪರಿಸರ ದಿನಾಚರಣೆ

ಬಟ್ಟೆ ಬ್ಯಾಗ್ ಬಳಸಿ, ಪರಿಸರ ಉಳಿಸಿ

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ



ಮಡಿಕೇರಿ, ಜೂ.5– ಪರಿಸರ ಅಸಮ ತೋಲನದಿಂದ ಇತ್ತೀಚಿನ ವರ್ಷಗಳಲ್ಲಿ ಎರಡರಿಂದ ಎರಡೂವರೆ ಡಿಗ್ರಿ ಉಷ್ಣಾಂಶ ಹೆಚ್ಚಾಗುತ್ತಿದೆ ಎಂದು ಕೊಡಗು ಜಿಲ್ಲೆಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎನ್.ಎಸ್.ಮೂರ್ತಿ ಹೇಳಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ವಕೀಲರ ಸಂಘ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ರಾಷ್ಟ್ರೀಯ ಹಸಿರು ಪಡೆ, ಕೊಡಗು ಪೊಲೀಸ್ ಇಲಾಖೆ, ಅರಣ್ಯ ಇಲಾಖೆ ಸಾರ್ವಜನಿಕ ಶಿಕ್ಷಣ ಇಲಾಖೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಸಂಯುಕ್ತ ಆಶ್ರಯದಲ್ಲಿ ನೂತನ ನ್ಯಾಯಾಲಯ ಆವರಣದಲ್ಲಿ ನಡೆದ ವಿಶ್ವ ಪರಿಸರ ದಿನ ಪ್ರಯುಕ್ತ ಗಿಡ ನೆಡುವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಅರಣ್ಯ ಮತ್ತು ವನ್ಯ ಸಂಪತ್ತು ಸಂರಕ್ಷಣೆ ಮಾಡಿದ್ದಲ್ಲಿ, ಪರಿಸರ ಸಮತೋಲನ ಕಾಣಲು ಸಾಧ್ಯ ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅವರು ಪ್ರತಿಪಾದಿಸಿದರು. ವಿಶ್ವದಲ್ಲಿ 400 ರಿಂದ 500 ಮಿಲಿಯನ್ ಮೆಟ್ರಿಕ್ ಟನ್‌ನಷ್ಟು ಪ್ಲಾಸ್ಟಿಕ್ ಬಳಕೆ ಮಾಡಲಾಗುತ್ತಿದ್ದು, ಇದು ಒಳ್ಳೆಯ ಬೆಳವಣಿಗೆಯಲ್ಲ, ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಬೇಕು. ಬಳಸಿದ ಪ್ಲಾಸ್ಟಿಕ್ ಅನ್ನು ಮರುಬಳಕೆ ಮಾಡಬೇಕು ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೂರ್ತಿ ತಿಳಿಸಿದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಮಾತನಾಡಿ, ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರೂ ಪಣ ತೊಡಬೇಕು. ಆ ನಿಟ್ಟಿನಲ್ಲಿ ಅಂಗಡಿ, ಮಾರುಕಟ್ಟೆಗೆ ತೆರಳುವಾಗ ಕಡ್ಡಾಯವಾಗಿ ಬಟ್ಟೆ ಬ್ಯಾಗನ್ನು ಬಳಸಬೇಕು ಎಂದು ಹೇಳಿದರು.

ಏಕ ಬಳಕೆಯ ಪ್ಲಾಸ್ಟಿಕ್‌ಗಳಾದ ತಟ್ಟೆ, ಲೋಟ ಬಳಸುವುದನ್ನು ಈಗಾಗಲೇ ನಿಷೇಧಿಸಲಾಗಿದ್ದು, ಮದುವೆ ಇತರೆ ಕಾರ್ಯಕ್ರಮಗಳಲ್ಲಿ ಬಳಸುವುದು ಕಂಡು ಬಂದಲ್ಲಿ ಹತ್ತಿರದ ತಾಲೂಕು ಅಥವಾ ಜಿಲ್ಲಾಡಳಿತಕ್ಕೆ ಮಾಹಿತಿ ನೀಡುವಂತಾಗಬೇಕು ಎಂದು ಜಿಲ್ಲಾಧಿಕಾರಿ ಕೋರಿದರು.

ಪ್ರಧಾನ ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ಡಿ.ಟಿ. ಪುಟ್ಟರಂಗಸ್ವಾಮಿ ಅವರು ಮಾತನಾಡಿ, ಗಿಡ ನೆಡುವ ಮೂಲಕ ಪರಿಸರ ಸಂರಕ್ಷಣೆ ಮಾಡಬೇಕಿದೆ. ಪರಿಸರ ಉಳಿದಲ್ಲಿ ಪ್ರತಿಯೊಬ್ಬರೂ ಆರೋಗ್ಯವಂತರಾಗಿ ಬದುಕು ನಡೆಸಲು ಸಾಧ್ಯ ಎಂದು ಅವರು ತಿಳಿಸಿದರು. ಜಿಪಂ ಸಿಇಒ ಡಾ.ಎಸ್.ಆಕಾಶ್ ಅವರು, 'ಈ ನೆಲ-ಜಲ, ಅರಣ್ಯ, ವನ್ಯ ಜೀವಿಗಳು, ಪರಿಸರ ಹಾಗೂ ಜೀವ ವೈವಿಧ್ಯ ಸಂರಕ್ಷಣೆಯನ್ನು ಮಾಡುತ್ತೇವೆ. ಪರಿಸರಕ್ಕೆ ಯಾವುದೇ ರೀತಿಯಲ್ಲಿ ಧಕ್ಕೆಯನ್ನುಂಟು ಮಾಡುವುದಿಲ್ಲ ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಗಿಡ ನೆಟ್ಟು ಅದನ್ನು ಪೋಷಿಸಿ ಬೆಳೆಸುವ ಮೂಲಕ ಪರಿಸರ ಸಂರಕ್ಷಣೆಯಲ್ಲಿ ತೊಡಗಿಸಿಕೊಳ್ಳಬೇಕು' ಎಂದು ಪ್ರತಿಜ್ಞಾ ವಿಧಿ ಬೋಧಿಸಿದರು.

ರಾಜ್ಯ ವಿಜ್ಞಾನ ಪರಿಷತ್ತಿನ ಕೊಡಗು ಜಿಲ್ಲಾ ಸಮಿತಿ ಅಧ್ಯಕ್ಷ ಟಿ.ಜಿ.ಪ್ರೇಮ್ ಕುಮಾರ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಕೆ.ಬಿ.ಪ್ರಸಾದ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ರಾಣಿ ಮಾಚಯ್ಯ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಪೂವಯ್ಯ, ಶಿವರಾಮ ಬಾಬು, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಪುಟ್ಟರಾಜು, ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಣಾಧಿಕಾರಿ ದೊಡ್ಡೇಗೌಡ, ಡಿವೈಎಸ್‌ಪಿ ಸೌಮ್ಯ, ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಪ್ರಧಾನ ಆಯುಕ್ತ ಕೆ.ಟಿ.ಬೇಬಿಮ್ಯಾಥ್ಯೂ, ಜಿಲ್ಲಾ ಸ್ಕೌಟ್ಸ್ ಆಯುಕ್ತ ಜಿಮ್ಮಿ ಸಿಕ್ವೇರಾ, ಜಿಲ್ಲಾ ಸಹ ಕಾರ್ಯದರ್ಶಿ ಬೊಳ್ಳಜಿರ ಅಯ್ಯಪ್ಪ, ಪರಿಸರ ಅಧಿಕಾರಿ ಕೆ.ಆರ್.ಕಿಶೋರ್ ಕುಮಾರ್, ಉಪ ಪರಿಸರ ಅಧಿಕಾರಿ ಎಸ್.ಪ್ರದೀಪ್, ಸ್ಕೌಟ್ಸ್ ಮತ್ತು ಗೈಡ್ಸ್‌ನ ಸಂಯೋಜಕ ದಮಯಂತಿ ಇತರರು ಇದ್ದರು. ಪರಿಸರ ದಿನಾಚರಣೆ ಪ್ರಯುಕ್ತ ಏರ್ಪಡಿಸಲಾಗಿದ್ದ ಚಿತ್ರಕಲೆ ಹಾಗೂ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಪರಿಸರ ದಿನಾಚರಣೆ ಜಾಥಾಗೆ ಚಾಲನೆ

ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಏರ್ಪಡಿಸಲಾಗಿದ್ದ ಜಾಥಾಗೆ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಡಿ.ಟಿ.ಪುಟ್ಟರಂಗಸ್ವಾಮಿ ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನಲ್ಲಿ ಚಾಲನೆ ನೀಡಿದರು.

ತೋಟಗಾರಿಕಾ ಇಲಾಖೆ ಕಾವಲುಗಾರನ ಮೇಲೆ ಹಲ್ಲೆ

ಮಡಿಕೇರಿ, ಜೂ.5– ರಾಜಾಸೀಟ್ ಹೊರ ಆವರಣದಲ್ಲಿ ಕ್ಷುಲ್ಲಕ ವಿಚಾರಕ್ಕೆ ಸಂಬಂಧಿಸಿದಂತೆ ತೋಟಗಾರಿಕಾ ಇಲಾಖೆ ಕಾವಲುಗಾರರ ಮೇಲೆ ಹಲ್ಲೆ ನಡೆಸಿದ



ಘಟನೆ ಭಾನುವಾರ ರಾತ್ರಿ ನಡೆದಿದೆ. ರಾಜಾ ಸೀಟ್ ಹೊರಗಡೆ ವ್ಯಾಪಾರ ಮಾಡುತ್ತಿದ್ದ ಖಲೀಲ್ ಎಂಬಾತನೇ ಹಲ್ಲೆ ನಡೆಸಿದ ಆರೋಪಿಯಾಗಿದ್ದು, ತೋಟಗಾರಿಕಾ ಇಲಾಖೆಯ ರಾತ್ರಿ ಪಾಳಿಯ ಕಾವಲುಗಾರ ಜಯಣ್ಣ ಹಲ್ಲೆಗೆ ಒಳಗಾದವರು.

ಘಟನೆ ವಿವರ: ರಾಜಾಸೀಟ್‌ನಲ್ಲಿ ಜಯಣ್ಣ ಅವರು ಹೊರಗುತ್ತಿಗೆ ಆಧಾರದಲ್ಲಿ ಕಾವಲುಗಾರರಾಗಿ ಕೆಲಸ ಮಾಡುತ್ತಿದ್ದು, ಅವರ ಪತ್ನಿ ಸುಶೀಲ ಎಂಬವರು ಆಟಿಕೆಗಳನ್ನು ಮಾರಾಟ ಮಾಡುವ ಮಳಿಗೆ ನಡೆಸುತ್ತಿದ್ದಾರೆ. ರಾತ್ರಿ 8 ಗಂಟೆಯ ಸಮಯದಲ್ಲಿ ಅಂಗಡಿ ಮುಚ್ಚುವ ವೇಳೆ ಖಲೀಲ್ ಮತ್ತು ಜಯಣ್ಣ ಅವರುಗಳ ನಡುವೆ ಕ್ಷುಲ್ಲಕ ವಿಚಾರಕ್ಕೆ ಮಾತಿನ ಚಕಮಕಿ ನಡೆದಿದೆ. ಈ ವೇಳೆ ಖಲೀಲ್ ಏಕಾಏಕಿ ಕೋಲಿನಿಂದ ಜಯಣ್ಣ ಅವರ ಮೇಲೆ ಹಲ್ಲೆ ನಡೆಸಿದ್ದಾನೆ. ಬಳಿಕ ಜಯಣ್ಣ ಮತ್ತು ಸುಶೀಲ ಅವರುಗಳು ಜಿಲ್ಲಾಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದಿದ್ದಾರೆ.

ಈ ಸಂಬಂಧ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಈ ಹಿಂದೆಯೂ ಖಲೀಲ್ ಹಲವು ಬಾರಿ ಕ್ಷುಲ್ಲಕ ವಿಚಾರಕ್ಕೆ ಜಗಳವಾಡಿದ್ದಾನೆ ಎಂದು ಸುಶೀಲ ಮಾಧ್ಯಮಗಳೊಂದಿಗೆ ಅಳಲು ತೋಡಿಕೊಂಡಿದ್ದಾರೆ. ಹಲ್ಲೆ ನಡೆಸುತ್ತಿರುವ ವಿಡಿಯೋ ಇದೀಗ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ.

ಕುಶಾಲನಗರದಲ್ಲಿ ಭೂಮಿ ಸಂರಕ್ಷಿಸಿ ಅಭಿಯಾನಕ್ಕೆ ಚಾಲನೆ



ಕುಶಾಲನಗರ, ಜೂ.5– ಮನುಷ್ಯನಿಗೆ ಉತ್ತಮ ಆರೋಗ್ಯಕ್ಕಾಗಿ ಅತೀ ಮುಖ್ಯವಾಗಿ ಬೇಕಾದ ಪರಿಶುದ್ಧ ಗಾಳಿ, ನೀರು, ಮಣ್ಣು ಹಾಗೂ ಆಹಾರವನ್ನು ಕೊಡುವ ಭೂಮಿಯನ್ನು ನಾವು ರಕ್ಷಿಸಿದರೆ ಮಾತ್ರ ಮಾನವನ ಉಳಿವು ಸಾಧ್ಯ ಎಂದು ಇಲ್ಲಿನ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಎನ್.ಸತೀಶ್ ಹೇಳಿದರು.

ಪಟ್ಟಣದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದ ಭೂಮಿ ಸಂರಕ್ಷಿಸಿ ಅಭಿಯಾನದ ಉದ್ಘಾಟನಾ ಸಮಾರಂಭದಲ್ಲಿ ಭೂಮಿ ಸಂರಕ್ಷಿಸಿ ವೇದಿಕೆ ಉದ್ಘಾಟಿಸಿ ಅವರು ಮಾತನಾಡಿದರು. ನಾಡಿನ ಗಂಗಾ, ಕಾವೇರಿ, ಯಮುನಾ ಮೊದಲಾದ ನದಿಗಳು ಇಂದು ನದಿಗಳಾಗಿ ಉಳಿದಿಲ್ಲ ಎಂದು ವಿಷಾದಿಸಿದ ಅವರು, ಅಭಿವೃದ್ಧಿಗಾಗಿ ಪರಿಸರವನ್ನು ಹಾಳು ಮಾಡುವ ಯೋಜನೆಗಳು ನಮಗೆ ಬೇಡ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್ ಮಾತನಾಡಿ, ಭೂಮಿ ಮನುಷ್ಯನ ಆಸೆಗಳನ್ನು ಪೂರೈಸುತ್ತದೆಯೇ ಹೊರತು ಆತನ ದುರಾಸೆಯನ್ನಲ್ಲ ಇದನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳಬೇಕು ಎಂದರು. ತಲತಲಾಂತರಗಳಿಂದ ನಮ್ಮ ಹಿರಿಯರಿಂದ ನಮಗೆ ಬಳುವಳಿಯಾಗಿ ಬಂದಂತಹ ಭೂಮಿ ಇಂದು ಹಾಳಾಗುತ್ತಿದೆ. ಆದ್ದರಿಂದ ಭೂಮಿಯನ್ನು ಉಳಿಸಿ ಸಂರಕ್ಷಿಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸಬೇಕಿರುವುದು ನಮ್ಮೆಲ್ಲರ ಕರ್ತವ್ಯವಾಗಬೇಕಿದೆ ಎಂದರು.

ಭೂಮಿ ಸಂರಕ್ಷಿಸಿ ಅಭಿಯಾನದ ಸಂಚಾಲಕ ಕೆ.ಎಸ್. ಮೂರ್ತಿ ಮಾತನಾಡಿ, ಭೂಮಿ ಕೋಟ್ಯಾಂತರ ಜೀವರಾಶಿಗಳಿಗೆ ನೀರು, ಗಾಳಿ ಹಾಗೂ ಆಹಾರವನ್ನು ನೀಡುತ್ತಿದೆ. ಹಾಗಾಗಿ ಭೂಮಿಗೆ ನಾವು ಏನೂ ತೊಂದರೆ ಮಾಡದೆ ಅದರ ಉಳಿವಿಗಾಗಿ ಎಲ್ಲರೂ ಕೈಜೋಡಿಸಬೇಕು ಎಂದರು.

ಪುರಸಭೆ ಅಧ್ಯಕ್ಷ ಬಿ.ಜೈವರ್ಧನ್ ಮಾತನಾಡಿ, ಪರಿಸರ ಹಾಗೂ ಭೂಮಿಯ ಸಂರಕ್ಷಣೆಗೆ ವಿದ್ಯಾರ್ಥಿಗಳು ಕಟಿಬದ್ಧರಾಗಬೇಕು ಎಂದು ಸಲಹೆ ನೀಡಿದರು. ಕಾವೇರಿ ನದಿ ಸಂರಕ್ಷಣಾ ಆಂದೋಲನದ ರಾಜ್ಯ ಸಂಚಾಲಕ ಎಂ.ಎನ್. ಚಂದ್ರಮೋಹನ್, ಪುರಸಭೆ ಸದಸ್ಯ ಬಿ.ಅಮೃತ ರಾಜು, ಬಾಲಕಿಯರ ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕಿ ಬಿ.ಎನ್. ಪುಷ್ಪ ಹೆಬ್ಬಾಲೆ ಹೋಬಳಿ ಕಸಾಪ ಕಾರ್ಯದರ್ಶಿ ಎಸ್.ಎಸ್. ಚಂದ್ರಶೇಖರ್, ಧನೇಂದ್ರ ಕುಮಾರ್, ಶಿಕ್ಷಕ ಶಿವಣ್ಣ, ನವೀನಕುಮಾರ್ ಇದ್ದರು. ಕುಶಾಲನಗರ ದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದ ಭೂಮಿ ಸಂರಕ್ಷಿಸಿ ಅಭಿಯಾನ ವೇದಿಕೆಯನ್ನು ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಎನ್. ಸತೀಶ್ ಉದ್ಘಾಟಿಸಿ ದರು. ಪುರಸಭೆ ಅಧ್ಯಕ್ಷ ಬಿ.ಜೈವರ್ಧನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ. ಶಶಿಧರ್, ವೇದಿಕೆ ಸಂಚಾಲಕ ಕೆ.ಎಸ್.ಮೂರ್ತಿ ಇದ್ದಾರೆ.

ನಾಳೆ ಜೇನು ಕೃಷಿ ತರಬೇತಿ

ಗೋಣಿಕೊಪ್ಪ, ಜೂ.5– ಶಿವಮೊಗ್ಗ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ವಿಸ್ತರಣಾ ಶಿಕ್ಷಣ ಘಟಕ, ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯ ಸಹಯೋಗದಲ್ಲಿ ಜೂ.7 ರಂದು ಬೆಳಗ್ಗೆ 10.30ಕ್ಕೆ ಪೊನ್ನಂ ಪೇಟೆ ಅರಣ್ಯ ಮಹಾ ವಿದ್ಯಾಲಯದಲ್ಲಿ ಜೇನು ಕೃಷಿ ತರಬೇತಿ ಆಯೋಜಿಸ ಲಾಗಿದೆ. ಆಸಕ್ತರು ದೂರವಾಣಿ ಸಂಖ್ಯೆ 9880076381, 9480838210 ನೋಂದಾಯಿಸಿಕೊಳ್ಳ ಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ದಯಾನಂದ ನಿಧನ

ಮಡಿಕೇರಿ, ಜೂ.5– ನಗರದ ಹೊರ ವಲಯದಲ್ಲಿರುವ ಸರಕಾರಿ ಗೋ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭ ಜಾನುವಾರು ಅಭಿವೃದ್ಧಿ ಅಧಿಕಾರಿ ಕೆಆರ್. ದಯಾನುದ(59) ಹೃದಯಾಘಾತ ದಿಂದ ನಿಧನರಾಗಿದ್ದಾರೆ.



ಮಡಿಕೇರಿ ತಾಲೂಕು ಪಶುವೈದ್ಯ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ದಯಾನಂದ ಅವರು ಕೆ.ನಿಡುಗಣೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಗೋ ಶಾಲೆಯಲ್ಲಿ ಕರ್ತವ್ಯಕ್ಕೆ ತೆರಳಿದ್ದಾಗ ಹೃದಯಾಘಾತ ಸಂಭವಿಸಿದೆ. ಇವರು ಮಡಿಕೇರಿ ಸಮೀಪದ ಮೇಕೇರಿ ನಿವಾಸಿಯಾಗಿದ್ದು, ಪತ್ನಿ ಹಾಗೂ ಓರ್ವ ಪುತ್ರನನ್ನು ಅಗಲಿದ್ದಾರೆ.

ಗೋಣಿಕೊಪ್ಪದಲ್ಲಿ ಪರಿಸರ ದಿನಾಚರಣೆ



ಗೋಣಿಕೊಪ್ಪ, ಜೂ.5– ಮಾದಪ್ಪ ಪೆಟ್ರೋಲಿಯಂ ಹಾಗೂ ಪೊನ್ನಂಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಸಹಯೋಗದಲ್ಲಿ ಪರಿಸರ ದಿನಾಚರಣೆ ಅಂಗವಾಗಿ ಗಿಡ ವಿತರಣೆ ಮತ್ತು ಗಿಡ ನೆಡುವ ಕಾರ್ಯಕ್ರಮ ನಡೆಯಿತು. ನೆಲ್ಲಿಕಾಯಿ, ಸೀಬೆ, ದಾಳಿಂಬೆ, ಬಿಲ್ವಪತ್ರೆ ಸೇರಿದಂತೆ 200 ಕ್ಕೂ ಹೆಚ್ಚು ಗಿಡಗಳನ್ನು ವಿತರಣೆ ಮಾಡಲಾಯಿತು. ಅತ್ತೂರು ದುರ್ಗಾ ಪರಮೇಶ್ವರಿ ದೇವಸ್ಥಾನದ ಆವರಣದಲ್ಲಿ ಬಿಲ್ವಪತ್ರೆ ಗಿಡ ನೆಡಲಾಯಿತು. ಲೋಪಮುದ್ರಾ ಆಸ್ಪತ್ರೆ ವೈದ್ಯರಾದ ಡಾ. ಮುಕ್ಕಾಟೀರ ಅಮೃತ್ ನಾಣಯ್ಯ ಗಿಡ ನೆಟ್ಟು ಉದ್ಘಾಟಿಸಿದರು. ಮಾದಪ್ಪ ಪೆಟ್ರೋಲಿಯಂ ಮಾಲೀಕ ಮಚ್ಚಮಾಡ ಪಾರ್ವತಿ, ಪೊನ್ನಂಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸಣ್ಣುವಂಡ ಕಿಶೋರ್ ನಾಚಪ್ಪ, ಉಪಾಧ್ಯಕ್ಷ ಮಚ್ಚಮಾಡ ಅನೀಶ್ ಮಾದಪ್ಪ ವಸುರಾಜ್, ಸುರೇಶ್, ಅಪ್ಸರ್, ಚಿಟ್ಯಪ್ಪ ಇತರರಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಗೋಣಿಕೊಪ್ಪ, ಜೂ.5– ಕೊಡಗು ಆಯುರ್ವೇದ ಕೇರ್ ಹಾಗೂ ಸುಳ್ಯ ಸೌಭಾಗ್ಯ ವಿಕಲಚೇತನರ ಸೇವಾ ಟ್ರಸ್ಟ್ ಸಹಯೋಗದಲ್ಲಿ ಜೂ.7 ರಂದು ಅಂಗವಿಕಲರು ಹಾಗೂ ಹಿರಿಯ ನಾಗರಿಕರಿಗಾಗಿ ವಿರಾಜಪೇಟೆ ಪುರಭವನದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಬೆ. 10 ಗಂಟೆಯಿಂದ ಮ. 1 ಗಂಟೆವರೆಗೆ ಶಿಬಿರ ನಡೆಯಲಿದೆ. ಪ್ರತಿ ಎರಡು ತಿಂಗಳಿಗೊಮ್ಮೆ ಶಿಬಿರ ನಡೆಯಲಿದ್ದು, ಕಾಲು ಇಲ್ಲದವರಿಗೆ ಉಚಿತವಾಗಿ ಕೃತಕ ಕಾಲು ನೀಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆಯಿಂದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವ



ಚಾಮರಾಜನಗರ, ಜೂ.5– ನಗರದ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದ ಶ್ರೀ ಕೆಂಪನಂಜಾಂಬಾ ಅಮ್ಮನವರ ಸಮೇತ ಶ್ರೀ ಚಾಮರಾಜೇಶ್ವರಸ್ವಾಮಿಯವರಿಗೆ ಗಿರಿಜಾ ಕಲ್ಯಾಣ ಮಹೋತ್ಸವ ಕಾರ್ಯಕ್ರಮವು ಜೂನ್ 7 ರಿಂದ 12ರವರೆಗೆ ನಡೆಯಲಿದೆ. ಜೂ.7ರ ಬುಧವಾರ ಸಂಜೆ 6 ಗಂಟೆಗೆ ಅನುಜ್ಞಾಪೂರ್ವಕ ಎಣ್ಣೆ ಅರಿಶಿನ ಪ್ರಧಾನ ನಂತರ ರಾತ್ರಿ 8 ಗಂಟೆಗೆ ವರಪೂಜಾ ಮಹೋ ತ್ಸವ ನಡೆಯಲಿದೆ. ಜೂನ್ 8ರ ಗುರುವಾರ ಬೆಳಗ್ಗೆ 10 ಗಂಟೆಗೆ ಅಂಕುರಾರ್ಪಣ ಪೂರ್ವಕ ಕನ್ನಡಿ ಕಲಶ ತರುವುದು. ನಂತರ ಮಂಗಳಸ್ನಾನ ನಾಂದಿ ನಡೆದು ಗ್ರಹಯಜ್ಞ ಪ್ರಾರಂಭವಾಗಿ ಸಂಜೆ 5 ಗಂಟೆಗೆ ಕಾಶಿಯಾತ್ರೆ ಮಹೋತ್ಸವವು ನಡೆಯುತ್ತದೆ. ಆ ನಂತರ ರಾತ್ರಿ 8.10 ರಿಂದ 9 ಗಂಟೆಯವರೆಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ ಅಕ್ಷತಾರೋಪಣೆ, ಧಾರಾಮಹೋತ್ಸವ, ಪ್ರಧಾನ ಹೋಮ, ಮಹಾಮಂಗಳಾರತಿ ಜರುಗಲಿದೆ.

ಜೂ.9ರ ಶುಕ್ರವಾರ ಪ್ರಾತಃಕಾಲ ಔಪಾಸನೆ ಉರುಟಣೆ ಉಯ್ಯಾಲೋತ್ಸವವು ರಾತ್ರಿ ಔಪಾಸನೆ ಉಯ್ಯಾಲೋತ್ಸವವು ನಡೆಯಲಿದೆ. 10ರ ಶನಿವಾರ ಪ್ರಾತಃಕಾಲ ಔಪಾಸನೆ ಉರುಟಣೆ ಉಯ್ಯಾಲೋತ್ಸವವು ರಾತ್ರಿ ಔಪಾಸನೆ ಪಾಕಿನಿ ಮಹೋತ್ಸವವು ಜರುಗಲಿದೆ. 11ರ ಭಾನುವಾರದಂದು ಪ್ರಾತಃಕಾಲ ಔಪಾಸನೆ ಉರುಟಣೆ ಉಯ್ಯಾಲೋತ್ಸವವು ರಾತ್ರಿ ಔಪಾಸನೆ ಶೇಷಹೋಮ, ನಾಕಬಲಿ, ಹೊಳಲು ಸುತ್ತುವುದು ಗಜಾರೋಹಣ ಪೂಜೆ, ಗೃಹಪ್ರವೇಶ ಮಹೋತ್ಸವ ಹಾಗೂ 12ರ ಸೋಮವಾರ ಪ್ರಾತಃಕಾಲ ದೇವತಾ ಉದ್ವಾಸನೆ, ವಿವಾಹ ದೀಕ್ಷಾ ವಿಸರ್ಜನೆ ಅನಂತರ ಸ್ಥಂಭ ಪೂಜಾ ರಾತ್ರಿ ಪುಷ್ಪಾಂದೋಳಿಕೋತ್ಸವ, ಶಯನೋತ್ಸವವೂ ನಡೆಯಲಿದೆ. ಗಿರಿಜಾ ಕಲ್ಯಾಣ ಮಹೋತ್ಸವದ ಪ್ರತಿದಿನ ಸಂಜೆ ಸಂಗೀತ, ಹರಿಕಥೆ ಇತ್ಯಾದಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ವಿದ್ಯುತ್ ದರ ಹೆಚ್ಚಳ ಖಂಡಿಸಿ ಬಿಜೆಪಿ ಪ್ರತಿಭಟನೆ

ಚಾಮರಾಜನಗರ, ಜೂ.5– ವಿದ್ಯುತ್ ದರ ಹೆಚ್ಚಳ ಖಂಡಿಸಿ ಹಾಗೂ ಬಿಜೆಪಿ ಸರ್ಕಾರ ಜಾರಿಗೊಳಿಸಿರುವ ಗೋಹತ್ಯೆ ನಿಷೇಧ ಕಾಯ್ದೆಯನ್ನು ಮುಂದುವರಿಸುವಂತೆ ಆಗ್ರಹಿಸಿ ಬಿಜೆಪಿ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.



ನಗರದ ಮೇಫಾ ಕಾಂಪ್ಲೆಕ್ಸ್‌ನಲ್ಲಿರುವ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ನಾರಾಯಣಪ್ರಸಾದ್ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿತರರು ಅಲ್ಲಿಂದ ಮೆರವಣಿಗೆ ಹೊರಟು, ವೀರಭದ್ರೇಶ್ವರ ದೇವಸ್ಥಾನ, ರಥ ಬೀದಿಯ ಮೂಲಕ ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆತಡೆ ನಡೆಸಿ, ವಿದ್ಯುತ್ ದರ ಹೆಚ್ಚಳ ಮಾಡಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭ ಮಾಜಿ ಶಾಸಕ ಎಸ್. ಬಾಲರಾಜು ಮಾತನಾಡಿ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮಾಡುತ್ತಿರುವ ಮೋಸ, ವಂಚನೆ ವಿರುದ್ಧ ಬಿಜೆಪಿ ಪ್ರತಿಭಟನೆ ಮಾಡುತ್ತಿದೆ. ಪ್ರಮುಖವಾಗಿ ವಿದ್ಯುತ್ ದರ ಹೆಚ್ಚಳ ಮಾಡಿರುವುದು ಸಾರ್ವಜನಿಕರಿಗೆ ಹೊರೆಯಾಗಿದೆ. ವಿದ್ಯುತ್ ದರ ಹೆಚ್ಚಳ ವಾಪಸ್ ಪಡೆಯಬೇಕು. ಬಿಜೆಪಿ ಸರ್ಕಾರ ಜಾರಿಗೊಳಿಸಿರುವ ಗೋಹತ್ಯೆ ನಿಷೇಧ ಕಾಯ್ದೆಯನ್ನು ಮುಂದುವರಿಸಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳಿಗೆ ಮಾನದಂಡ ಹಾಕುವುದು ಅಕ್ಷಮ್ಯ ಅಪರಾಧವಾಗಿದೆ. ಗ್ಯಾರಂಟಿ ಯೋಜನೆಗಳನ್ನು ಯಾವುದೇ ಮಾನದಂಡವಿಲ್ಲದೆ ಯಥಾವತ್ತಾಗಿ ರಾಜ್ಯದ ಜನತೆಗೆ ತಲುಪಿಸಬೇಕು. ಗೃಹ ಜ್ಯೋತಿ ಯೋಜನೆಯಲ್ಲಿ 200 ಯೂನಿಟ್ ವಿದ್ಯುತ್ ಬಳಕೆಗೆ ಪೂರ್ಣ ಪ್ರಮಾಣ ಅವಕಾಶ ಕೊಡಬೇಕು. ಯಾವುದೇ ಮಾನದಂಡ ಹಾಕಬಾರದು ಎಂದರು.

ನಿರುದ್ಯೋಗ ಭತ್ಯೆಯನ್ನು ಎಲ್ಲರಿಗೂ ಕೊಡುವುದಾಗಿ ಹೇಳಿದ್ದು ಈಗ 2022–23 ನೇ ಸಾಲಿಗೆ ಮಾತ್ರ ನಿರುದ್ಯೋಗ ಭತ್ಯೆ ನೀಡುವುದಾಗಿ ಘೋಷಣೆ ಮಾಡುವುದು ಸರಿಯಲ್ಲ. 5 ವರ್ಷಗಳಿಂದ ನೌಕರಿ ಸಿಗದೆ ಇರುವ ನಿರುದ್ಯೋಗಿಗಳಿಗೆ ಭತ್ಯೆ ಕೊಡುವ ಕೆಲಸ ಆಗಬೇಕು. ಗೃಹ ಲಕ್ಷ್ಮೀ ಯೋಜನೆಯಡಿ ಮನೆ ಯಜಮಾನಿಗೆ 2 ಸಾವಿರ ರೂ. ವಿತರಣೆಯಲ್ಲಿ ಮಾನದಂಡ ಮಾಡುವ ಮೂಲಕ ಮನೆಯಲ್ಲಿ ಗೃಹಲಕ್ಷ್ಮೀಯರೇ ಜಗಳವಾಡುವಂತಾಗಿದೆ. ಆದ್ದರಿಂದ ಅತ್ತೆ, ಸೊಸೆ ಎನ್ನದೇ ವಿವಾಹವಾಗಿದ್ದು, ಪಡಿತರ ಚೀಟಿ ಹೊಂದಿರುವ ಎಲ್ಲಾ ಯಜಮಾನಿಗೂ ಕಡ್ಡಾಯವಾಗಿ 2 ಸಾವಿರ ರೂ. ವಿತರಿಸಬೇಕು. ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ತನಕ ಬಿಜೆಪಿ ಹೋರಾಟ ಮಾಡುತ್ತದೆ ಎಚ್ಚರಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾರಾಯಣಪ್ರಸಾದ್ ಮಾತನಾಡಿ, ಕಾಂಗ್ರೆಸ್ ಸರ್ಕಾರ ವಿದ್ಯುತ್ ಶುಲ್ಕ ಹೆಚ್ಚಳ ಮಾಡಿರುವುದರ ವಿರುದ್ಧ ರಾಜ್ಯಾದ್ಯಂತ ಬಿಜೆಪಿ ಪ್ರತಿಭಟನೆ ನಡೆಸುತ್ತಿದ್ದು, ಜಿಲ್ಲೆಯಲ್ಲೂ ಕೂಡ ಪ್ರತಿಭಟನೆ ನಡೆಸಲಾಗಿದೆ. ಗೋವುಗಳನ್ನು ಸಂರಕ್ಷಣೆ ಮಾಡಬೇಕಾದ ಪಶು ಸಂಗೋಪನಾ ಸಚಿವರೇ ಪಶುಗಳನ್ನು ಯಾಕೇ ಕಡಿಯಬಾರದು ಎಂದು ಹೇಳಿರುವುದು ಬಹಳ ವಿಷಾದಕರ ಸಂಗತಿಯಾಗಿದೆ. ಹಸುಗಳನ್ನು ಏಕೆ ಕಡಿಯಬಾರದು ಎಂಬ ಮನಸ್ಥಿತಿಯುಳ್ಳ ಕಾಂಗ್ರೆಸ್ ಸರ್ಕಾರ ವಿರುದ್ಧ ಬಿಜೆಪಿ ನಿರಂತರ ಹೋರಾಟ ಮಾಡುತ್ತದೆ ಎಂದರು.

ಪ್ರತಿಭಟನೆಯಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಡಾ.ಎ.ಆರ್.ಬಾಬು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗಶ್ರೀ ಪ್ರತಾಪ್, ಉಪಾಧ್ಯಕ್ಷ ಪಿ.ವೃಷಬೇಂದ್ರಪ್ಪ, ಕೆರೆಹಳ್ಳಿ ಮಹದೇವಸ್ವಾಮಿ, ಕಾಡಾ ಮಾಜಿ ಅಧ್ಯಕ್ಷ ನಿಜಗುಣ ರಾಜು, ಎಪಿಎಂಸಿ ಅಧ್ಯಕ್ಷ ಮನೋಜ್ ಪಟೇಲ್, ಗ್ರಾಮಾಂತರ ಮಂಡಲ ಅಧ್ಯಕ್ಷ ಬಸವಣ್ಣ, ನಗರ ಮಂಡಲ ಅಧ್ಯಕ್ಷ ರಾಜು, ಜಿಲ್ಲಾ ಯುವ ಮೋರ್ಚಾದ ಪ್ರಣಯ್, ಉಪಾಧ್ಯಕ್ಷ ಶಿವು ವಿರಾಟ್, ಪಣ್ಯದಹುಂಡಿ ಸತೀಶ್, ಬುಲೆಟ್ ಚಂದ್ರು, ಕೆ.ವೀರಭದ್ರಸ್ವಾಮಿ ವೇಣುಗೋಪಾಲ್, ಮಹೇಶ್, ನಾಗೇಂದ್ರಬಾಬು, ಪಿ.ರಂಗಸ್ವಾಮಿ, ಸರಸ್ವತಿ, ಕಮಲಮ್ಮ ಇತರರು ಭಾಗವಹಿಸಿದ್ದರು.

ಬ್ರಹ್ಮಕುಮಾರಿಯರಿಂದ ವಿಶ್ವ ಪರಿಸರ ದಿನಾಚರಣೆ



ಚಾಮರಾಜನಗರ, ಜೂ.5– ಅಂತಾರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಪ್ರಕಾಶ ಭವನದ ಆವರಣದಲ್ಲಿ ಗಿಡನೆಟ್ಟು ವಿಶ್ವ ಪರಿಸರ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು.

ಗಿಡ ನೆಟ್ಟು, ನೀರೆರೆದು ಮಾತನಾಡಿದ ಸಂಸ್ಥೆಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಕುಮಾರಿ ದಾನೇಶ್ವರೀಜಿ, ಪ್ರಕೃತಿಯ ಪತಿ ಪರಮಾತ್ಮ ದಾತಾ ಎಂದರೆ ಕೊಡುವವನಾಗಿದ್ದಾನೆ. ಅವನ ಮಕ್ಕಳು ಆತ್ಮಗಳು ಅವನಿಂದ ಪಡೆದು ಸೃಷ್ಟಿಯಲ್ಲಿ ಸತ್ಯಯುಗ ತ್ರೇತಾಯುಗದಲ್ಲಿ ಸುಖ ಕೊಡುವಂತಹ ಪಾತ್ರ ಮಾಡಿದವು. ದ್ವಾಪರ, ಕಲಿಯುಗದಲ್ಲಿ ಲೋಭ ವೃತ್ತಿಯಿಂದ ಎಲ್ಲವೂ ನನಗೇ ಬೇಕು ಎಂಬ ಮನೋಭಾವದಿಂದ ಮನುಷ್ಯ ದುಃಖ ಕೂಪಕ್ಕೆ ತನ್ನನ್ನು ದೂಡಿಕೊಂಡಿದ್ದಾನೆ ಎಂದು ವಿಷಾದಿಸಿದರು.

ಪ್ರಕೃತಿಯಲ್ಲಿರುವ ಮರ–ಗಿಡಗಳು ಪರೋಪಕಾರ ಮಾಡುತ್ತೇವೆಯೇ ಹೊರತು ಅಪಕಾರ ಎಂದೂ ಮಾಡುವುದಿಲ್ಲ. ಆದ್ದರಿಂದ ಅವುಗಳನ್ನು ಬೆಳೆಸಿ, ಪೋಷಿಸಿ ರಕ್ಷಿಸುತ್ತಿರುವ ಏಕೈಕ ಸಮಾಜ ಸೇವಕ, ಪರಿಸರ ಪ್ರೇಮಿ ಎಂದರೆ ವೆಂಕಟೇಶ್ ಎಂದು ಪ್ರಶಂಸಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ವೆಂಕಟೇಶ್, ನಗರದಲ್ಲಿ 10 ಸಾವಿರಕ್ಕೂ ಹೆಚ್ಚು ಗಿಡ ನೆಟ್ಟು ಇಂದು ಮರವಾಗಿ ಅನೇಕರಿಗೆ ನೆರಳು ಕೊಡುತ್ತಿರುವುದು ನನಗೆ ಆತ್ಮತೃಪ್ತಿ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಸಂಗೀತ ಪ್ರೇಮಿ ರವಿಕುಮಾರ್ ತಾವೇ ರಚಿಸಿರುವ ಮಾದಪ್ಪನ ಹಾಡುಗಳನ್ನು ಹಾಡಿ ರಂಜಿಸಿದರು.

ನಿವೃತ್ತ ಅರಣ್ಯಾಧಿಕಾರಿ ಎಂ.ಬಿ.ಕೃಷ್ಣ ಮೂರ್ತಿ ಮಾತನಾಡಿ, ತಾವು ತಮ್ಮ ಹುಟ್ಟುಹಬ್ಬದ ದಿನಗಳಲ್ಲಿ 75ನೇ ಇಸವಿಯಿಂದ ಪ್ರತಿ ವರ್ಷ ಎರಡೆರಡು ವೃಕ್ಷಗಳನ್ನು ನೆಟ್ಟು ಪೋಷಿಸುತ್ತಾ ಬಂದಿದ್ದೇನೆ ಎಂದರು.

ಇದೇ ಸಂದರ್ಭದಲ್ಲಿ ಇಲ್ಲಿಂದ ಮೈಸೂರಿಗೆ ವರ್ಗಾವಣೆ ಹೊಂದಿದ ರಾಜಯೋಗ ವಿದ್ಯಾರ್ಥಿನಿ ಸರಸ್ವತಿ ಯಕ್ಕ ಮತ್ತು ಕುಟುಂಬ ವರ್ಗದವರನ್ನು ಹೃದಯಸ್ಪರ್ಶಿಯಾಗಿ ಬೀಳ್ಕೊಡಲಾಯಿತು. ಕಾರ್ಯಕ್ರಮದಲ್ಲಿ ಓಂ ಶಾಂತಿ ನ್ಯೂಸ್ ಸರ್ವಿಸ್‌ನ ಬಿ.ಕೆ ಆರಾಧ್ಯ, ಸತೀಶ್, ಶ್ರೀನಿವಾಸ, ಸರಳಾ, ಗೀತಾ, ಆಶಾ, ಪ್ರಮೀಳಾ, ಸುಲೋಚನ, ಸುಕನ್ಯಾ, ಸುವರ್ಣ, ಸುಧಾ, ಗೋವಿಂದ ರಾಜು, ಸುಂದರ್, ಶಿವಕುಮಾರ, ಲಕ್ಷ್ಮಿ ನರಸಿಂಹ ಪ್ರಸಾದ್, ನಾರಾಯಣಶೆಟ್ಟಿ, ಮಹೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯುತ್ ಸ್ಪರ್ಶ: ವಿದ್ಯಾರ್ಥಿನಿ ಸಾವು



ಗುಂಡ್ಲುಪೇಟೆ, ಜೂ.5– ವಿದ್ಯುತ್ ಸ್ಪರ್ಶಿಸಿ ವಿದ್ಯಾರ್ಥಿನಿಯೊಬ್ಬಳು ಸಾವಿಗೀಡಾದ ದುರ್ಘಟನೆ ತಾಲೂಕಿನ ಮಡಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ಮಹದೇವಪ್ಪ ಎಂಬವರ ಮೊಮ್ಮಗಳು ವಿದ್ಯಾಶ್ರೀ(11) ಮೃತ ದುರ್ದೈವಿ. ಮಹದೇವಪ್ಪ ಎಂಬುವರ ಮಗಳು ಆಶಾ ಎಂಬುವರನ್ನು ಕುಮಚಹಳ್ಳಿ ಗ್ರಾಮಕ್ಕೆ ಮದುವೆ ಮಾಡಿದ್ದು ವಿದ್ಯಾಶ್ರೀ ತಾತನ ಮನೆಯಲ್ಲಿಯೇ ಇದ್ದು ಪಟ್ಟಣದ ಮದ್ದಾನೇಶ್ವರ ಪ್ರಾಥಮಿಕ ಶಾಲೆಯಲ್ಲಿ 6 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಳು.

ಭಾನುವಾರ ರಾತ್ರಿ ಮನೆಗೆ ನೀರು ಸರಬರಾಜು ಮಾಡಲು ಸಂಪಿಗೆ ಅಳವಡಿಸಿದ್ದ ಮೋಟಾರು ನಿಲ್ಲಿಸಲು ಸ್ವಿಚ್ ಮುಟ್ಟಿದಾಗ ವಿದ್ಯುತ್ ತಗುಲಿ ಸ್ಥಳದಲ್ಲಿಯೇ ಸಾವಿಗೀಡಾದಳು ಎಂದು ಹೇಳಲಾಗಿದೆ. ಈ ಬಗ್ಗೆ ಯಾವುದೇ ಪ್ರಕರಣ ದಾಖಲಾಗಿಲ್ಲ.

ಬ್ರಿಜ್ ಭೂಷಣ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ



ಚಾಮರಾಜನಗರ, ಜೂ.5– ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪ ಹೊತ್ತಿರುವ ಬಿಜೆಪಿ ಸಂಸದ ಬ್ರಿಜ್ ಭೂಷಣ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ನಗರದಲ್ಲಿ ಸೋಮವಾರ ರೈತ ಸಂಘ ಹಾಗೂ ಹಸಿರುಸೇನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಜಿಲ್ಲಾಡಳಿತ ಭವನದ ಮುಂಭಾಗ ಪ್ರತಿಭಟನೆ ನಡೆಸಿದ ರೈತರು, ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ಘೋಷಣೆಗಳನ್ನು ಕೂಗಿದರು. ಒಲಿಂಪಿಕ್ ಪದಕ ವಿಜೇತರು, ವಿಶ್ವ ಚಾಂಪಿಯನ್ ಕುಸ್ತಿಪಟುಗಳು ಸೇರಿದಂತೆ ದೇಶದ ಕ್ರೀಡಾಪಟುಗಳು ನವದೆಹಲಿಯ ಜಂತರ– ಮಂತರ್‌ನಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸುತ್ತಿದ್ದಾರೆ. ಮಹಿಳಾ ಕುಸ್ತಿಪಟುಗಳ ಕೆಲವರ ಮೇಲೆ ಬಿಜೆಪಿ ಸಂಸದ ಬ್ರಿಜ್ ಭೂಷಣ್ ಸಿಂಗ್ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಕ್ರೀಡಾಪಟುಗಳು ದೂರಿದ್ದಾರೆ. ಇದರಿಂದ ಸಂಸದ ಬ್ರಿಜ್ ಭೂಷಣ್ ಸಿಂಗ್ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು. ಈ ಕೂಡಲೇ ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಎ.ಎಂ. ಮಹೇಶ ಪ್ರಭು, ಹೆಗ್ಗವಾಡಿಪುರ ಮಹೇಶಕುಮಾರ್, ಯಶವಂತ, ಶೈಲೇಶ್, ಹೊನ್ನೇಗೌಡನಹುಂಡಿ ಸಿದ್ದರಾಜು, ಮೂಡ್ನಾಕೂಡು ಮಹೇಶ್, ಶಾಂತಮಲ್ಲಪ್ಪ, ಬಸವರಾಜು ಇತರರು ಪಾಲ್ಗೊಂಡಿದ್ದರು.

ಸಿಮ್ಸ್ ಡೀನ್ ವಜಾಕ್ಕೆ ಆಗ್ರಹ; ಹೋರಾಟ ಮುಂದುವರಿಕೆಗೆ ನಿರ್ಧಾರ

ಚಾಮರಾಜನಗರ, ಜೂ.5– ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಸಿಮ್ಸ್) ಡೀನ್ ಡಾ.ಸಂಜೀವ್‌ರನ್ನು ಸೇವೆಯಿಂದ ವಜಾಗೊಳಿಸಬೇಕು. ಈ ಸಂಬಂಧ ನಮ್ಮ ಹೋರಾಟವನ್ನು ಮುಂದುವರಿಸಲಾಗುವುದು ಎಂದು ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹ.ರಾ.ಮಹೇಶ್ ತಿಳಿಸಿದ್ದಾರೆ.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಡೀನ್ ವಿರುದ್ಧ ನಾವು ಬೃಹತ್ ಪ್ರತಿಭಟನೆ ನಡೆಸಿ, ಅವರನ್ನು ಸೇವೆಯಿಂದ ವಜಾ ಮಾಡಬೇಕು ಎಂದು ಆಗ್ರಹಿಸಿ ಜಿಲ್ಲಾಧಿಕಾರಿಯವರಿಗೆ ಮನವಿ ನೀಡಿದ್ದೆವು. ಆದರೆ, ಈವರೆಗೆ ಏನೂ ಕ್ರಮವಾಗಿಲ್ಲ. ಈ ಸರ್ಕಾರ ಕೂಡ ಈ ಪ್ರಕರಣವನ್ನು ನಿರ್ಲಕ್ಷ್ಯ ಮಾಡುತ್ತಿದೆಯೇ ಎಂಬ ಅನುಮಾನ ಮೂಡಿದೆ ಎಂದರು.

ನಂತರ ವಕೀಲ ಪ್ರಸನ್ನ ಕುಮಾರ್ ಮಾತನಾಡಿ, ಅಂಬೇಡ್ಕರ್ ಅವರನ್ನು ಅವಮಾನಿಸಿದ ವ್ಯಕ್ತಿಯನ್ನು ಸೇವೆಯಿಂದ ಅಮಾನತು ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಯಾಕೆ ಮೀನಮೇಷ ಎಣಿಸುತ್ತಿದ್ದಾರೋ ತಿಳಿಯುತ್ತಿಲ್ಲ. ಡೀನ್ ಅವರನ್ನು ವರ್ಗಾವಣೆ ಮಾಡುವ ತಂತ್ರ ಅನುಸರಿಸುತ್ತಿದ್ದಾರೆ. ಇದನ್ನು ನಾವು ಒಪ್ಪುವುದಿಲ್ಲ ಎಂದರು.

ಒಂದನೇ ಪುಟದಿಂದ

'ಗೃಹ ಜ್ಯೋತಿ' ಷರತ್ತುಗಳು

- ಈ ಯೋಜನೆಯು ಗೃಹ ಬಳಕೆಯ ವಿದ್ಯುತ್ ಸಂಪರ್ಕಗಳಿಗೆ ಮಾತ್ರ ಅನ್ವಯವಾಗಲಿದ್ದು. ವಾಣಿಜ್ಯ ಉದ್ದೇಶಕ್ಕೆ ಬಳಸುವವರಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.
- ಪ್ರತಿ ತಿಂಗಳು ರೀಡಿಂಗ್ ಮಾಡಿದಾಗ, ಒಟ್ಟು ವಿದ್ಯುತ್ ಬಳಕೆಯ ಪ್ರಮಾಣಕ್ಕೆ ಬಿಲ್ಲನ್ನು ನಮೂದು ಮಾಡಲಾಗುತ್ತದೆ.
- ಒಂದು ವೇಳೆ ಸರಾಸರಿಗಿಂತ ಹೆಚ್ಚಿನ ವಿದ್ಯುತ್ ಬಳಕೆ ಮಾಡಿದರೆ, ಅರ್ಹ ಮೊತ್ತವನ್ನು ಬಿಲ್‌ನಲ್ಲಿ ಕಡಿತಗೊಳಿಸಿ, ಉಳಿದ ಮೊತ್ತವನ್ನು ಗ್ರಾಹಕರಿಗೆ ನೆಟ್‌ಬಿಲ್ ಆಗಿ ನೀಡಲಾಗುತ್ತದೆ. ಈ ಮೊತ್ತವನ್ನು ಗ್ರಾಹಕರು ಪಾವತಿ ಮಾಡಬೇಕಾಗುತ್ತದೆ.
- ಅರ್ಹ ಯುನಿಟ್ ಮೊತ್ತಕ್ಕಿಂತ ಕಡಿಮೆ ಬಳಕೆ ಮಾಡಿದ್ದರೆ ಅಂತಹ ಗ್ರಾಹಕರಿಗೆ ಶೂನ್ಯ(ಸೊನ್ನೆ) ಬಿಲ್ ನೀಡಲಾಗುತ್ತದೆ.
- ಈ ಯೋಜನೆಯಡಿ ಸೌಲಭ್ಯ ಪಡೆಯಲು ಬಯಸುವ ಗ್ರಾಹಕರು ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬೇಕಾಗುತ್ತದೆ.
- ಪ್ರತಿ ಫಲಾನುಭವಿ ತನ್ನ ಗ್ರಾಹಕ ಐಡಿ/ ಖಾತೆ ಐಡಿಯನ್ನು ಆಧಾರ್ ಜೊತೆ ಜೋಡಣೆ ಮಾಡಬೇಕಾಗುತ್ತದೆ.
- ಸದ್ಯ ಚಾಲ್ತಿಯಲ್ಲಿರುವ ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಯೋಜನೆ ಮತ್ತು ಅಮೃತ ಜ್ಯೋತಿ ಯೋಜನೆಯ ಫಲಾನುಭವಿ ಗ್ರಾಹಕರುಗಳನ್ನು ಗೃಹಜ್ಯೋತಿ ಯೋಜನೆ ಅಡಿಯಲ್ಲಿ ಸೇರಿಸಲಾಗುತ್ತದೆ.
- ಜೂನ್ 30ರವರೆಗೆ ಬಳಸಿದ ವಿದ್ಯುತ್‌ಗೆ ಬಿಲ್ ಪಾವತಿ ಮಾಡಬೇಕಾಗುತ್ತದೆ. ಬಾಕಿ ಇರುವ ವಿದ್ಯುತ್ ಮೊತ್ತವನ್ನು ಮೂರು ತಿಂಗಳೊಳಗೆ ಪಾವತಿ ಮಾಡದಿದ್ದರೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುತ್ತದೆ.
- ಗೃಹ ವಿದ್ಯುತ್ ಬಳಕೆದಾರರಲ್ಲಿ ಒಂದಕ್ಕಿಂತ ಹೆಚ್ಚಿನ ಮೀಟರ್ ಇದ್ದಲ್ಲಿ ಒಂದು ಮೀಟರ್‌ಗೆ ಮಾತ್ರ ಈ ಯೋಜನೆ ಅನ್ವಯವಾಗಲಿದೆ.

ಒಂದಕ್ಕೆ ಮಾತ್ರ ಗೃಹಜ್ಯೋತಿ

200 ಯೂನಿಟ್‌ವರೆಗೆ ಉಚಿತವಾಗಿ ವಿದ್ಯುತ್ ಬಳಸಬಹುದು ಎಂದುಕೊಂಡಿದ್ದ ಬಾಡಿಗೆದಾರರು ಯೋಜನೆಯಿಂದ ವಂಚಿತರಾಗುವ ಸಾಧ್ಯತೆ ದಟ್ಟವಾಗಿದೆ.

ಸರ್ಕಾರ ನೀಡಿರುವ ಆದೇಶದ ಪ್ರಕಾರ ಕಳೆದ 12 ತಿಂಗಳಿನಲ್ಲಿ ಬಳಸಿದ ಯೂನಿಟ್‌ಗಳ ಆಧಾರದ ಮೇಲೆ ಸರಾಸರಿ ಯೂನಿಟ್ ಲೆಕ್ಕಹಾಕಿ ಅದಕ್ಕೆ ಶೇ.10 ರಷ್ಟು ಹೆಚ್ಚುವರಿ ಬಳಕೆ ಮಾಡಬಹುದು. ಹೀಗೆ ಲೆಕ್ಕಾಚಾರ ಮಾಡಿ ನಿಗದಿಪಡಿಸಿದಷ್ಟು ವಿದ್ಯುತ್ ಸಂಪೂರ್ಣ ಉಚಿತವಾಗಿರಲಿದೆ. ಅದಕ್ಕಿಂತ ಹೆಚ್ಚು ಬಳಸುವ ವಿದ್ಯುತ್‌ಗೆ ಹಣ ಪಾವತಿಸಬೇಕಾಗುತ್ತದೆ. ಒಂದು ವೇಳೆ ಸರಾಸರಿ 200 ಯೂನಿಟ್‌ಗಿಂತ ಹೆಚ್ಚಿನ ವಿದ್ಯುತ್ ಬಳಕೆ ಮಾಡಿದರೆ ಗ್ರಾಹಕರು ಪೂರ್ಣ ವಿದ್ಯುತ್ ಬಿಲ್ ಪಾವತಿ ಮಾಡಬೇಕಾಗುತ್ತದೆ. ಗ್ರಾಹಕರಿಗೆ ನೀಡಿದ ಉಚಿತ ಮೊತ್ತವನ್ನು ಸರ್ಕಾರದಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಹಾಯಧನದ ಮೂಲಕ ಪಾವತಿ ಮಾಡಲಾಗುತ್ತದೆ. ಪ್ರಸ್ತುತ ಚಾಲ್ತಿಯಲ್ಲಿರುವ ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಮತ್ತು ಅಮೃತ ಜ್ಯೋತಿ ಯೋಜನೆಗಳ ಫಲಾನುಭವಿಗಳನ್ನೂ ಗೃಹಜ್ಯೋತಿ ಯೋಜನೆಯಡಿ ಸೇರಿಸಿ ಹೊಸ ಆದೇಶ ಹೊರಡಿಸಲಾಗಿದೆ. ಜುಲೈ ತಿಂಗಳ ವಿದ್ಯುತ್ ಬಳಕೆಗೆ ಆಗಸ್ಟ್‌ನಲ್ಲಿ ನೀಡುವ ಬಿಲ್ಲಿಗೆ ಅನ್ವಯವಾಗುವಂತೆ ಹಲವು ಷರತ್ತುಗಳೊಂದಿಗೆ ಈ ಯೋಜನೆ ಜಾರಿಗೆ ತರಲು ಆದೇಶಿಸಿದೆ.

ವಿದ್ಯುಚ್ಛಕ್ತಿಯನ್ನು ಉಚಿತವಾಗಿ ರಾಜ್ಯದ ನಾಗರಿಕರಿಗೆ ಒದಗಿಸಲು ಮೇ 20ರಂದು ಸಚಿವ ಸಂಪುಟದ ಸಭೆಯಲ್ಲಿ ತಾತ್ವಿಕ ಅನುಮೋದನೆ ನೀಡಲಾಗಿತ್ತು. ಅಲ್ಲದೆ ಗೃಹಜ್ಯೋತಿ ಯೋಜನೆ ಅನುಷ್ಠಾನಗೊಳಿಸಲು ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳ ಬಗ್ಗೆ ಸರ್ಕಾರದಿಂದ ಪ್ರತ್ಯೇಕ ಆದೇಶ ಹೊರಡಿಸಲಾಗುವುದೆಂದು ಅಂದು ತಿಳಿಸಲಾಗಿತ್ತು. ಜೂ. 2ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ 'ಗೃಹ ಜ್ಯೋತಿ" ಯೋಜನೆ ಅನುಷ್ಠಾನಗೊಳಿಸುವ ಬಗ್ಗೆ ವಿಷಯ ಮಂಡನೆ ಆಗಿದ್ದು, 'ಗೃಹ ಜ್ಯೋತಿ" ಯೋಜನೆಯಡಿ ರಾಜ್ಯದ ಪ್ರತಿ ಮನೆಗೆ ಮಾಸಿಕ ಗರಿಷ್ಠ 200 ಯೂನಿಟ್‌ವರೆಗಿನ ಬಳಕೆಯ ಮಿತಿಯಲ್ಲಿ ಪ್ರತಿ ಗ್ರಾಹಕರ ಮಾಸಿಕ ಸರಾಸರಿ ಬಳಕೆಯ (ಆರ್ಥಿಕ ವರ್ಷ 2022–23ರ ಬಳಕೆಯ ಆಧಾರದನ್ವಯ) ಯೂನಿಟ್‌ಗಳ ಮೇಲೆ ಶೇ.10 ಹೆಚ್ಚಿನ ವಿದ್ಯುತ್ ಬಳಕೆಯ ಮಿತಿಯನ್ನು ಅನುಮತಿಸಿ, ಅದಕ್ಕನುಗುಣವಾಗಿ ವಿದ್ಯುತ್ ಬಿಲ್ಲಿನ ಮೊತ್ತವನ್ನು ಉಚಿತವಾಗಿ ಒದಗಿಸಲು ಹಾಗೂ 200 ಯೂನಿಟ್‌ಗಳ ಬಳಕೆಯನ್ನು ಮೀರಿದ ಗ್ರಾಹಕರು ಪೂರ್ಣ ವಿದ್ಯುತ್ ಬಿಲ್ಲನ್ನು ಪಾವತಿಸಲು ಸಂಪುಟ ಸಭೆ ಅನುಮೋದಿಸಿತ್ತು.

ಹಲವು ಗೊಂದಲ; ಸಚಿವ ಜಾರ್ಜ್ ಸ್ಪಷ್ಟನೆ



ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಗೃಹಜ್ಯೋತಿ ಯೋಜನೆ ಬಗ್ಗೆ ಸಾರ್ವಜನಿಕ ವಲಯಗಳಲ್ಲಿ ಹಲವು ಗೊಂದಲಗಳಿದ್ದು, ಈ ಸಂಬಂಧ ಇಂಧನ ಸಚಿವ ಕೆ.ಜೆ.ಜಾರ್ಜ್ ಸ್ಪಷ್ಟೀಕರಣ ನೀಡಿದ್ದಾರೆ. ನಾವು ಉಚಿತವಾಗಿ ನೀಡುತ್ತಿರುವುದು ಒಂದು ಆರ್‌ಆರ್ ನಂಬರ್(ಗ್ರಾಹಕರ ಸಂಖ್ಯೆ)ಗೆ ಮಾತ್ರ.. ಒಂದೇ ಮನೆಯಲ್ಲಿ ಒಂದಕ್ಕಿಂತ ಹೆಚ್ಚು ಆರ್‌ಆರ್ ನಂಬರ್ ಇರಬಹುದು. ಆದರೆ 200 ಯುನಿಟ್‌ಗಿಂತ ಹೆಚ್ಚಾದರೆ ಅವರಿಗೆ ಉಚಿತವಾಗಿ ವಿದ್ಯುತ್ ಸಿಗುವುದಿಲ್ಲ. ನಾವು ಆರ್‌ಆರ್ ಸಂಖ್ಯೆ ಆಧಾರದಲ್ಲಿ ಯೂನಿಟ್ ಪರಿಗಣಿಸುತ್ತೇವೆ. ಮಾಲೀಕರಿರಲಿ, ಬಾಡಿಗೆದಾರರಿರಲಿ ಆರ್‌ಆರ್ ಸಂಖ್ಯೆ ಆಧಾರದ ಮೀಟರ್ ರೀಡ್ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ. 200 ಯುನಿಟ್ ಒಳಗೆ ವಿದ್ಯುತ್ ಬಳಸಿದ್ದರೆ ಉಚಿತ ನೀಡುತ್ತೇವೆ. ಇದ್ದಲ್ಲದೆ ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಬಳಸಿದಾಗ ಹೆಚ್ಚುವರಿ ಬಿಲ್ ಪಾವತಿಸಬೇಕಾಗುತ್ತೆ. ಅಂದರೆ ವಾರ್ಷಿಕ ಸರಾಸರಿ ಹಾಗೂ ಅದರ ಶೇ.10ಕ್ಕಿಂತ ಹೆಚ್ಚು ಯೂನಿಟ್ ಬಳಸಿದರೆ ಮಾತ್ರ ಬಿಲ್ ಪಾವತಿಸಬೇಕು. ಮಾಲೀಕ ಹಾಗೂ ಬಾಡಿಗೆದಾರ ಎನ್ನುವ ವ್ಯತ್ಯಾಸವಿಲ್ಲ. ಆದರೆ ಮಾಹಿತಿಗೆ ಅರ್ಜಿ ಕರೆದಿದ್ದೇವೆ ಎಂದರು.

'ಶಕ್ತಿ ಸ್ಮಾರ್ಟ್ ಕಾರ್ಡ್'

ಕೆಎಸ್‌ಆರ್‌ಟಿಸಿ ಸೇರಿದಂತೆ ರಾಜ್ಯದ 4 ಸಾರಿಗೆ ಸಂಸ್ಥೆಗಳಲ್ಲಿನ ನಗರ, ಸಾಮಾನ್ಯ ಹಾಗೂ ಎಕ್ಸ್‌ಪ್ರೆಸ್ ಬಸ್‌ಗಳಲ್ಲಿ ವಿದ್ಯಾರ್ಥಿನಿಯರೂ ಸೇರಿದಂತೆ ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು ರಾಜ್ಯದ ಒಳಗೆ ಎಲ್ಲೆಂದರಲ್ಲಿಗೆ ಉಚಿತವಾಗಿ ಪ್ರಯಾಣಿಸಬಹುದಾಗಿದೆ. ಅದೇ ವೇಳೆ ಅಂತರರಾಜ್ಯ ಸಾರಿಗೆ ಬಸ್‌ಗಳಿಗೆ, ಐಷಾರಾಮಿ ಬಸ್‌ಗಳಾದ ರಾಜಹಂಸ, ನಾನ್ ಎಸಿ ಸ್ಲೀಪರ್, ವಜ್ರ, ವಾಯುವಜ್ರ, ಐರಾವತ, ಐರಾವತ ಕ್ಲಬ್ ಕ್ಲಾಸ್, ಐರಾವತ ಗೋಲ್ಡ್ ಕ್ಲಾಸ್, ಅಂಬಾರಿ, ಅಂಬಾರಿ ಡ್ರೀಮ್ ಕ್ಲಾಸ್, ಅಂಬಾರಿ ಉತ್ಸವ್, ಫ್ಲೈ ಬಸ್, ಇವಿ ಪವರ್ ಬಸ್‌ಗಳಿಗೆ ಈ ಯೋಜನೆ ಅನ್ವಯಿಸುವುದಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಈ ಯೋಜನೆಯಡಿ ಸಾರಿಗೆ ಸಂಸ್ಥೆಗಳಿಗೆ ತಗಲುವ ವೆಚ್ಚವನ್ನು ಸ್ಮಾರ್ಟ್‌ಗಳ ದತ್ತಾಂಶವನ್ನು ಆಧರಿಸಿ ರಾಜ್ಯ ಸರ್ಕಾರದಿಂದ ಭರಿಸಲಾಗುವುದು. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಹೊರತುಪಡಿಸಿ, ಉಳಿದ ಬಸ್‌ಗಳಲ್ಲಿ ಶೇ. 50ರಷ್ಟು ಆಸನಗಳನ್ನು ಪುರುಷರಿಗೆ ಕಾಯ್ದಿರಿಸತಕ್ಕದ್ದು ಎಂದು ಸಾರಿಗೆ ಇಲಾಖೆಯ ಅಧೀನ ಕಾರ್ಯದರ್ಶಿ ವಿ.ಎಸ್.ಪುಷ್ಪ ಅವರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಬಜೆಟ್ ಮಂಡನೆ

ಅಂತಹ ಕಡೆಗಳಲ್ಲಿ ಇತಿಮಿತಿಯಲ್ಲಿ ತೆರಿಗೆ ಹೆಚ್ಚಿಸಲು ಗಂಭೀರ ಚಿಂತನೆ ನಡೆಸಿದ್ದಾರೆ. ಈಗಾಗಲೇ ಅಧಿಕಾರಿಗಳೊಂದಿಗೆ ಸತತ ಸಭೆಗಳನ್ನು ನಡೆಸಿರುವ ಮುಖ್ಯಮಂತ್ರಿಗಳು ಹೊಸ ಸರ್ಕಾರದ ಬಜೆಟ್‌ನ ನೀಲ ನಕ್ಷೆ ಸಿದ್ಧಪಡಿಸಿಕೊಂಡಿದ್ದಾರೆ. ಸಂಪನ್ಮೂಲ ಕ್ರೋಢೀಕರಣದ ಉದ್ದೇಶಕ್ಕಾಗಿ ಮತ್ತು ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕಾಗಿ ಹೊಸ ಬಜೆಟ್ ಮಂಡಿಸುತ್ತಿದ್ದಾರೆ. ರಾಜ್ಯ ವಿಧಾನಸಭೆ ಮೇ 10ರಂದು ಚುನಾವಣೆ ನಡೆದು 13ರಂದು ಫಲಿತಾಂಶ ಪ್ರಕಟಗೊಂಡ ನಂತರ ಕಾಂಗ್ರೆಸ್ ಸ್ಪಷ್ಟ ಬಹುತದೊಂದಿಗೆ ಅಧಿಕಾರ ಚುಕ್ಕಾಣಿ ಹಿಡಿದು ಸಿದ್ದರಾಮಯ್ಯ ನೇತೃತ್ವದಲ್ಲಿ ಸರ್ಕಾರ ರಚನೆಯಾಗಿದೆ. ಕಳೆದ ಫೆಬ್ರವರಿಯಲ್ಲಿ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಯೋಜನಾ ಗಾತ್ರವನ್ನು ಹೆಚ್ಚಿಸಿ 70 ಸಾವಿರ ಕೋಟಿ ರೂ. ಸಾಲ ಮಾಡಲು ಅನುಮತಿ ಪಡೆದುಕೊಂಡಿದ್ದರು. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಬಿಜೆಪಿ ಅಧಿಕಾರ ಕಳೆದುಕೊಂಡು ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ರಾಜ್ಯದ ಜನತೆಗೆ ಮುಂದೆ ನಾವು ಏನು ಮಾಡುತ್ತೇವೆ ಎಂದು ಹೇಳಲು ಸಿದ್ದರಾಮಯ್ಯ ಮತ್ತೆ ಬಜೆಟ್ ಮಂಡನೆ ಮಾಡುತ್ತಿದ್ದಾರೆ.

ಭೂಸ್ವಾಧೀನ ಪ್ರಕ್ರಿಯೆ ಪೂರ್ಣ

ನಡೆಯುತ್ತಿದೆ. ಪರಿ ಹಾರದ ಹಣ ಬಿಡುಗಡೆ ಸಂಬಂಧ ತಾವು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ, ಕಡತ ವಿಲೇ ಮಾಡಿಸಿದ್ದೇನೆ. ಒಂದು ಅಥವಾ ಒಂದೂವರೆ ತಿಂಗಳಲ್ಲಿ ಪ್ರಕ್ರಿಯೆ ಮುಗಿಸಿದ ಬಳಿಕ ಕಾಮಗಾರಿ ಆರಂಭಿಸಲು ಟೆಂಡರ್ ಪ್ರಕ್ರಿಯೆಗೆ ಸಿದ್ಧತೆ ಮಾಡಲಾಗುವುದು ಎಂದು ಅವರು ತಿಳಿಸಿದರು. ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಮೈಸೂರು–ಕುಶಾಲನಗರ ನಡುವೆ ನಾಲ್ಕು ಪಥದ ಹೆದ್ದಾರಿ ನಿರ್ಮಾಣಕ್ಕೆ ವಿನ್ಯಾಸ ಅಂತಿಮಗೊಳಿಸಿದ್ದು, ಬೈಪಾಸ್‌ಗಳು, ಸೇತುವೆಗಳು, ಮಾರ್ಗ ಮಧ್ಯೆ ಇರುವ ವಿದ್ಯುತ್ ಮಾರ್ಗ ಸ್ಥಳಾಂತರ ಇನ್ನಿತರ ಕೆಲಸಗಳಿಗೂ ಸಂಬಂಧಪಟ್ಟ ಸೆಸ್ಕ್, ಅರಣ್ಯ ಇಲಾಖೆ, ರೆವಿನ್ಯೂ ಇಲಾಖೆ, ತೋಟಗಾರಿಕೆ ಇಲಾಖೆಗಳಿಗೆ ಅನುದಾನ ಬಿಡುಗಡೆ ಮಾಡಿದೆ. ಭೂಮಿ ಹಸ್ತಾಂತರಿಸಿದ ಬಳಿಕ ಪ್ರಾಧಿಕಾರದಿಂದ ಕಾಮಗಾರಿ ಆರಂಭಿಸಲಾಗುವುದು ಎಂದು ಪ್ರತಾಪ್‌ಸಿಂಹ ತಿಳಿಸಿದರು. ಯೋಜನೆ ಅನುಷ್ಠಾನಗೊಂಡಲ್ಲಿ ಮಡಿಕೇರಿ ಕಡೆಯಿಂದ ಬೆಂಗಳೂರಿಗೆ ಹೋಗುವ ಎಲ್ಲಾ ಮಾದರಿಯ ವಾಹನಗಳು ಮೈಸೂರು ನಗರ ಪ್ರವೇಶಿಸುವ ಅಗತ್ಯವಿರುವುದಿಲ್ಲ. ಯಾವುದೇ ಅಡೆ–ತಡೆಯಿಲ್ಲದೆ ಅತೀ ಕಡಿಮೆ ಅವಧಿಯಲ್ಲಿ 4 ಪಥದ ಹೆದ್ದಾರಿ ಮೂಲಕ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇ ತಲುಪಿ ಮುಂದೆ ಸಾಗಬಹುದು ಎಂದು ಸಂಸದರು ನುಡಿದರು.

ಸಾಂಸ್ಕೃತಿಕ ನಗರಿಯ ಹಲವು ಕಡೆ ವಿಶ್ವ ಪರಿಸರ ದಿನಾಚರಣೆ



ಎಸ್‌ಎಂಟಿ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಗಿಡ ನೆಡುವ ಮೂಲಕ ವಿಶ್ವ ಪರಿಸರ ದಿನಕ್ಕೆ ಚಾಲನೆ ನೀಡಿದರು.



ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿ ಆವರಣದಲ್ಲಿ ನಡೆದ ವಿಶ್ವಪರಿಸರ ದಿನಾಚರಣೆ



ಆರ್‌ಎಲ್‌ಹೆಚ್‌ಪಿ ವತಿಯಿಂದ 'ವಿಶ್ವ ಪರಿಸರ ದಿನಾಚರಣೆ'

ಮೈಸೂರು, ಜೂ.5(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಿನ ವಿವಿಧೆಡೆ ಸೋಮವಾರ ವಿಶ್ವ ಪರಿಸರ ದಿನದ ಹಿನ್ನೆಲೆಯಲ್ಲಿ ವನ ಮಹೋತ್ಸವ, ಪರಿಸರ ಸಂರಕ್ಷಣೆ ಉಪನ್ಯಾಸ ಆಯೋಜಿಸಿ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂದು ಜಾಗೃತಿ ಮೂಡಿಸಲಾಯಿತು.

ಹೆರಿಗೆ ಆಸ್ಪತ್ರೆ ಆವರಣದಲ್ಲಿ ವನಮಹೋತ್ಸವ: ವಿಶ್ವ ಪರಿಸರ ದಿನದ ಅಂಗವಾಗಿ ಜೆಎಲ್‌ಬಿ ರಸ್ತೆಯಲ್ಲಿರುವ ಎಸ್‌ಎಂಟಿ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ಅರಣ್ಯ ಇಲಾಖೆ ಗಿಡ ನೆಡುವ ಕಾರ್ಯಕ್ರಮ ಆಯೋಜಿಸಿತ್ತು. ಶಾಸಕ ಟಿ.ಎಸ್.ಶ್ರೀವತ್ಸ ಗಿಡ ನೆಡುವ ಮೂಲಕ ವಿಶ್ವ ಪರಿಸರ ದಿನಕ್ಕೆ ಚಾಲನೆ ನೀಡಿದರು.

ಈ ವೇಳೆ ಶಾಸಕ ಶ್ರೀವತ್ಸ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಹಲವು ಕಾರಣದಿಂದ ಪರಿಸರ ನಾಶವಾಗುತ್ತಿದೆ. ಇದರಿಂದ ಪರಿಸರ ಸಮತೋಲನ ತಪ್ಪುತ್ತಿದೆ. ಈ ಹಿನ್ನೆಲೆಯಲ್ಲಿ ವಿಶ್ವ ಪರಿಸರ ದಿನದಂದು ಎಲ್ಲರೂ ಗಿಡ ನೆಟ್ಟು ಪೋಷಿಸುವ ಹಾಗೂ ಇರುವ ಮರಗಳನ್ನು ಸಂರಕ್ಷಿಸುವ ಜವಾಬ್ದಾರಿ ನಿಭಾಯಿಸುವ ಪ್ರತಿಜ್ಞೆ ಮಾಡಿ, ಪರಿಸರ ಸಂರಕ್ಷಣೆಗೆ ಕಾರ್ಯೋನ್ಮುಖರಾಗಬೇಕು ಎಂದು ಮನವಿ ಮಾಡಿದರು.

ಈ ವೇಳೆ ಆಸ್ಪತ್ರೆ ಆವರಣದಲ್ಲಿ ಪರಿಸರಕ್ಕೆ ಪೂರಕವಾದ ವಿವಿಧ ತಳಿಯ ಗಿಡಗಳನ್ನು ನೆಟ್ಟು ನೀರುಣಿಸಲಾಯಿತು. ಈ ಸಂದರ್ಭದಲ್ಲಿ ಡಿಸಿಎಫ್ ಡಾ.ಕೆ.ಎನ್. ಬಸವರಾಜು, ಎಸಿಎಫ್ ಲಕ್ಷ್ಮೀಕಾಂತ್, ಆರ್‌ಎಫ್‌ಓ ಧನ್ಯಶ್ರೀ ಹಾಗೂ ಎಸ್‌ಎಂಟಿ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆಯ ವೈದ್ಯಾಧಿಕಾರಿಗಳು ಉಪಸ್ಥಿತರಿದ್ದರು.

ಪೊಲೀಸ್ ಅಕಾಡೆಮಿಯಲ್ಲಿ ಗಿಡ ನೆಟ್ಟ ಪ್ರಶಿಕ್ಷಣಾರ್ಥಿಗಳು: ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿ ಆವರಣದಲ್ಲಿ ವಿಶ್ವಪರಿಸರ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು

ಕೆಪಿಎನಲ್ಲಿ ತರಬೇತಿ ಪಡೆಯುತ್ತಿರುವ ಪ್ರಶಿಕ್ಷಣಾರ್ಥಿಗಳೊಂದಿಗೆ ವಿವಿಧ ಕಾಲೇಜು ವಿದ್ಯಾರ್ಥಿಗಳು ಸಾಥ್ ನೀಡಿದರು. ಶಾಲಾ ವಿದ್ಯಾರ್ಥಿ ಗಳು ಪ್ರಸ್ತುತ ಪಡಿಸಿದ ಪರಿಸರ ಗೀತೆ ಯೊಂದಿಗೆ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕರ್ನಾಟಕ ಪೊಲೀಸ್ ಅಕಾಡೆಮಿಯ ಸಹಾಯಕ ನಿರ್ದೇಶಕ ಎನ್.ನಿರಂಜನ್ ರಾಜೇ ಅರಸ್ ಮಾತನಾಡಿ, ವಿಶ್ವಪರಿಸರ ದಿನದ ಹಿನ್ನೆಲೆಯಲ್ಲಿ ಕೆಪಿಎ ಆವರಣದಲ್ಲಿ ಹೊಂಗೆ, ಬೇವು, ಮಾವು ಸೇರಿದಂತೆ ವಿವಿಧ ಬಗೆಯ ಒಂದು ಸಾವಿರ ಸಸಿಗಳನ್ನು ನೆಡಲಾಗಿದೆ. ಪರಿಸರ ಸಂರಕ್ಷಣೆಯ ಮಹತ್ವ ಸಾರುವ ನಿಟ್ಟಿನಲ್ಲಿ ಎಲ್ಲೆಡೆ ವಿವಿಧ ಕಾರ್ಯಕ್ರಮ ನಡೆಸಲಾಗುತ್ತಿದೆ. ಕೆಪಿಎ ವತಿಯಿಂದ ಪ್ರತಿವರ್ಷವೂ ವಿವಿಧ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ನಡೆಸಲಾಗುತ್ತಿದೆ. ಪರಿಸರ ಸಂರಕ್ಷಣೆಯ ಮಹತ್ವವನ್ನು ಎಲ್ಲರೂ ಅರಿಯಬೇಕು ಎಂದು ಮನವಿ ಮಾಡಿದರು.

ಆರ್‌ಎಲ್‌ಹೆಚ್‌ಪಿ ವತಿಯಿಂದ ಜಾಥಾ: ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ (ಆರ್‌ಎಲ್‌ಹೆಚ್‌ಪಿ) ವತಿಯಿಂದ 'ವಿಶ್ವ ಪರಿಸರ ದಿನಾಚರಣೆ' ಅಂಗವಾಗಿ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗದಿಂದ ಜಾಗೃತಿ ಜಾಥಾ ಆಯೋಜಿಸಲಾಗಿತ್ತು.

ಜಾಗೃತಿ ಜಾಥಾವನ್ನು ಇಸ್ರೋದ ನಿವೃತ್ತ ವಿಜ್ಞಾನಿ ಜಗನ್ನಾಥ್ ಉದ್ಘಾಟಿಸಿದರು.


ನಂತರ ಮಾತನಾಡಿದ ಅವರು, ಜನರ ಬದಲಾದ ಜೀವನ ಶೈಲಿಯಲ್ಲಿ ಅಗತ್ಯಕ್ಕಿಂತ ಹೆಚ್ಚಾಗಿ ಪ್ಲಾಸ್ಟಿಕ್ ಬಳಕೆಯಾಗುತ್ತಿದೆ. ಪರಿಸರಕ್ಕೆ ಹಾನಿಯಾಗದ ಹಾಗೂ ಜನರ ಆರೋಗ್ಯದ ಮೇಲೆ ಪರಿಣಾಮ ಬೀರದಂತೆ ಎಚ್ಚರ ವಹಿಸಬೇಕಾಗಿದೆ. ಪ್ಲಾಸ್ಟಿಕ್ ದುರ್ಬಳಕೆ ತಪ್ಪಿಸಬೇಕು. ಜಾಗತಿಕ ತಾಪಮಾನ ಹೆಚ್ಚುತ್ತಿದ್ದು, ಹವಾಮಾನದಲ್ಲಿ ವೈಪರೀತ್ಯಗಳಾಗುತ್ತಿವೆ. ನೈಸರ್ಗಿಕ ವಿಪತ್ತುಗಳು ಸಂಭವಿಸುವ ಸಾಧ್ಯತೆಗಳು ಹೆಚ್ಚುತ್ತಿವೆ. ಆದ್ದರಿಂದ ಪರಿಸರ ಸಂರಕ್ಷಣೆ ಮಾಡುವಲ್ಲಿ ಬದಲಾವಣೆ ಎಂಬುದು ನಮ್ಮಿಂದಲೇ ಶುರುವಾಗಬೇಕು. ಬಯೋಗ್ಯಾಸ್, ಮನೆಯಿಂದಲೇ ಕಸ ಬೇರ್ಪಡಿಸುವಿಕೆಗೆ ಒತ್ತು ನೀಡಬೇಕು ಎಂದರು.

ಅಪರ ಜಿಲ್ಲಾಧಿಕಾರಿಗಳಾದ ಕವಿತಾ ರಾಜಾರಾಮ್ ಮಾತನಾಡಿ, ಯುವ ಜನರಲ್ಲಿ ಪರಿಸರ ಕಾಳಜಿ ಇರುವುದು ಬಹಳ ಸಂತೋಷದ ವಿಷಯ. ಪರಿಸರ ಸಂರಕ್ಷಣೆಯಲ್ಲಿ ಮಕ್ಕಳು ಹಾಗೂ ಯುವಕರು ಮತ್ತಷ್ಟು ತೊಡಗಿಸಿಕೊಳ್ಳಬೇಕು. ಸಮುದಾಯದ ಜನರಲ್ಲಿ ಜಾಗೃತಿ ಮೂಡಿಸುವುದು. ಪ್ರತಿಯೊಬ್ಬ ಯುವಕರು ತಮಗೆ ಅವಕಾಶವಿರುವೆಡೆ ಗಿಡಗಳನ್ನು ನೆಟ್ಟು ಪೋಷಿಸಬೇಕು. ಪರಿಸರ ಸಂರಕ್ಷಣೆಯ ನಿಮ್ಮ ಚಟುವಟಿಕೆಗಳಿಗೆ ಜಿಲ್ಲಾಡಳಿತದ ಸಹಕಾರವಿರುತ್ತದೆ ಎಂದು ತಿಳಿಸಿದರು.

ಆರ್‌ಎಲ್‌ಹೆಚ್‌ಪಿ ನಿರ್ದೇಶಕಿ ಸರಸ್ವತಿ ಅವರು ಮಾತನಾಡಿ, ಕಳೆದ 38 ವರ್ಷಗಳಿಂದ ಸಂಸ್ಥೆಯು ಕೊಳಚೆ ಪ್ರದೇಶಗಳು ಹಾಗೂ ಹಳ್ಳಿಗಳಲ್ಲಿ ಮಕ್ಕಳು ಹಾಗೂ ಮಹಿಳೆಯರ ಸುಸ್ಥಿರ ಅಭಿವೃದ್ಧಿಗಾಗಿ ಮತ್ತು ಪರಿಸರ ಸಂರಕ್ಷಣೆಯ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇಂದು ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಜಿಲ್ಲಾಧಿಕಾರಿಗಳ ಕಚೇರಿ ಅವರಿಗೆ ಜಾಗೃತಿ ಜಾಥಾವನ್ನು ಯುವಕರ ತಂಡದೊಂದಿಗೆ ಹಮ್ಮಿಕೊಂಡಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಆರ್‌ಎಲ್‌ಹೆಚ್‌ಪಿ ಕಾರ್ಯದರ್ಶಿಗಳಾದ ಪ್ರೊ.ವಿ.ಕೆ. ಜೋಶ್, ದೇವರಾಜ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಜೈಕೀರ್ತಿ, ರಾಜ್ಯಮಟ್ಟದ ಯುವ ಸಂಘಟನೆಯ ಪ್ರತಿನಿಧಿ ಶಾಲಿನಿ ಹಾಗೂ ಯುವ ಜನರು ಭಾಗವಹಿಸಿದ್ದರು.

ಜನ್ಮದಿನ ಪ್ರಯುಕ್ತ ಮಾಜಿ ಎಂಎಲ್‌ಸಿ ಡಿ.ಮಾದೇಗೌಡರಿಗೆ ಅಭಿನಂದನೆ



ಮೈಸೂರು,ಜೂ.5(ಪಿಎಂ)–'ಆಶಾ ಮಂದಿರ' ವಸತಿ ಯೋಜನೆ ರೂವಾರಿ, ಮನೆ ಮನೆ ಮಾದೇಗೌಡ ಎಂದೇ ಖ್ಯಾತನಾಮರಾದ ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ಅವರನ್ನು ಯುವ ಗ್ರಾಮ ಅಭ್ಯುದಯ ಸಮಿತಿ ವತಿಯಿಂದ ಸೋಮವಾರ ಸನ್ಮಾನಿಸಲಾಯಿತು.

ಮೈಸೂರಿನ ಕುಂಬಾರಕೊಪ್ಪಲಿನ ಅವರ ನಿವಾಸದಲ್ಲಿ ಜನ್ಮದಿನದ ಪ್ರಯುಕ್ತ ಆತ್ಮೀಯವಾಗಿ ಸನ್ಮಾನಿಸಿ ಶುಭಾಶಯ ತಿಳಿಸಲಾಯಿತು. ಇದೇ ವೇಳೆ ಮಾತನಾಡಿದ ಮುಖಂಡ ಪಟೇಲ್ ನಾಗರಾಜ್, ಮಾದೇಗೌಡರಿಗೆ ಇನ್ನೂ ಹೆಚ್ಚಿನ ಆಯಸ್ಸು, ಆರೋಗ್ಯ ಲಭಿಸಲಿ. ಸಿಐಟಿಬಿ ಅಧ್ಯಕ್ಷರಾಗಿ ಕೇವಲ 18 ತಿಂಗಳಲ್ಲಿ 9 ಪ್ರತಿಷ್ಠಿತ ಬಡಾವಣೆಗಳ ನಿರ್ಮಿಸಿ, 30 ಸಾವಿರ ನಿವೇಶನಗಳನ್ನು ಹಂಚಿಕೆ ಮಾಡಿದವರು ಡಿ.ಮಾದೇಗೌಡರು. ಇದು ಅವರ ಮಹತ್ತರ ಸಾಧನೆ ಎಂದು ಹೇಳಿದರು.

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮದಿನದ ಮಾರನೇ ದಿನವಾದ ಜೂನ್ 5ರಂದು ಇವರ ಜನ್ಮದಿನ ಇರುವುದು ದೈವ ಸಂಕಲ್ಪವೇ ಇರಬೇಕು. 2022ರಲ್ಲಿ ಜೀವಮಾನ ಸಮಾಜ ಸೇವೆಗಾಗಿ ಪ್ರತಿಷ್ಠಿತ 'ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ' ಹಾಗೂ 'ಕರ್ನಾಟಕ ರಾಜ್ಯ ಪ್ರಶಸ್ತಿ' ಪುರಸ್ಕಾರ ಮಾದೇಗೌಡರಿಗೆ ಸಂದಿದೆ. ನಿರ್ಮಲ ನಗರ ಯೋಜನೆಯ ಪ್ರಾಮಾಣಿಕ ಅನುಷ್ಠಾನಕ್ಕಾಗಿ ಇವರಿಗೆ ರಾಷ್ಟ್ರಪ್ರಶಸ್ತಿ ಅರಸಿ ಬಂದಿದ್ದು, ಇವರು ನಾಡಿನ ಹೆಮ್ಮೆ ಎಂದು ಅಭಿಮಾನ ವ್ಯಕ್ತಪಡಿಸಿದರು.

ಯಾವುದೇ ಅಧಿಕಾರವನ್ನು ಇವರು ಹುಡುಕಿಕೊಂಡು ಹೋಗಲಿಲ್ಲ. ಮುಡಾ ಅಧ್ಯಕ್ಷರು, ವಿಧಾನ ಪರಿಷತ್ ಸದಸ್ಯರು, ಭಾರತೀಯ ಸೇವಾದಳದ ಅಧ್ಯಕ್ಷರಾಗಿ ಯಾವುದೇ ಸ್ವಜನ ಪಕ್ಷಪಾತ, ಭ್ರಷ್ಟಾಚಾರದ ಸೋಂಕಿಲ್ಲದೆ, ಜನಸೇವೆ ಮಾಡಿದ ಇವರು ಇಂದಿನ ಎಲ್ಲಾ ಜನಪ್ರತಿನಿಧಿಗಳಿಗೆ ಮಾದರಿ ಎಂದರು.

2012–13ರಲ್ಲಿ ಅಗಾಧವಾದ ಸಂಘಟನೆ ಹಾಗೂ ಹೋರಾಟದ ಮೂಲಕ ಮಲೆ ಮಹದೇಶ್ವರ ಬೆಟ್ಟ ಪ್ರಾಧಿಕಾರ ರಚನೆ ಮಾಡಲು ಟೊಂಕಕಟ್ಟಿ ಯಶಸ್ವಿಯಾದರು. ಇಂದು ಮಹದೇಶ್ವರ ಬೆಟ್ಟ ಅಭೂತಪೂರ್ವ ಅಭಿವೃದ್ಧಿ ಕಂಡು ಲಕ್ಷಾಂತರ ಭಕ್ತರು ನೆಮ್ಮದಿಯಿಂದ ಮಾದಪ್ಪನ ದರ್ಶನ ಮಾಡುವಂತಾಗಿದೆ ಎಂದು ಹೇಳಿದರು.

ಮಲೆ ಮಹದೇಶ್ವರ ಬೆಟ್ಟದ ಮಾದರಿ ಕುಂಬಾರಕೊಪ್ಪಲಿನ ಮಹದೇಶ್ವರ ದೇವಾಲಯವನ್ನು ಪುಣ್ಯಕ್ಷೇತ್ರವಾಗಿ ಅಭಿವೃದ್ಧಿಪಡಿಸಲು ಮಾದೇಗೌಡರು ಅವಿರತ ಶ್ರಮಿಸುತ್ತಿದ್ದಾರೆ. ಅದರ ಸಂಕಲ್ಪ ಸಿದ್ಧಿಗಾಗಿ ಗ್ರಾಮದ ಸಮಾನಮನಸ್ಕರು ಹಾಗೂ ಮುಖಂಡರಿಗೆ ಪ್ರೇರಣೆ ನೀಡಿದರು. ಇದರಿಂದ ಎರಡು ಪ್ರಮುಖ ಆದಾಯ ಮೂಲಗಳಾದ ಮಹದೇಶ್ವರ ಸಮುದಾಯ ಭವನ, ಬಸವ ಸಮುದಾಯ ಭವನ ನಿರ್ಮಿಸಲು ಸಾಧ್ಯವಾಯಿತು. ಆ ಮೂಲಕ ಊರಿಗೆ ಹತ್ತಾರು ಲಕ್ಷ ಆದಾಯ ಬರಲು ಕಾರಣಕರ್ತರಾದರು ಎಂದು ತಿಳಿಸಿದರು.

ಚಾಮರಾಜ ವಿಧಾನಸಭಾ ಕ್ಷೇತ್ರ ಬಿಜೆಪಿ ಉಪಾಧ್ಯಕ್ಷ ಕುಮಾರ್‌ಗೌಡ, ಮುಖಂಡರಾದ ರಾಜು, ನವೀನ್, ಚೆಲುವೇಗೌಡ, ಮಂಜುಗೌಡ, ಗಾವಳ್ಳಿ ದಿನೇಶ್, ಆದರ್ಶ, ಗಣೇಶ್, ಪಟ್ಟಾಭಿ, ಸಿದ್ದೇಗೌಡ, ಭರತ್, ಪ್ರವೀಣ್ ಮತ್ತಿತರು ಹಾಜರಿದ್ದರು.

ಅರ್ಜಿ ಆಹ್ವಾನ

ಮೈಸೂರು,ಜೂ.5(ಪಿಎಂ)– ಮೈಸೂರು ಜಿಲ್ಲಾ ಭಾವಸಾರ ಕ್ಷತ್ರಿಯ ಪದವೀಧರರ ಸಂಘದ 41ನೇ ವಾರ್ಷಿಕೋತ್ಸವ, ನವ ಪದವೀಧರರು, ಡಿಪ್ಲೊಮಾ ಪಡೆದವರಿಗೆ ಸನ್ಮಾನ ಹಾಗೂ ವಿದ್ಯಾರ್ಥಿವೇತನ ವಿತರಣಾ ಸಮಾರಂಭವು ಜು.7ರಂದು ನಡೆಯಲಿದ್ದು, ಸನ್ಮಾನ ಮತ್ತು ವಿದ್ಯಾರ್ಥಿವೇತನಕ್ಕೆ ಸಮುದಾಯದ ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಭಾವಸಾರ ಕ್ಷತ್ರಿಯ ನವ ಪದವೀಧರು (2020–21), 2021–22ನೇ ಸಾಲಿನಲ್ಲಿ ಪದವಿ ಮತ್ತು 2022–23 ರಲ್ಲಿ ಡಿಪ್ಲೊಮಾ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರು ಸನ್ಮಾನಕ್ಕೆ ಅರ್ಜಿ ಸಲ್ಲಿಸಬಹುದು. ಈ ಎರಡು ಜಿಲ್ಲೆಗಳಲ್ಲಿ ವೃತ್ತಿಪರ ಐಟಿಐ, ಡಿಪ್ಲೊಮಾ, ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ಸಮುದಾಯದ ಅರ್ಹರು ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಬಹುದು.

ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಸಮುದಾಯದ ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಬಹುದು. ವಿವರಗಳಿಗೆ ಮೊಸಂ. 98807 18980 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರಲ್ಲಿ ವಿದ್ಯುತ್ ದರ ಹೆಚ್ಚಳ ವಿರೋಧಿಸಿ ಬಿಜೆಪಿ ಪ್ರತಿಭಟನೆ



ಮೈಸೂರು,ಜೂ.5(ಪಿಎಂ)– ಪ್ರತಿ ಯೂನಿಟ್‌ಗೆ 70 ಪೈಸೆ ವಿದ್ಯುತ್ ದರ ಹೆಚ್ಚಳ ಮಾಡಬಾರದು ಎಂದು ಒತ್ತಾಯಿಸಿ ಹಾಗೂ ರಾಜ್ಯ ಕಾಂಗ್ರೆಸ್ ಸರ್ಕಾರ ಜನ ವಿರೋಧಿ ನೀತಿಗಳನ್ನು ಅನುಸರಿಸುತ್ತಿದೆ ಎಂದು ಆರೋಪಿಸಿ ಬಿಜೆಪಿ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಲ್ಲಾ ಪಂಚಾಯಿತಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ವಿದ್ಯುತ್ ದರ ಹೆಚ್ಚಳ ಮಾಡಬಾರದು, ಹಾಲಿನ ಪ್ರೋತ್ಸಾಹ ಧನ ಕಡಿತ ಮಾಡಬಾರದು ಹಾಗೂ ಗೋಹತ್ಯೆ ನಿಷೇಧ ಕಾಯ್ದೆ ರದ್ದುಗೊಳಿಸುವ ಪ್ರಸ್ತಾಪ ಮಾಡಬಾರದು ಎಂದು ಒತ್ತಾಯಿಸಿದರು.

ಬಿಜೆಪಿ ಮುಖಂಡ ಕವೀಶ್‌ಗೌಡ ಮಾತನಾಡಿ, ಕಾಂಗ್ರೆಸ್ ಸರ್ಕಾರ ಯಾವುದೇ ಷರತ್ತುಗಳನ್ನು ವಿಧಿಸದೇ ತನ್ನ ಚುನಾವಣಾ ಪೂರ್ವದ ಗ್ಯಾರಂಟಿ ಭರವಸೆಗಳನ್ನು ಈಡೇರಿಸಬೇಕು. ಎಲ್ಲರಿಗೂ 200 ಯೂನಿಟ್ ವಿದ್ಯುತ್ ಉಚಿತ ಎಂದು ಹೇಳುತ್ತಿದ್ದ ಕಾಂಗ್ರೆಸ್, ಅಧಿಕಾರಕ್ಕೆ ಬರುತ್ತಿದ್ದಂತೆ 12 ತಿಂಗಳ ಸರಾಸರಿ ಲೆಕ್ಕ ಹಾಕುತ್ತೇವೆ ಎನ್ನುತ್ತಿದೆ. ಜೊತೆಗೆ ಗೋ ಹತ್ಯೆ ನಿಷೇಧ ಕಾಯ್ದೆ ರದ್ದುಗೊಳಿಸುವ ಚರ್ಚೆ ಮುನ್ನೆಲೆಗೆ ತಂದಿದೆ. ಯಾವುದೇ ಕಾರಣಕ್ಕೂ ಈ ಕಾಯ್ದೆ ರದ್ದುಗೊಳಿಸಬಾರದು ಎಂದು ಆಗ್ರಹಿಸಿದರು.

> ಕಾಂಗ್ರೆಸ್ಸಿಗರು ಚುನಾವಣೆ ಸಂದರ್ಭದಲ್ಲಿ ಬಜರಂಗದಳ ನಿಷೇಧಿಸುವ ಪ್ರಸ್ತಾಪ ಮಾಡಿದ್ದರು. ಬಹುಸಂಖ್ಯಾತ ಹಿಂದೂಗಳ ವಿರುದ್ಧ ನಡೆಯನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಹೊಂದಿದೆ. 200 ಯೂನಿಟ್ ಉಚಿತ ಕೊಡುವುದಾಗಿ ಹೇಳಿದ್ದವರು, ಈಗ ಬಳಕೆಯ ಸರಾಸರಿ ಆಧರಿಸಿ ಅದಕ್ಕೆ ಅನುಗುಣವಾಗಿ ಶೇ.10ರಷ್ಟು ಉಚಿತ ನೀಡುವುದಾಗಿ ಹೇಳಿದ್ದಾರೆ. ಅಂದರೆ ಇವರು ಹೇಳುವುದೇ ಒಂದು, ಮಾಡುವುದು ಮತ್ತೊಂದು. ಕಾಂಗ್ರೆಸ್ ಸರ್ಕಾರದ ಇಂತಹ ದ್ವಂದ್ವ ನಡೆ ಖಂಡಿಸಿ ರಾಜ್ಯಾದ್ಯಂತ ಎಲ್ಲಾ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಬಿಜೆಪಿ ಪ್ರತಿಭಟನೆ ನಡೆಸಲಾಗುತ್ತಿದೆ.
>
> – **ಟಿ.ಎಸ್.ಶ್ರೀವತ್ಸ,** ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಶಾಸಕ

ಪಕ್ಷದ ಮುಖಂಡರೂ ಆದ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಮಾತನಾಡಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು (ಕೆಇಆರ್‌ಸಿ) ಕಳೆದ 2 ವರ್ಷಗಳ ಹಿಂದೆಯೇ ವಿದ್ಯುತ್ ದರ ಹೆಚ್ಚಳ ಮಾಡಬೇಕೆಂದು ನಮ್ಮ ಸರ್ಕಾರದ ಅವಧಿಯಲ್ಲಿ ಪ್ರಸ್ತಾವನೆ ಸಲ್ಲಿಸಿತ್ತು ಆದರೆ ಜನಸಾಮಾನ್ಯರಿಗೆ ಹೊರೆಯಾಗುವುದು ಬೇಡವೆಂದು ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಸ್ತಾವನೆ ತಿರಸ್ಕರಿಸಿದ್ದರು ಎಂದು ಹೇಳಿದರು.

ಯಾರೂ ಕೊಡಲು ಸಾಧ್ಯವಿಲ್ಲದಂತಹ ಸುಳ್ಳು ಗ್ಯಾರಂಟಿಗಳನ್ನು ಚುನಾವಣಾ ಪೂರ್ವದಲ್ಲಿ ನೀಡಿ ಅಧಿಕಾರಕ್ಕೆ ಬಂದ 15 ದಿನಗಳಲ್ಲೇ ಕಾಂಗ್ರೆಸ್ ಸರ್ಕಾರದ ನೀತಿ–ನಡವಳಿಕೆ ರಾಜ್ಯದ ಜನತೆಯಲ್ಲಿ ಬೇಸರ ತರಿಸಿದೆ ನಿನಗೂ–ನನಗೂ ಎಲ್ಲರಿಗೂ 200 ಯೂನಿಟ್ ವಿದ್ಯುತ್ ಉಚಿತವೆಂದು ನಮ್ಮ ಊರಿನವರೇ ಆದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೇಳಿದ್ದರು. ಇದೀಗ ವರ್ಷದ ಸರಾಸರಿ ಬಳಕೆಯಲ್ಲಿ ಶೇ.10ರಷ್ಟು ಉಚಿತ ಎಂದು ಹೇಳಿದ್ದಾರೆ. ಇದು ಜನತೆಗೆ ಮಾಡಿದ ಮೋಸ ಎಂದು ದೂರಿದರು.

ಬೆಲೆ ಏರಿಕೆ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳ ವಿರುದ್ಧ ಬೊಬ್ಬೆ ಹೊಡೆಯುತ್ತಿದ್ದವರು ಅಧಿಕಾರಕ್ಕೆ ಬರುತ್ತಿದ್ದಂತೆ ವಿದ್ಯುತ್ ದರ ಹೆಚ್ಚಳಕ್ಕೆ ಮುಂದಾಗಿದ್ದಾರೆ. ಯಾವುದೇ ಕಾರಣಕ್ಕೂ ಯೂನಿಟ್‌ಗೆ 70 ಪೈಸೆ ಹೆಚ್ಚಳ ಮಾಡಬಾರದು. ಒಂದು ವೇಳೆ ಮಾಡಿದರೆ, ಕೇವಲ ಬಿಜೆಪಿ ಮಾತ್ರವಲ್ಲ, ಇಡೀ ರಾಜ್ಯದ ಜನತೆ ಕಾಂಗ್ರೆಸ್ ಸರ್ಕಾರದ ವಿರುದ್ಧ ತಿರುಗಿ ಬೀಳಲಿದೆ ಎಂದು ಎಚ್ಚರಿಸಿದರು.

ಮಾಜಿ ಶಾಸಕ ಎಲ್.ನಾಗೇಂದ್ರ, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಬಿಜೆಪಿ ಮುಖಂಡರಾದ ಮೈವಿ. ರವಿಶಂಕರ್, ಜೆಪಿ (ಜಯಪ್ರಕಾಶ್), ಬಿ.ಎಂ.ರಘು, ಗಿರಿಧರ್, ಜೋಗಿ ಮಂಜು, ಸೋಮಸುಂದರ್, ನಿಶಾಂತ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಗ್ಯಾರಂಟಿ ವಿಚಾರ ಡೈವರ್ಟ್ ಮಾಡಲು ಗೋಹತ್ಯೆ ನಿಷೇಧ ಕಾಯ್ದೆ ಮುನ್ನೆಲೆಗೆ

ಮೈಸೂರು,ಜೂ.5(ಪಿಎಂ)– ಗೋಹತ್ಯೆ ನಿಷೇಧ ಕಾಯ್ದೆ ಹಿಂಪಡೆಯುವ ವಿಚಾರ ಮುನ್ನೆಲೆಗೆ ತರುವ ಮೂಲಕ ಗ್ಯಾರಂಟಿ ಭರವಸೆಗಳನ್ನು ಜನತೆ ಮನಸ್ಸಿನಿಂದ ಡೈವರ್ಟ್ ಮಾಡಲು ಕಾಂಗ್ರೆಸ್ ಮುಂದಾಗಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಆರೋಪಿಸಿದರು.

ಪ್ರತಿಭಟನೆ ವೇಳೆ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದರು. ಗ್ಯಾರಂಟಿ ವಿಚಾರ ಡೈವರ್ಟ್ ಮಾಡಲು ಗೋಹತ್ಯೆ ನಿಷೇಧ ಕಾಯ್ದೆ ವಿಚಾರ ಮುನ್ನೆಲೆಗೆ ತರಲಾಗಿದೆ ಎಂದು ಚರ್ಚೆಯಾಗುತ್ತಿದೆ ಎಂಬ ಬಗ್ಗೆ ಪ್ರತಿಕ್ರಿಯಿಸಿದ ಶಾಸಕರು, ಹೌದು ಹಾಗೆಯೇ ಅನ್ನಿಸುತ್ತಿದೆ. ಗ್ಯಾರಂಟಿಗಳ ಬಗ್ಗೆ ಜನ ಪರಸ್ಪರ ಚರ್ಚೆ ಮಾಡುತ್ತಿದ್ದು, ಇದನ್ನು ತಪ್ಪಿಸಿ ಅವರ ಗಮನ ಬೇರೆಡೆ ಸೆಳೆಯಲು ಕಾಂಗ್ರೆಸ್ಸಿಗರು ಗೋಹತ್ಯೆ ನಿಷೇಧ ಕಾಯ್ದೆ ಹಿಂಪಡೆಯುವ ವಿಚಾರ ಮುನ್ನೆಲೆಗೆ ತಂದಿದ್ದಾರೆ ಎಂದು ದೂರಿದರು.

ಒಂದು ಸಮುದಾಯದ ಓಲೈಕೆ ಮಾಡುತ್ತಿರುವ ಕಾಂಗ್ರೆಸ್, ಆ ಸಮುದಾಯ ತಮಗೆ ಮತ ನೀಡಿದೆ ಎಂಬ ಕಾರಣಕ್ಕೆ ಅವರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಚಿಂತನೆ ನಡೆಸಿದೆ. ಆ ಮೂಲಕ ಬಹುಸಂಖ್ಯಾತ ಹಿಂದೂಗಳ ಭಾವನೆಗೆ ಧಕ್ಕೆ ತರಲು ಹೊರಟಿದೆ ಎಂದು ಆಪಾದಿಸಿದರು.

'ಎಮ್ಮೆ, ಕೋಣ ಕಡಿಯಬಹುದು. ಹೀಗಿರುವಾಗ ಏಕೆ ಹಸುವನ್ನು ಕಡಿಯಬಾರದು' ಎಂದು ಸಚಿವ ವೆಂಕಟೇಶ್ ಬಾಲಿಶ ಮತ್ತು ಬೇಜವಾಬ್ದಾರಿ ಹೇಳಿಕೆ ನೀಡಿದ್ದಾರೆ. ಆ ಹೇಳಿಕೆ ವಿರುದ್ಧ ಬಿಜೆಪಿ ರಾಜ್ಯಾದ್ಯಂತ ಪ್ರತಿಭಟನೆ ನಡೆಸುತ್ತಿದೆ. ಬಿಜೆಪಿ ಯಾವತ್ತೂ ಗೋ ಪರವಾದ ನಿಲುವು ಹೊಂದಿರುತ್ತದೆ. 'ಗೋಹತ್ಯೆ ನಿಷೇಧ ಕಾಯ್ದೆ'ಯನ್ನು ನಮ್ಮ ಸರ್ಕಾರದ ಅವಧಿಯಲ್ಲಿ ಜಾರಿಗೊಳಿಸಿದ್ದು, ಗೋ ಹತ್ಯೆ ಮಾಡಬಾರದು ಎಂಬ ನಿಲುವಿನಿಂದ ಬಿಜೆಪಿ ಎಂದೂ ಹಿಂದೆ ಸರಿಯುವುದಿಲ್ಲ ಎಂದು ಹೇಳಿದರು.

ಪರಿಸರಕ್ಕೆ ವಿಶಿಷ್ಟ ಸ್ಥಾನ ನೀಡಿದ್ದರೂ ಸಂರಕ್ಷಣೆಯಲ್ಲಿ ಹಿಂದುಳಿದಿದ್ದೇವೆ

ವನ ಮಹೋತ್ಸವದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ವಿಷಾದ

ಹುಣಸೂರು, ಜೂ.5– ದೇಶದಲ್ಲಿ ಪರಿಸರಕ್ಕೆ ವಿಶಿಷ್ಟ ಸ್ಥಾನಮಾನ ನೀಡಿದ್ದರೂ, ಸಂರಕ್ಷಣೆಯಲ್ಲಿ ಹಿಂದುಳಿದಿದ್ದೇವೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ವಿಷಾದ ವ್ಯಕ್ತಪಡಿಸಿದರು.

ವಿಶ್ವ ಪರಿಸರ ದಿನದ ಅಂಗವಾಗಿ ಹುಣಸೂರು ತಾಪಂ, ಅರಣ್ಯ, ತೋಟಗಾರಿಕೆ, ರೇಷ್ಮೆ, ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪರಿಶಿಷ್ಟ ಜಾತಿ, ಪಂಗಡಗಳ ಕಲ್ಯಾಣ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಬಿಳಿಕೆರೆ ಗ್ರಾಪಂ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಏರ್ಪಡಿಸಿದ್ದ ತಾಲೂಕು ಮಟ್ಟದ ವನ ಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಸ್ತುತ ಲಕ್ಷ್ಮಣತೀರ್ಥ ನದಿಗೆ ಹುಣಸೂರಿನ ಒಳಚರಂಡಿ ನೀರು ಸೇರುತ್ತಿದ್ದು, ಈ ಬಗ್ಗೆ ಕ್ರಮ ಕೈಗೊಂಡು ನದಿ ಸಂರಕ್ಷಣೆ ಮಾಡುವುದು ನಮ್ಮ ಜವಾಬ್ದಾರಿ. ಆದರೆ ಅದನ್ನು ಸ್ವಚ್ಛಗೊಳಿಸಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ನಮ್ಮ ಮನೆಯ ಮುಂದಿನ ಚರಂಡಿ ಸ್ವಚ್ಛತೆಗೂ ನಾವು ಗ್ರಾಪಂಗಳನ್ನೇ ಅವಲಂಬಿಸಿರುತ್ತೇವೆ. ಯಾವಾಗ ಸರ್ಕಾರದ ಜೊತೆಗೆ ಜನರ ಸಹಭಾಗಿತ್ವ ಇರುತ್ತದೆಯೋ ಅಲ್ಲಿ ನಿಜವಾಗಲೂ ಅಭಿವೃದ್ಧಿ ಸಾಧ್ಯ ಇಲ್ಲವಾದಲ್ಲಿ ಅಭಿವೃದ್ಧಿ ಮರೀಚಿಕೆ ಎಂದರು.

ಬಿಬಿಸಿ ಚಾನಲ್ ನೂರು ಪ್ರಭಾವಿಶಾಲಿ ಮಹಿಳೆಯರ ಪಟ್ಟಿಯಲ್ಲಿ ಸಾಲುಮರದ ತಿಮ್ಮಕ್ಕ ಅವರ ಹೆಸರನ್ನು ಪ್ರಕಟಿಸಿದ್ದು, ಇಡೀ ವಿಶ್ವವೇ ತಿಮ್ಮಕ್ಕ ಅವರನ್ನು ಗೌರವಿಸುತ್ತಿದೆ ಎಂದರು.



ಸಾಲು ಮರದ ತಿಮ್ಮಕ್ಕ ಪುತ್ರ ಉಮೇಶ್ ಮಾತನಾಡಿ, ಕಳೆದ 20 ವರ್ಷದ ಹಿಂದೆ ನಮ್ಮ ಪರಿಸರ ಬಹಳ ಶುದ್ಧವಾಗಿತ್ತು. ಆದರೆ ಪ್ರಸ್ತುತ ನಮ್ಮೂರಿನ ಸತ್ವ ನಾಶಗೊಂಡಿದ್ದು, ಪ್ರಸ್ತುತ ಪ್ರಕೃತಿ ಉಳಿಸುವ ನಿಟ್ಟಿನಲ್ಲಿ ಬಹುತೇಕ ರ್‍ಯಾಲಿಗಳು ಅಥವಾ ಜಾಗೃತಿ ಜಾಥಾ ಮಾಡುವ ಪರಿಸ್ಥಿತಿ ಎದುರಾಗಿದೆ ವಿಷಾದ ವ್ಯಕ್ತಪಡಿಸಿದರು.

ಸಂಶೋಧಕರು ಮಂಗಳ ಗ್ರಹಕ್ಕೆ ಹೋಗಲು ಖರ್ಚು ಮಾಡುವ ಬದಲು ಇರುವ ಭೂಮಿ ಉಳಿವಿಗಾಗಿ ಖರ್ಚು ಮಾಡಲು ಮುಂದಾಗಬೇಕು. ಹಾಗಾಗಿ ಪ್ಲಾಸ್ಟಿಕ್ ಬಳಕೆ ಹಾಗೂ ಕಳೆನಾಶಕ ಸಿಂಪಡಣೆ ತಡೆಯಬೇಕು ಎಂದರು.

ಮನುಷ್ಯನಿಗೆ ಹುಟ್ಟಿನಿಂದ ಸಾಯುವವರೆಗೂ ಉಚಿತವಾಗಿ ಗಾಳಿ, ನೀರು ಕೊಟ್ಟಿರುವ ಪ್ರಕೃತಿಗೆ ಕೈ ಮುಗಿದು ಪೂಜಿಸಬೇಕು ಎಂದ ಅವರು,

> ಪ್ರತಿ ಹಳ್ಳಿಗಳಲ್ಲೂ ವೃಕ್ಷಗಳನ್ನು ಬೆಳೆಸುವುದರಿಂದ ಉತ್ತಮ ಪರಿಸರ ನಿರ್ಮಾಣವಾಗಲಿದೆ. ಅಲ್ಲದೇ ಕೆರೆ, ಕಲ್ಯಾಣಿಗಳ ಅಭಿವೃದ್ಧಿ ಕೈಗೊಂಡು ಮುಂದಿನ ಪೀಳಿಗೆಗೆ ಕುಡಿಯುವ ನೀರು ದೊರಕಿಸಿಕೊಡಿ.
> – ಸಾಲುಮರದ ತಿಮ್ಮಕ್ಕ

ಬಡತನದಲ್ಲಿ ಹುಟ್ಟಿ, ಬೆಳೆದ ಸಾಲು ಮರದ ತಿಮ್ಮಕ್ಕ ಯಾವ ಧರ್ಮ, ಗ್ರಂಥ, ಪ್ರವಚನ ಓದಿಲ್ಲ. ಆದರೂ ಹುಟ್ಟಿದ್ದಕ್ಕೆ ಸಾರ್ಥಕ ಎನ್ನುವ ಹಾಗೇ ಅರ್ಧ ದಿನ ಕೂಲಿ ಕೆಲಸ ಮಾಡಿ, ಉಳಿದ ಅರ್ಧ ದಿನ ಗಿಡ ಮರಗಳನ್ನು ಮಕ್ಕಳಂತೆ ಬೆಳೆಸಿದ್ದಾರೆ. ಹಾಗಾಗಿ ಅವರನ್ನು ವೃಕ್ಷ ಮಾತೆ ಎಂದು ಕರೆಯಲಾಗುತ್ತಿದೆ ಎಂದು ತಿಮ್ಮಕ್ಕ ಅವರ ಸಾಧನೆ ಬಗ್ಗೆ ತಿಳಿಸಿದರು.

ಇದೇ ವೇಳೆ ಕಾರ್ಯಕ್ರಮದಲ್ಲಿ ಸಾಲು ಮರದ ತಿಮ್ಮಕ್ಕ ಗಿಡ ನೆಡುವ ಮೂಲಕ 50 ಸಾವಿರ ಗಿಡಗಳನ್ನು ನೆಟ್ಟು ಪೋಷಿಸುವ ಅಭಿಯಾನಕ್ಕೆ ಚಾಲನೆ ನೀಡಿದರು.

ಈ ವೇಳೆ ತಾಪಂ ಇಓ ಬಿ.ಕೆ.ಮನು, ಮಾಧ್ಯಮ ಸಂಯೋಜಕರಾದ ನಾಗರಾಜು, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ನೇತ್ರಾವತಿ, ಅರಣ್ಯ ಇಲಾಖೆ ಅಧಿಕಾರಿ ರುದ್ರೇಶ್, ಕೃಷಿ ಇಲಾಖೆ ಅಧಿಕಾರಿ ವೆಂಕಟೇಶ್, ಸಿಡಿಪಿಓ ರಶ್ಮಿ, ಗ್ರಾಪಂ ಅಧ್ಯಕ್ಷ ಶಿವಕುಮಾರ್, ಪಿಡಿಓ ಮಹದೇವಸ್ವಾಮಿ, ಶಾಲಾ ಮುಖ್ಯೋಪಾಧ್ಯಾಯರು, ಶಿಕ್ಷಕರು, ಶಾಲಾ ವಿದ್ಯಾರ್ಥಿಗಳು ಸೇರಿದಂತೆ ಪಂಚಾಯಿತಿ ಸಿಬ್ಬಂದಿಯವರು ಪಾಲ್ಗೊಂಡಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ದಿ ಕೇರಳ ಸ್ಟೋರಿ (ಹಿಂ): ಬೆ.10.25ಕ್ಕೆ, ಮ.1.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.50ಕ್ಕೆ.

ಸ್ಕ್ರೀನ್ 2 ಡೇರ್‌ಡೆವಿಲ್ ಮುಸ್ತಫಾ (ಕ): ಬೆ10.05ಕ್ಕೆ, ಸಂ.6.50ಕ್ಕೆ, ಗಾರ್ಡಿಯನ್ಸ್ ಆಫ್ ಗ್ಯಾಲಕ್ಸಿ ವಾಲ್ಯೂಂ 3 (3ಡಿ)(ಇಂ): ಮ.1.10ಕ್ಕೆ, ಜೆರ್ಸಿ ನಂಬರ್ 10 (ಕ): ಸಂ.4.05ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.10ಕ್ಕೆ.

ಸ್ಕ್ರೀನ್ 3 ಇವಿಲ್ ಡೆಡ್ ರೈಸ್ (ಇಂ): ಬೆ.11ಕ್ಕೆ, ಪಿಚ್ಚೈಕಾರನ್2 (ತ): ಮ.1.20ಕ್ಕೆ, ಸಂ.4.25ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.7.30ಕ್ಕೆ, ಚಾರ್ಲ್ಸ್ ಎಂಟರ್‌ಪ್ರೈಸಸ್ (ಮ): ಸಂ.9.55ಕ್ಕೆ.

ಸ್ಕ್ರೀನ್ 4 ಫಾಸ್ಟ್ X (3ಡಿ)(ಇಂ): ಬೆ.10.45ಕ್ಕೆ, ಮ.1.35ಕ್ಕೆ, ಸಂ.4.25ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1 ಫಾಸ್ಟ್ X (3ಡಿ)(ಇಂ): ಬೆ.10.30, ಮ.1.30ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ, ರಾ.10.30ಕ್ಕೆ.

ಸ್ಕ್ರೀನ್ 2 ದಿ ಕೇರಳ ಸ್ಟೋರಿ (ಹಿಂ): ಬೆ.10ಕ್ಕೆ, ಮ.12.55ಕ್ಕೆ, ಮ.3.50ಕ್ಕೆ, ಸಂ.6.45ಕ್ಕೆ, ರಾ.9.40ಕ್ಕೆ.

ಸ್ಕ್ರೀನ್ 3 ದಿ ಕೇರಳ ಸ್ಟೋರಿ (ಹಿಂ): ಬೆ.11ಕ್ಕೆ, ಮ.1.55ಕ್ಕೆ, ಸಂ.4.50ಕ್ಕೆ, ರಾ.10.30ಕ್ಕೆ, ಅನುರಾಗಂ (ಮ): ರಾ.7.45ಕ್ಕೆ.

ಸ್ಕ್ರೀನ್ 4 ಫಾಸ್ಟ್ X (3ಡಿ)(ಇಂ): ಬೆ.9.30ಕ್ಕೆ, ಪಿಚ್ಚೈಕಾರನ್ 2(ತ): ಮ.12.20ಕ್ಕೆ, ರಾ.10.05ಕ್ಕೆ, ಡೇರ್‌ಡೆವಿಲ್ ಮುಸ್ತಫಾ (ಕ): ಸಂ.6.50ಕ್ಕೆ.

PVR CINEMAS ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವೀರಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಸೈರನ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಟೈಗರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಡೇರ್ ಡೆವಿಲ್ ಮುಸ್ತಾಫಾ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೇರ್ ಡೆವಿಲ್ ಮುಸ್ತಾಫಾ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕಥರ್ ಬಾಷಾ ಇಂದ್ರ ಮುತ್ತುರಾಮಲಿಂಗಂ(ತ) 2ಶೋ, ಕೇರಳ ಸ್ಟೋರಿ(ಹಿಂ)2 ಶೋ	
ಸಂಗಂ	
ಝೂರ ಹತ್ಕ ಝೂರ ಬಚ್ಕೆ(ಹಿಂ)	4 ಪ್ರದರ್ಶನಗಳು
ಲಿಡೋ	
ಪಿಎಸ್–2 (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ಪಿಎಸ್–2 (ತ)	4 ಪ್ರದರ್ಶನಗಳು
ಪ್ರಭಾ	
ಸುಮನ್ (ಕ)	4 ಪ್ರದರ್ಶನಗಳು

ಎನ್‌ಕೆಎಫ್ ಪಬ್ಲಿಕ್ ಶಾಲೆಯಲ್ಲಿ ಪರಿಸರ ದಿನಾಚರಣೆ



ತಿ.ನರಸೀಪುರ ಜೂ.5– ಪ್ರಾಕೃತಿಕ ಸಂಪತ್ತಾಗಿರುವ ಅರಣ್ಯವನ್ನು ಮುಂದಿನ ತಲೆಮಾರಿಗೂ ಉಳಿಸಿ, ಬೆಳೆಸಬೇಕಾದ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ನಶಿಸಿ ಹೋಗುತ್ತಿರುವ ಅರಣ್ಯ ರಕ್ಷಣೆ ಮಾಡಲು ಶಾಲಾ ಮಟ್ಟದಲ್ಲಿಯೇ ಮಕ್ಕಳಿಗೆ ಪರಿಸರ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಎನ್‌ಕೆಎಫ್ ಫೌಂಡೇಶನ್ ಅಧ್ಯಕ್ಷ ಎನ್.ಕೆ.ಫರೀದ್ ಹೇಳಿದರು.

ಪಟ್ಟಣದ ಎನ್‌ಕೆಎಫ್ ಪಬ್ಲಿಕ್ ಶಾಲಾವರಣದಲ್ಲಿ ಸೋಮವಾರ ನಡೆದ ವಿಶ್ವ ಪರಿಸರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಪ್ರತಿಯೊಂದು ಜೀವಿ ಉಸಿರಾಡಲು ಮರಗಿಡಗಳ ಅಗತ್ಯವಿದೆ. ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಒಂದೊಂದು ಗಿಡ ನೆಟ್ಟು ಬೆಳೆಸಲು ಪ್ರಾರಂಭಿಸಿದರೆ, ಅವರೊಂದಿಗೆ ಆ ಸಸಿಯೂ ಕೂಡ ಬೆಳೆದು ನೆರಳು ಆಮ್ಲಜನಕ ನೀಡುವ ಹೆಮ್ಮರವಾಗಲಿದೆ. ಆದ್ದರಿಂದ ಪ್ರತಿಯೊಂದು ಮಗುವೂ ಕೂಡ ಒಂದೊಂದು ಗಿಡವನ್ನು ನೆಟ್ಟು ಬೆಳೆಸಲು ಇಂದಿನಿಂದಲೇ ಆರಂಭಿಸಬೇಕು. ಪರಿಸರ ಕಾಳಜಿ ಇರುವ ವಿದ್ಯಾರ್ಥಿಗಳಿಗೆ ಶಾಲೆಯಿಂದ ಬಹುಮಾನ ನೀಡುತ್ತೇವೆ ಎಂದರು.

ಈ ವೇಳೆ ಶಾಲೆ ಕಾರ್ಯದರ್ಶಿ ಜೋಹರಾ ಸುಲ್ತಾನ, ನಾಗರಿಕ ಸೇವಾ ಸಮಿತಿ ಅಧ್ಯಕ್ಷ ಹೆಚ್.ಆರೀಫ್, ರಾಜಣ್ಣ, ಮುಖ್ಯ ಶಿಕ್ಷಕಿ ಹೇಮಾ, ಸಹ ಶಿಕ್ಷಕರಾದ ಕೆ.ಅಶ್ವಿನಿ, ಬಿ.ಗೀತಾ, ಬಿ.ಅನಿತಾ, ಎನ್.ರಶ್ಮಿ, ಸಂಧ್ಯಾ, ಎಲ್.ಸೌಮ್ಯ, ರೇಖಾ, ಬಿ.ಶೈಲಾ, ಶಿಲ್ಪಶ್ರೀ, ನೂರ್ ಹಾಜಿರಾ ಬೇಗಂ, ಸ್ವರ್ಣಲತಾ, ರಿಸ್ಮೀಯಾ, ರಜೀಯಾ ಸುಲ್ತಾನ ಇನ್ನಿತರರಿದ್ದರು.

ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ: ಶಾಸಕ ದರ್ಶನ್

ನಂಜನಗೂಡು, ಜೂ.5– ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಹೀಗಾಗಿ ಮುಂದಿನ ಪೀಳಿಗೆಗೆ ಪರಿಸರ ಸಂರಕ್ಷಿಸಿ ಕೊಡುಗೆ ನೀಡಬೇಕಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತ, ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ನಗರಸಭೆ ಸಂಯುಕ್ತಾಶ್ರಯದಲ್ಲಿ ನಗರದ ಶ್ರೀಕಂಠೇಶ್ವರ ದೇವಾಲಯದ ಹದಿನಾರು ಕಾಲು ಮಂಟಪದ ಬಳಿ ಏರ್ಪಡಿಸಿದ್ದ ಸ್ವಚ್ಛತಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಉತ್ತಮ ಪರಿಸರ ನಮ್ಮ ಹಿರಿಯರು ನಮಗೆ ನೀಡಿದ ಬಳುವಳಿ. ನಮ್ಮ ಮುಂದಿನ ಪೀಳಿಗೆಯೂ ಉತ್ತಮ ಆರೋಗ್ಯ ಪಡೆಯಲು ನಾವು ಪರಿಸರ ಸಂರಕ್ಷಣೆಗೆ ಮುಂದಾಗಬೇಕು. ನಾವು ಅಭಿವೃದ್ಧಿ ಹೆಸರಿನಲ್ಲಿ ಮರ ಗಿಡಗಳನ್ನು ಕಡಿದು ಪರಿಸರ ನಾಶಕ್ಕೆ ಮುಂದಾಗುತ್ತಿದ್ದೇವೆ. ಅಲ್ಲದೇ ನಗರದ ತ್ಯಾಜ್ಯಯುಕ್ತ ನೀರು ನದಿ ಸೇರಿ ಮಲೀನಗೊಳ್ಳುತ್ತಿದೆ. ಮರ ಕಡಿಯುವುದಾದರೆ 2 ಗಿಡಗಳನ್ನು ನೆಟ್ಟು ಒಂದು ಮರ ಕಡಿಯುವಂತಾಗಬೇಕು. ಅಲ್ಲದೆ ಎಲ್ಲರೂ ಒಂದೊಂದು ಗಿಡಗಳನ್ನು ನೆಟ್ಟು ಪೋಷಣೆ ಮಾಡುವ ಮೂಲಕ ಸ್ವಚ್ಛತೆ ಕಾಪಾಡಿ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದರು.



ನಾನು ಕ್ಷೇತ್ರದ ಶಾಸಕನಾಗಿ ಪರಿಸರ ಸಂರಕ್ಷಣೆಗೆ ಹೆಚ್ಚು ಒತ್ತು ನೀಡುತ್ತೇನೆ. ಅಲ್ಲದೇ ನದಿಗೆ ಸೇರುತ್ತಿರುವ ಚರಂಡಿ ತ್ಯಾಜ್ಯಯುಕ್ತ ನೀರನ್ನು ಸಂಸ್ಕರಣ ಘಟಕಗಳನ್ನು ನಿರ್ಮಿಸುವ ಮೂಲಕ ಶುದ್ಧೀಕರಿಸಿ ನದಿ ಮಾಲಿನ್ಯ ತಪ್ಪಿಸಲು ಕ್ರಮ ವಹಿಸುತ್ತೇನೆ ಎಂದರು.

ಇದೇ ವೇಳೆ ಐಟಿಸಿ, ನೆಸ್ಲೆ, ಎಟಿ&ಎಸ್, ಕಾರ್ಲ್ಸ್‌ಬರ್ಗ್, ಏಷಿಯನ್ ಪೈಂಟ್ಸ್ ಕಾರ್ಖಾನೆ ಕಾರ್ಮಿಕರು, ನಗರಸಭೆ ಸಿಬ್ಬಂದಿ ಸ್ವಚ್ಛತಾ ಕಾರ್ಯದಲ್ಲಿ ನೆರವಾದರು. ಬೆಳಗ್ಗೆಯಿಂದ ಮಧ್ಯಾಹ್ನದವರೆವಿಗೂ ಸ್ವಚ್ಛತಾ ಕಾರ್ಯ ನಡೆಸಲಾಯಿತು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಜಿಲ್ಲಾ ಪರಿಸರ ಅಧಿಕಾರಿ ಕೆ.ಎಲ್.ಸವಿತಾ, ನಗರಸಭಾ ಆಯುಕ್ತ ನಂಜುಂಡಸ್ವಾಮಿ, ನಗರಸಭೆ ಪರಿಸರ ಅಧಿಕಾರಿ ಮೈತ್ರಾದೇವಿ, ಡಾ.ಸಬ್‌ಕಿ ನುಬಿಯಾ, ನೆಸ್ಲೆ ಕಾರ್ಖಾನೆ ವ್ಯವಸ್ಥಾಪಕ ಶ್ರೀನಿವಾಸ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ಮುಖಂಡರಾದ ದೊರೆಸ್ವಾಮಿ ನಾಯಕ, ನಾಗರಾಜು, ನಗರಸಭಾ ಸದಸ್ಯರು ಇದ್ದರು.

ಮಠಗಳಿಂದ ಸಮಾಜದ ಏಳಿಗೆ: ಶಾಸಕ ಅನಿಲ್



ಸರಗೂರು, ಜೂ.5– ಮಠ ಮಾನ್ಯಗಳು ಸಮಾಜದ ಏಳಿಗೆಗೆ ದುಡಿಯುತ್ತಿದ್ದು, ಅವುಗಳ ಇತಿಹಾಸ ಅರಿತು ಉಳಿಸಿ, ಬೆಳೆಸೋಣ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಬಿಡಗಲು ಪಡುವಲು ಶ್ರೀವಿರಕ್ತ ಮಠದಲ್ಲಿ ನಡೆದ ಶ್ರೀಕಾಳ ಒಡೆಯ ಗುರುಗಳ ಗದ್ದಿಗೆ ಮತ್ತು ವೀರಭದ್ರೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ ಹಾಗೂ ಶಿವಾನುಭವ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಾಲೂಕಿನ ವೀರಶೈವ ಸಮಾಜ ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹೆಚ್ಚಿನ ಬೆಂಬಲ ನೀಡಿದೆ. ಜನರ ನಿರೀಕ್ಷೆ ಹುಸಿಗೊಳಿಸದೇ ಜನಸೇವಕನಾಗಿ ದುಡಿಯುತ್ತೇನೆ. 2016ರಿಂದಲೂ ಮಠದೊಂದಿಗೆ ಉತ್ತಮ ಸಂಬಂಧವಿದ್ದು, ಮಠದ ಅಭಿವೃದ್ಧಿಗೆ ಸರ್ಕಾರದಿಂದ ಸಿಗುವ ಅನುದಾನ ಕೊಡಿಸಲಾಗುವುದು. ಅಲ್ಲದೇ ವೈಯಕ್ತಿಕವಾಗಿಯೂ ಅನುದಾನ ನೀಡಲಾಗುವುದು. ಸರಗೂರು ತಾಲೂಕಿನ ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸುತ್ತೇನೆ. ಮತದಾರರು ಬಹಳಷ್ಟು ನಿರೀಕ್ಷೆಯನ್ನಿಟ್ಟುಕೊಂಡು 2ನೇ ಬಾರಿಗೆ ಶಾಸಕನಾಗಿ ಆಯ್ಕೆ ಮಾಡಿದ್ದಾರೆ. ಅದರಂತೆ ತಮ್ಮ ಸೇವೆ ಮಾಡುತ್ತೇನೆ. ಸರಗೂರಲ್ಲಿ ನೂತನ ಮಿನಿ ವಿಧಾನಸೌಧ ನಿರ್ಮಾಣ ಮಾಡಿ ಎಲ್ಲಾ ಇಲಾಖೆಗಳು ಕಾರ್ಯ ನಿರ್ವಹಿಸುವಂತೆ ಮಾಡಲಾಗುವುದು. ನಮ್ಮದೇ ಕಾಂಗ್ರೆಸ್ ಸರ್ಕಾರ ಇರುವ ಹಿನ್ನೆಲೆಯಲ್ಲಿ ಸರಗೂರಿನ ಅಭಿವೃದ್ಧಿಗೆ ಶ್ರಮಿಸಿ, ಮೂಲ ಸೌಕರ್ಯ ಒದಗಿಸುವುದಾಗಿ ತಿಳಿಸಿದರು.

ಸಮ್ಮೇಳನ ಉದ್ಘಾಟಿಸಿ ಶಾಸಕ ಗಣೇಶ್ ಪ್ರಸಾದ್ ಮಾತನಾಡಿ, ಬಸವ ತತ್ವ, ಸಿದ್ಧಾಂತಗಳನ್ನು ಅರಿತು ಜೀವನ ನಡೆಸಬೇಕು. ಎಲ್ಲರೂ ನಮ್ಮವರೇ ಎಂಬುದನ್ನು ಅರಿಯಬೇಕು. ಮಠ ಮಾನ್ಯಗಳಿಂದ ಜನರಿಗೆ ತುಂಬಾ ಅನುಕೂಲವಾಗಿದೆ. ಬಸವ ತತ್ವ ಪಾಲಿಸುವುದೆಂದರೆ ಎಲ್ಲಾ ಜನಾಂಗದ ಏಳಿಗೆಗೆ ಶ್ರಮಿಸುವುದು ಎಂದರು.

ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ಕೋಟೆಗೂ ನನ್ನ ತಂದೆ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರಿಗೂ ಬಹಳಷ್ಟು ನಂಟಿತ್ತು. ಕೋಟೆ ಕ್ಷೇತ್ರದ ಅಭಿವೃದ್ಧಿ ಕನಸು ಕಂಡಿದ್ದರು ಎಂದರು.

ಹಾಸನದ ತಣ್ಣೀರುಹಳ್ಳ ಮಠದ ವಿಜಯಕುಮಾರ ಸ್ವಾಮೀಜಿ ಸಾನ್ನಿಧ್ಯ ವಹಿಸಿ, ಉಪನ್ಯಾಸ ನೀಡಿದರು. ಮಠದ ಮಹದೇವ ಸ್ವಾಮೀಜಿ ಆಶೀರ್ವಚನ ನೀಡಿದರು. ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಪಡವಲು ಶ್ರೀವಿರಕ್ತ ಮಠದ ಸಮಸ್ತ ಭಕ್ತ ವೃಂದ ಹಾಜರಿದ್ದರು.

ಭಾರೀ ಗಾಳಿ ಮಳೆಗೆ ಅಪಾರ ನಷ್ಟ



ಹನಗೋಡು, ಜೂ.5– ಭಾರೀ ಗಾಳಿ ಮಳೆಗೆ ಅಪಾರ ನಷ್ಟ ಸಂಭವಿಸಿರುವ ಘಟನೆ ಹನಗೋಡು ಹೋಬಳಿಯಲ್ಲಿ ನಡೆದಿದೆ. ಹೋಬಳಿಯ ನೇಗತ್ತೂರು, ಶಿಂಡೇನಹಳ್ಳಿ, ಮುದಗನೂರು, ಚಿಕ್ಕಹೆಜ್ಜೂರು, ದೊಡ್ಡಹೆಜ್ಜೂರು, ಕೊಳವಿಗೆ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಭಾರೀ ಗಾಳಿ ಮಳೆ ಸುರಿದಿದ್ದು, ದೇವರಾಜು ಎಂಬುವರಿಗೆ ಸೇರಿದ ಮನೆ ಕುಸಿದು ಬಿದ್ದಿದೆ. ಅಲ್ಲದೇ ಚಿಕ್ಕಹೆಜ್ಜೂರಿನ ಜಯಮ್ಮ ಅವರ ಮನೆ ಮೇಲೆ ಮರ ಬಿದ್ದು ಹಾನಿಯಾಗಿದೆ. ಇನ್ನೂ ರಸ್ತೆ, ಜಮೀನುಗಳಲ್ಲಿ ಅಪಾರ ಪ್ರಮಾಣದ ನೀರು ಹರಿದು ನಾಟಿ ಮಾಡಿದ್ದ ಮುಸುಕಿನ ಜೋಳ, ತಂಬಾಕು, ಶುಂಠಿ ಸೇರಿದಂತೆ ಇತರೆ ಬೆಳೆಗಳು ಕೊಚ್ಚಿ ಹೋಗಿವೆ. ಶಿಂಡೇನಹಳ್ಳಿ ಸರ್ಕಾರಿ ಶಾಲಾವರಣದಲ್ಲಿ ಭಾರೀ ಪ್ರಮಾಣದ ನೀರು ನಿಂತು ಕೆರೆಯಂತಾಗಿದೆ. ಒಟ್ಟಾರೆ ಭಾರೀ ಗಾಳಿ ಮಳೆಗೆ ಮೂರ್‍ನಾಲ್ಕು ಮನೆಗಳಿಗೆ ಹಾನಿಯಾಗಿದ್ದು, ಅಪಾರ ಪ್ರಮಾಣದ ಬೆಳೆ ನಾಶವಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ.

ಕೋಡಿ ಬಿದ್ದ ಕೆರೆಗಳು: ಭಾರೀ ಮಳೆಗೆ ದೊಡ್ಡಹೆಜ್ಜೂರು, ಚಿಕ್ಕಹೆಜ್ಜೂರು, ಮುದಗನೂರು ಹೊಸಕೆರೆ ಸೇರಿದಂತೆ ಈ ಭಾಗದ ಎಲ್ಲಾ ಕೆರೆಗಳು ಕೋಡಿ ಬಿದ್ದಿವೆ. ಮಳೆಯಿಂದಾಗಿ ಸಾಕಷ್ಟು ಹಾನಿ ಸಂಭವಿಸಿ, ಲಕ್ಷಾಂತರ ರೂ. ನಷ್ಟ ಸಂಭವಿಸಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರದಿಂದ ಪರಿಹಾರ ಕೊಡಿಸಲು ಮುಂದಾಗಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

ತುರ್ತು ಸಂದರ್ಭ ಮಾಡುವ ರಕ್ತದಾನ ಜೀವದಾನಕ್ಕೆ ಸಮ

ಪರಿಸರ ದಿನಾಚರಣೆಯಲ್ಲಿ ಪುರಸಭಾ ಸದಸ್ಯ ಆರ್.ಅರ್ಜುನ್



ತಿ.ನರಸೀಪುರ ಜೂ.5– ಅನಾರೋಗ್ಯದ ತುರ್ತು ಸಂದರ್ಭ ರೋಗಿಯ ಜೀವ ಉಳಿಸಲು ಮಾಡುವ ರಕ್ತದಾನ ನಿಜಕ್ಕೂ ಜೀವದಾನಕ್ಕೆ ಸಮ ಎಂದು ಪುರಸಭೆ ಸದಸ್ಯ, ನಟ ಆರ್.ಅರ್ಜುನ್ ರಮೇಶ್ ಬಣ್ಣಿಸಿದರು.

ಪಟ್ಟಣದ ಡಾ.ಬಾಬು ಜಗಜೀವನರಾಂ ಸಮುದಾಯ ಭವನದಲ್ಲಿ ಸೋಮವಾರ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರದಲ್ಲಿ ಮಾತನಾಡಿದ ಅವರು, ದಿನಾಚರಣೆ ಹಾಗೂ ವಾರ್ಷಿಕೋತ್ಸವಗಳನ್ನು ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರವಾಗಿ ನಡೆಸಿದರೆ ಬದುಕು ನಿಜಕ್ಕೂ ಸಾರ್ಥಕವಾಗುತ್ತವೆ ಎಂದರು.

ಜೀವ ಸಂಕುಲಗಳ ಮೂಲವಾಗಿರುವ ಪರಿಸರ ದಿನಾಚರಣೆಯಂದೇ ರಕ್ತದಾನ ಶಿಬಿರ ನಡೆಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಇಂದು 25ಕ್ಕೂ ಹೆಚ್ಚು ಯುವಕರು ರಕ್ತದಾನ ಮಾಡಿ, ಮಾನವೀಯತೆ ಮೆರೆದಿದ್ದಾರೆ. ರಾಜಕೀಯ ಅಧಿಕಾರ ಇರಲೀ ಅಥವಾ ಇಲ್ಲದಿರಲೀ ನಟನಾಗಿ ಜನಸೇವೆ ಮುಂದುವರೆಸಿಕೊಂಡು ಹೋಗುತ್ತೇನೆ. ತಾಲೂಕಿನ ಜನರ ಆಶೀರ್ವಾದ ನನ್ನ ಮೇಲೆ ಇರಲಿ ಎಂದು ಮನವಿ ಮಾಡಿದರು.

ತಾಪಂ ಮಾಜಿ ಸದಸ್ಯ ಬಿ.ಎಲ್.ಮಹದೇವ ಮಾತನಾಡಿದರು. ಮಾಜಿ ಎಂಎಲ್‌ಸಿ ಸಿ.ರಮೇಶ್, ಮಿಲನ್ ರವಿಕಾ ಅರ್ಜುನ್, ತಾಲೂಕು ಡಾ.ಬಾಬು ಜಗಜೀವನ ರಾಂ ಸಂಘದ ಅಧ್ಯಕ್ಷ ಪುಟ್ಟಯ್ಯ, ಖಜಾಂಚಿ ಬಿ.ಎಲ್.ಮಹದೇವ, ಮುಖಂಡರಾದ ಕೇತಹಳ್ಳಿ ಲಿಂಗರಾಜು, ವಿಜಯಪುರ ನಿಂಗರಾಜು, ನಿಂಗಪ್ಪ, ಮಹದೇವ, ಲಯನ್ ಬ್ಲಡ್ ಸೆಂಟರ್ ಕ್ಯಾಂಪ್ ಅಡಿಟರ್ ಸುರೇಶ, ಡಾ.ಸುಷ್ಮಾ, ಸವಿತಾ, ಶಾರದ, ಸಂದೀಪ್, ಶಿವು, ಅನಿಲ್, ವಿಶ್ವ, ರಾಜಣ್ಣ, ನಂಜುಂಡಸ್ವಾಮಿ, ಆಲಗೂಡು ರಾಜು ಹಾಗೂ ಇನ್ನಿತರರಿದ್ದರು.

ಮಠಗಳಿಂದ ನಿರಂತರ ಅನ್ನ, ಶಿಕ್ಷಣ, ಜ್ಞಾನ ದಾಸೋಹ

ತುಮಕೂರಿನ ಸಿದ್ಧಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ

ಬೆಟ್ಟದಪುರ, ಜೂ.5– ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಬಹು ದೊಡ್ಡ ಸೇವೆಗಳನ್ನು ಒದಗಿಸಲು ಮಠಗಳು ಮುಂದಾಗಿದ್ದು, ಅದರಲ್ಲೂ ಅನ್ನ, ಶಿಕ್ಷಣ, ಜ್ಞಾನ ದಾಸೋಹ, ಇನ್ನಿತರ ಹತ್ತು ಹಲವು ಸೇವಾ ಕಾರ್ಯಗಳನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿವೆ ಎಂದು ತುಮಕೂರಿನ ಸಿದ್ಧಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಅಭಿಪ್ರಾಯಪಟ್ಟರು.

ಇಲ್ಲಿನ ಸಲೀಲಾಖ್ಯ ವಿರಕ್ತ ಮಠ ಮತ್ತು ಕನ್ನಡ ಮಠದ ಗಣಾರಾಧನಾ ಮಹೋತ್ಸವ, ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳ 95ನೇ ಗಣಾರಾಧನೆ, ಚನ್ನವೀರ ದೇಶಿಕೇಂದ್ರ ಸ್ವಾಮಿಗಳ 42ನೇ ಗಣಾರಾಧನೆ, ಕನ್ನಡ ಮಠದ 214ನೇ ಸ್ಥಾಪನಾ ವರ್ಷಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರ ಮಾಡಬೇಕಾದ ಕೆಲಸವನ್ನು ಮಠಮಾನ್ಯಗಳು ಮಾಡುತ್ತಿದೆ. ಹಿಂದಿನಿಂದಲೂ ಮಠಗಳು ಮಕ್ಕಳಿಗೆ ಆಶ್ರಯ ನೀಡಿ, ವಿದ್ಯೆ, ಅನ್ನ ದಾಸೋಹ ಸೇರಿದಂತೆ ಸಮಾಜದಲ್ಲಿ ಅನೇಕ ಸೇವಾ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿದ್ದು, ಈಗಲೂ ಆ ಕಾರ್ಯಗಳು ಮುಂದುವರೆದಿದೆ ಎಂದರು.

ಇಲ್ಲಿನ ಮಠದಲ್ಲಿ ಪ್ರತಿವರ್ಷ ಜೂ.5 ರಂದು ಕಾರ್ಯಕ್ರಮ ಆಯೋಜಿಸಿ ಹಿರಿಯ ಗುರುಗಳ ಸ್ಮರಿಸಲಾಗುವುದು.



ಸಿದ್ಧಗಂಗಾ ಮಠದ ಶಿವಕುಮಾರಸ್ವಾಮಿ ಅವರು ಈ ಕ್ಷೇತ್ರದಲ್ಲಿ ಧ್ಯಾನ ಮಾಡಿದ್ದು, ಭಕ್ತರ ಸೇವೆಗಾಗಿ ಈ ಮಠಕ್ಕೆ ಸಲೀಲಾಖ್ಯ ಎಂಬ ಹೆಸರು ನಾಮಾಂಕಿತವಾಗಿದೆ ಎಂದು ತಿಳಿಸಿದರು.

ಪ್ರಸ್ತುತ ಪರಿಸರ ರಕ್ಷಣೆ ಮಾಡದಿದ್ದರೇ ಮುಂದಿನ ದಿನಗಳಲ್ಲಿ ನೀರು, ಗಾಳಿ ವಿಷವಾಗಿ ಕಾಡುಹುದು. ಹೀಗಾಗಿ ಮುಂದಿನ ಪೀಳಿಗೆಗೆ ಪರಿಸರವನ್ನು ಉಳಿಸಿ ಕೊಡಬೇಕಿದೆ. ಈ ನಿಟ್ಟಿನಲ್ಲಿ ಮಠಗಳು ಜನರಲ್ಲಿ ಜಾಗೃತಿ ಮೂಡಿಸುತ್ತಿವೆ ಎಂದರು.

ಶಿವಮೊಗ್ಗ ಜಿಲ್ಲೆ ಕೊಪ್ಪದ ಗೌರಿಗದ್ದೆಯ ವಿನಯ್ ಗುರೂಜಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಜನರ ಪರಿವರ್ತನೆ ಮಠಗಳಿಂದ ಮಾತ್ರ ಸಾಧ್ಯ. ಲಿಂಗಧಾರಣೆ ಮಾಡಿದವರು ಯಾವುದೇ ತಪ್ಪು ಮಾಡಬಾರದು. ತಪ್ಪು ಮಾಡಿದರೆ ಶಿವನೇ ತಪ್ಪು ಮಾಡಿದಂತೆ ಶಿವಶರಣರು ಗ್ರಾಮದಲ್ಲಿದ್ದರೇ ಆ ಗ್ರಾಮ ಉದ್ಧಾರವಾಗುತ್ತದೆ ಎಂಬ ವಾಡಿಕೆ ಇದೆ. ಹಾಗೆಯೇ ಪಿರಿಯಾಪಟ್ಟಣವನ್ನು ಪ್ರೀತಿಯಪಟ್ಟಣ ಎಂದು ಹೆಸರು ಬದಲಾವಣೆ ಮಾಡಿಕೊಂಡರೇ ಇಲ್ಲಿನ ಜನರ ಪ್ರೀತಿ ವಿಶ್ವಾಸ ವಿಶ್ವಾಸಕ್ಕೆ ಅದು ಸಲ್ಲುತ್ತದೆ. ಕನ್ನಡ ಭಾಷೆ ಉಳಿಸಲು ಪ್ರಾರಂಭವಾದ ಈ ಕನ್ನಡ ಮಠವನ್ನು ಬೆಳೆಸಿ ಪ್ರೋತ್ಸಾಹಿಸುವುದು ನಮ್ಮೆಲ್ಲರ ಹೊಣೆ ಎಂದರು.

ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ, ಗವಿ ಮಠದ ಚಂದ್ರಶೇಖರ ಸ್ವಾಮೀಜಿ, ಚಾಮರಾಜನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠದ ಚನ್ನಬಸವ ಸ್ವಾಮೀಜಿ ಮಾತನಾಡಿದರು. ಇದೇ ವೇಳೆ ಕನ್ನಡ ಮಠದ ಮುಂದಿನ ಕಾರ್ಯ ಯೋಜನೆಗಳನ್ನು ಎಲ್‌ಇಡಿ ಪರದೆ ಮೂಲಕ ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಯಿತು. ಎಸ್‌ಸಿವಿಡಿಎಸ್ ವಿದ್ಯಾಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನಡೆಯಿತು. ಇದೇ ವೇಳೆ ಸಾಧಕರನ್ನು ಸನ್ಮಾನಿಸಲಾಯಿತು.

ಕನ್ನಡ ಮಠದ ಗಣಾರಾಧನಾ ಮಹೋತ್ಸವ ಅಂಗವಾಗಿ ಚಿಕ್ಕವೀರ ದೇಶಿಕೇಂದ್ರ ಸ್ವಾಮೀಜಿ ಹಾಗೂ ಚನ್ನವೀರ ದೇಶಿಕೇಂದ್ರ ಸ್ವಾಮೀಜಿ ಭಾವಚಿತ್ರವನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

> ಪರಿಸರ ಸಂರಕ್ಷಣೆಗೆ ಹೆಚ್ಚು ಒತ್ತು ನೀಡಲು ನಾವು ಮುಂದಾಗಿದ್ದೇವೆ. ಮಠದಿಂದ ಸಾವಯುವ ಕೃಷಿ ಬಗ್ಗೆ ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ. ಶೂನ್ಯ ಬಂಡವಾಳದಿಂದ ವ್ಯವಸಾಯ, ಯೋಗ ಶಿಬಿರ, ಮಕ್ಕಳಿಗೆ ಸಂಗೀತ ಜ್ಞಾನ ಇನ್ನು ಹಲವು ಯೋಜನೆಗಳನ್ನು ಮಠದಿಂದ ಕೈಗೊಳ್ಳಲಾಗುವುದು.
> – ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ಕನ್ನಡ ಮಠದ ಮಠಾಧೀಶ

ಕಾರ್ಯಕ್ರಮದಲ್ಲಿ ಗಾವಡಗೆರೆ ಮಠದ ನಟರಾಜ ಸ್ವಾಮೀಜಿ, ಮಾದಳ್ಳಿ ಮಠದ ಸಾಂಬ ಸದಾಶಿವಶ್ರೀ, ದಿಂಡ ಗಾಡು ಮಠದ ಅಪ್ಪಾಜಿ ಸ್ವಾಮೀಜಿ, ಹಾಸನದ ತಣ್ಣೀರು ಹಳ್ಳ ಮಠದ ಶ್ರೀವಿಜಯ ಕುಮಾರ ಸ್ವಾಮೀಜಿ, ಶನಿವಾರಸಂತೆ ಮನೆಹಳ್ಳಿ ಗುರುಸಿದ್ಧಲಿಂಗ ಸ್ವಾಮೀಜಿ, ವಿರಾಜಪೇಟೆಯ ಅಲಮೇರಿ ಮಠದ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಕೊಡ್ಲಿಪೇಟೆಯ ಕಲ್ಮಠದ ಸದಾಶಿವ ಸ್ವಾಮೀಜಿ, ತಾಲೂಕು ವೀರಶೈವ ಲಿಂಗಾಯತ ಯುವ ಘಟಕದ ಅಧ್ಯಕ್ಷ ಮಂಜುನಾಥ್ ಸೇರಿದಂತೆ ಇನ್ನಿತರರಿದ್ದರು. ಇದೇ ವೇಳೆ ಮಠದ ಭಕ್ತರಿಗೆ ಭೋಜನದ ವ್ಯವಸ್ಥೆ ಮಾಡಲಾಗಿತ್ತು.



ಹೆಚ್.ಡಿ.ಕೋಟೆ, ಸರಗೂರು ತಾಲೂಕು ಪತ್ರಕರ್ತರ ಸಂಘದಿಂದ ಸಂಘದ ಸದಸ್ಯರಿಗೆ ಗೃಹಬಳಕೆ ವಸ್ತುಗಳನ್ನು ನೀಡಲಾಯಿತು. ಈ ವೇಳೆ ಸಂಘದ ಉಪಾಧ್ಯಕ್ಷ ಮಂಜು ಕೋಟೆ, ಪ್ರಧಾನ ಕಾರ್ಯದರ್ಶಿ ಎಸ್.ಆರ್.ನಾಗರಾಮ, ಸಹ ಕಾರ್ಯದರ್ಶಿ ಮಂಜು ಬೀಚನಹಳ್ಳಿ, ಖಜಾಂಚಿ ದೊಡ್ಡಸಿದ್ದು, ನಿರ್ದೇಶಕರಾದ ಪುರುಷೋತ್ತಮ್, ಚಿಕ್ಕಣ್ಣಗೌಡ, ಮಹೇಶ, ನಾಗೇಶ, ಸುರೇಶ, ಸದಸ್ಯರಾದ ಹೆಚ್.ಬಿ.ಬಸವರಾಜು, ಎಂ.ಎಲ್.ರವಿಕುಮಾರ್, ರೇಣುಕಾ, ಶರವಣ, ವಾಸುಕಿ ನಾಗೇಶ್, ಪ್ರಮೋದ್, ಜಿ.ರವಿಕುಮಾರ್, ಜಶಿಲಾ, ಶ್ರೀನಿಧಿ, ಪುಟ್ಟರಾಜು, ರವಿಕುಮಾರ್ ಆರಾಧ್ಯ, ರಂಗರಾಜು, ದಾಸೇಗೌಡ ಹಾಜರಿದ್ದರು.

ತಮ್ಮನ ಮೇಲಿನ ದ್ವೇಷಕ್ಕೆ ಅಣ್ಣನ ಅಪಹರಿಸಿ ಹತ್ಯೆ

● ನಾಲ್ವರ ಬಂಧನ ● ನಾಪತ್ತೆ ಪ್ರಕರಣದ ಬೆನ್ನತ್ತಿದ ಮಂಡ್ಯ ಗ್ರಾಮಾಂತರ ಪೊಲೀಸರಿಂದ ಹತ್ಯೆ ಪ್ರಕರಣ ಬಯಲು

ಮಂಡ್ಯ, ಜೂ.5– ವ್ಯಕ್ತಿ ನಾಪತ್ತೆ ಪ್ರಕರಣದ ತನಿಖೆ ನಡೆಸಿದ ಮಂಡ್ಯ ಗ್ರಾಮಾಂತರ ಠಾಣೆ ಪೊಲೀಸರು, ತಮ್ಮನ ಮೇಲಿನ ದ್ವೇಷಕ್ಕೆ ಅಣ್ಣನನ್ನು ಅಪಹರಿಸಿ ಹತ್ಯೆ ಮಾಡಿ ದೇಹಕ್ಕೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ ಘಟನೆಯನ್ನು ಪತ್ತೆ ಹಚ್ಚಿದ್ದು, ನಾಲ್ವರನ್ನು ಬಂಧಿಸಿದ್ದಾರೆ.

ತಾಲೂಕಿನ ಬೇವಿನಹಳ್ಳಿ ಗ್ರಾಮದ ಭೀಮೇಶ್, ಆತನ ಸ್ನೇಹಿತರಾದ ಮಂಡ್ಯದ ಆನೆಕೆರೆ ಬೀದಿ ನಿವಾಸಿಗಳಾದ ಸುನೀಲ್, ವಿನಯ್ ಮತ್ತು ನಿರಂಜನ್ ಬಂಧಿತರು. ಮಂಡ್ಯದ ಬಟ್ಟೆ ಅಂಗಡಿಯೊಂದರ ನೌಕರನಾಗಿರುವ ಮಂಡ್ಯ ತಾಲೂಕು ಸಾತನೂರು ಗ್ರಾಮದ ವೆಂಕಟೇಶ್(33) ಹತ್ಯೆಗೀಡಾದವರು.

ವಿವರ: ಸಾತನೂರು ಗ್ರಾಮದ ವೆಂಕಟೇಶ್ ಮೇ 22ರಿಂದ ನಾಪತ್ತೆಯಾಗಿದ್ದಾರೆ ಎಂದು ಆತನ ತಾಯಿ ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಈ ಪ್ರಕರಣದ ತನಿಖೆ ಕೈಗೆತ್ತಿಕೊಂಡ ಸಬ್‌ಇನ್ಸ್‌ಪೆಕ್ಟರ್ ಕುಮಾರ್ ನೇತೃತ್ವದ ಪೊಲೀಸರ ತಂಡ ಹುಲಿಕೆರೆ ಅರಣ್ಯ ವ್ಯಾಪ್ತಿಯ ನಿರ್ಜನ ಪ್ರದೇಶದಲ್ಲಿ ಅರೆಬೆಂದ ಶವದ ಬಗ್ಗೆ ಪರಿಶೀಲಿಸಿದ ನಂತರ ಅದು ಸಾತನೂರು ವೆಂಕಟೇಶ್‌ನ ಶವ ಎಂದು ಗೊತ್ತಾಗಿದೆ. ಅದೇ ವೇಳೆ ಆತನನ್ನು ಹತ್ಯೆ ಮಾಡಿ ಗುರುತು ಸಿಗಬಾರದು ಎಂದು ದೇಹದ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿರುವುದು ಬೆಳಕಿಗೆ ಬಂದಿದೆ.

ವೆಂಕಟೇಶ್‌ನ ತಾಯಿ ತಮ್ಮ ಪುತ್ರನ ಮೃತದೇಹವನ್ನು ಗುರುತು ಪತ್ತೆ ಹಚ್ಚಿದ್ದಲ್ಲದೇ ತನ್ನ ಕಿರಿಯ ಮಗ ರಮೇಶ್ ಮತ್ತು ಬೇವಿನಹಳ್ಳಿ ಭೀಮೇಶ್ ನಡುವಿನ ಮನಸ್ತಾಪದ ಬಗ್ಗೆಯೂ ತಿಳಿಸಿದ್ದರು. ಆ ನಿಟ್ಟಿನಲ್ಲಿ ಪೊಲೀಸರು ತನಿಖೆಗೆ ಮುಂದಾದಾಗ ಭೀಮೇಶ್ ಮಂಡ್ಯದಿಂದ ಪರಾರಿಯಾಗಿರುವುದು ಗೊತ್ತಾಗಿದೆ. ಈ ಹಿನ್ನೆಲೆಯಲ್ಲಿ ಆತನ ಹುಡುಕಾಟಕ್ಕೆ ತೊಡಗಿದ ಪೊಲೀಸರು ಕೊನೆಗೂ ಭೀಮೇಶ್ ಮತ್ತು ಆತನ ಮೂವರು ಸ್ನೇಹಿತರನ್ನು ಬಂಧಿಸಿದ್ದಾರೆ. ರಮೇಶ್ ಮೇಲಿನ ದ್ವೇಷಕ್ಕಾಗಿ ಆತನ ಅಣ್ಣ ವೆಂಕಟೇಶ್‌ನನ್ನು ಭೀಮೇಶ್ ಮತ್ತು ಸ್ನೇಹಿತರು ಹತ್ಯೆ ಮಾಡಿರುವುದು ತನಿಖೆ ವೇಳೆ ಬೆಳಕಿಗೆ ಬಂದಿದೆ.

ಬೇವಿನಹಳ್ಳಿ ಭೀಮೇಶ್ ಮತ್ತು ಹತ್ಯೆಗೀಡಾದ ವೆಂಕಟೇಶ್ ತಮ್ಮ ರಮೇಶ್ ನಡುವೆ ಹಣಕಾಸು ವಿಚಾರದಲ್ಲಿ ಮನಸ್ತಾಪವಿತ್ತು ಎಂದು ಹೇಳಲಾಗಿದ್ದು, ಇವರಿಬ್ಬರೂ ಕೆಲ ತಿಂಗಳ ಹಿಂದೆ ಬೆಂಗಳೂರಿನಲ್ಲಿ ಹಣಕಾಸು ವಿಚಾರವಾಗಿ ಮಾತನಾಡುತ್ತಿದ್ದಾಗ ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಭೀಮೇಶ್ ಮೇಲೆ ರಮೇಶ್ ಹಲ್ಲೆ ನಡೆಸಿದ್ದ ಎಂದು ಹೇಳಲಾಗಿದೆ. ಈ ಸಂಬಂಧ ಬಸವೇಶ್ವರ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಅಲ್ಲಿನ ಪೊಲೀಸರು ರಮೇಶ್‌ನನ್ನು ಬಂಧಿಸಿದ್ದರು. ಆತ ಇತ್ತೀಚೆಗೆ ಜೈಲಿನಿಂದ ಜಾಮೀನಿನ ಮೇಲೆ ಬಿಡುಗಡೆಯಾಗಿ ಬಂದಿದ್ದ ಎಂದು ಹೇಳಲಾಗಿದೆ.

ಜೈಲಿನಿಂದ ಹೊರಬಂದ ರಮೇಶ್‌ನಿಂದ ತನಗೆ ಅಪಾಯವಾಗಬಹುದು ಎಂದು ಊಹಿಸಿದ ಭೀಮೇಶ್ ತನ್ನ ಸ್ನೇಹಿತರೊಡಗೂಡಿ ಮೇ 22ರಂದು ಮಧ್ಯರಾತ್ರಿ ಸಾತನೂರಿನ ರಮೇಶ್ ಮನೆಗೆ ಬಂದಿದ್ದ ಎಂದು ಹೇಳಲಾಗಿದೆ. ಆದರೆ ಆಗ ರಮೇಶ್ ಮನೆಯಲ್ಲಿರಲಿಲ್ಲ. ಹೀಗಾಗಿ ಆತನ ಅಣ್ಣ ವೆಂಕಟೇಶ್‌ನನ್ನು ಭೀಮೇಶ್ ಮತ್ತಿತರರು ಕರೆದೊಯ್ದಿದ್ದಾರೆ. ನಂತರ ಹುಲಿಕೆರೆ ಅರಣ್ಯ ವ್ಯಾಪ್ತಿಯ ನಿರ್ಜನ ಪ್ರದೇಶದಲ್ಲಿ ಆತನನ್ನು ಹತ್ಯೆ ಮಾಡಿ ದೇಹಕ್ಕೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ ನಂತರ ಎಲ್ಲಾ ಆರೋಪಿಗಳು ತಿರುಪತಿಗೆ ತೆರಳಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ಹಣಕಾಸು ವಿಚಾರದಲ್ಲಿ ರಮೇಶ್ ಮೇಲೆ ದ್ವೇಷ ಹೊಂದಿದ್ದ ಭೀಮೇಶ್, ರಮೇಶ್‌ನ ಸಹೋದರ ವೆಂಕಟೇಶ್‌ನನ್ನು ಹತ್ಯೆ ಮಾಡಿದ್ದು ಯಾಕೆ? ಈತನ ವಿರುದ್ಧವೂ ಕೂಡ ಆತನಿಗೆ ದ್ವೇಷವಿತ್ತೇ ಎಂಬುದು ಮತ್ತಷ್ಟು ವಿಚಾರಣೆಯಿಂದ ತಿಳಿಯಬೇಕಿದೆ.

ಮಂಡ್ಯ ಜಿಲ್ಲಾ ಎಸ್ಪಿ ಯತೀಶ್ ಮಾರ್ಗದರ್ಶನದಲ್ಲಿ ಮಂಡ್ಯ ಗ್ರಾಮಾಂತರ ಠಾಣೆ ಸಬ್‌ಇನ್ಸ್‌ಪೆಕ್ಟರ್ ಕುಮಾರ್, ಎಎಸ್‌ಐ ಚಿಕ್ಕಯ್ಯ, ಸಿಬ್ಬಂದಿಗಳಾದ ಜೀಶನ್, ರಾಜೇಂದ್ರ, ಪ್ರಸಾದ್, ಪ್ರವೀಣ್, ಈಶ್ವರ್ ಮತ್ತು ಸುರೇಶ್ ಕುಮಾರ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.



ವೆಂಕಟೇಶ್‌ನನ್ನು ಹತ್ಯೆಗೈದು ದೇಹಕ್ಕೆ ಬೆಂಕಿ ಹಚ್ಚಿದ ಸ್ಥಳವನ್ನು ಪೊಲೀಸರಿಗೆ ತೋರಿಸುತ್ತಿರುವ ಆರೋಪಿಗಳು.

ಐಐಎಸ್‌ಸಿ ಬೆಂಗಳೂರು, ಐಐಟಿ ಮದ್ರಾಸ್ ದೇಶದ ಅತ್ಯುತ್ತಮ ಶಿಕ್ಷಣ ಸಂಸ್ಥೆ

ನವದೆಹಲಿ: ಕರ್ನಾಟಕ ರಾಜಧಾನಿ ಬೆಂಗಳೂರಿನಲ್ಲಿರುವ ಐಐಎಸ್‌ಸಿ ಮತ್ತು ತಮಿಳುನಾಡಿನ ಐಐಟಿ ಮದ್ರಾಸ್ ಶಿಕ್ಷಣ ಸಂಸ್ಥೆಗಳು ದೇಶದ ಅತ್ಯುತ್ತಮ ಶಿಕ್ಷಣ ಸಂಸ್ಥೆಗಳು ಎಂದು ವರದಿಯೊಂದು ಹೇಳಿದೆ.

ರಾಷ್ಟ್ರೀಯ ಸಾಂಸ್ಥಿಕ ರ್‍ಯಾಂಕಿಂಗ್ ಫ್ರೇಮ್‌ವರ್ಕ್ (NIRF) ಈ ಬಗ್ಗೆ ವರದಿ ನೀಡಿದ್ದು, ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಐಐಟಿ ದೇಶದ ಅತ್ಯುತ್ತಮ ಶಿಕ್ಷಣ ಸಂಸ್ಥೆಗಳು ಎಂದು ಘೋಷಿಸಿದೆ.

ಕೇಂದ್ರ ಶಿಕ್ಷಣ ಸಚಿವಾಲಯವು ಬಿಡುಗಡೆ ಮಾಡಿದ ರ್‍ಯಾಂಕಿಂಗ್ ಪಟ್ಟಿಯಲ್ಲಿ ಐಐಎಸ್‌ಸಿ ತನ್ನ ಅಗ್ರ ಪಟ್ಟ ಕಾಯ್ದುಕೊಂಡಿದೆ. ನಂತರದ ಸ್ಥಾನದಲ್ಲಿ ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ ಹಾಗೂ ಜಾಮಿಯಾ ಮಿಲಿಯಾ ಇಸ್ಲಾಮಿಯಾ ಪಡೆದಿದ್ದಾರೆ.

ಕೊಲ್ಕತ್ತಾದ ಜಾಧವಪುರ ವಿಶ್ವವಿದ್ಯಾಲಯ, ವಾರಣಾಸಿಯ ಬನಾರಸ್ ಹಿಂದು ವಿಶ್ವವಿದ್ಯಾಲಯ, ಮಣಿಪಾಲದ ಮಣಿಪಾಲ ಉನ್ನತ ಶಿಕ್ಷಣ ಅಕಾಡೆಮಿ, ಕೊಯಂಬತ್ತೂರಿನ ಅಮೃತಾ ವಿಶ್ವ ವಿದ್ಯಾಪೀಠಂ, ವೆಲ್ಲೂರಿನ ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಅಲಿಘಡದ ಅಲಿಘಡ ಮುಸ್ಲಿಂ ವಿಶ್ವವಿದ್ಯಾಲಯ, ಹೈದರಾಬಾದ್‌ನ ಯೂನಿವರ್ಸಿಟಿ ಆಫ್ ಹೈದರಾಬಾದ್ ಕ್ರಮವಾಗಿ ನಂತರದ ಸ್ಥಾನಗಳನ್ನು ಪಡೆದುಕೊಂಡಿವೆ.

ಉಳಿದಂತೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಮದ್ರಾಸ್ ಈ ವರ್ಷದ ಒಟ್ಟಾರೆ ವಿಭಾಗದ ಅಡಿಯಲ್ಲಿ ಅತ್ಯುತ್ತಮ ಶಿಕ್ಷಣ ಸಂಸ್ಥೆಯಾಗಿದ್ದು, ನಂತರದ ಸ್ಥಾನದಲ್ಲಿ ಐಐಎಸ್‌ಸಿ ಬೆಂಗಳೂರು ಮತ್ತು ಐಐಟಿ–ದೆಹಲಿ ಇದೆ. ನಾಲ್ಕು ಮತ್ತು ಐದನೇ ಸ್ಥಾನವನ್ನು ಕ್ರಮವಾಗಿ ಐಐಟಿ ಬಾಂಬೆ ಮತ್ತು ಐಐಟಿ ಕಾನ್ಪುರ ಪಡೆದುಕೊಂಡಿವೆ.

ಡಾ. ರಾಧಾಕೃಷ್ಣನ್ ಸಮಿತಿಯನ್ನು ಶಿಕ್ಷಣ ಸಚಿವಾಲಯವು ಮೌಲ್ಯಮಾಪನದ ಮಾನ್ಯತೆ ನಿಯತಾಂಕಗಳನ್ನು ಪರಿಶೀಲಿಸಲು ಸ್ಥಾಪಿಸಿತ್ತು. ಎಲ್ಲಾ ಶಿಕ್ಷಣ ಸಂಸ್ಥೆಗಳ ಡೇಟಾ ಬೆರಳ ತುದಿಯಲ್ಲಿ ಲಭ್ಯವಿರುತ್ತದೆ. ಒಂದು ರಾಷ್ಟ್ರ ಒಂದು ದತ್ತಾಂಶ ನಡೆಯುತ್ತಿದೆ ಎಂದು ನ್ಯಾಷನಲ್ ಅಸೆಸ್‌ಮೆಂಟ್ ಅಂಡ್ ಅಕ್ರೆಡಿಟೇಶನ್ ಕೌನ್ಸಿಲ್ ಎಜುಕೇಶನಲ್ (NAAC)ನ ಅಧ್ಯಕ್ಷರಾದ ಅನಿಲ್ ಸಹಸ್ರಬುದ್ಧೆ ಹೇಳಿದ್ದಾರೆ.





ಕ್ಷುಲ್ಲಕ ಕಾರಣಕ್ಕೆ ಯುವಕನಿಗೆ ಇರಿತ: ನಾಲ್ವರ ಬಂಧನ

ನಂಜನಗೂಡು, ಜೂ.5– ಕ್ಷುಲ್ಲಕ ಕಾರಣಕ್ಕಾಗಿ 2 ಗುಂಪಿನ ನಡುವೆ ಘರ್ಷಣೆ ಉಂಟಾಗಿ ಯುವಕನಿಗೆ ಚಾಕುವಿನಿಂದ ಇರಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದ್ದು ಪೊಲೀಸರು ನಾಲ್ವರನ್ನು ಬಂಧಿಸಿದ್ದಾರೆ.

ನೀಲಕಂಠನಗರ ಬಡಾವಣೆಯ ಇಲ್ಲು, ಶೋಯಿಬ್, ಸಲ್ಮಾನ, ಜಾಫರ್ ಬಂಧಿತರಾಗಿದ್ದು, ಸಾಯಿನ್ನಾ ಎಂಬಾತನಿಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ಭಾನುವಾರ ರಾತ್ರಿ ಹುಟ್ಟುಹಬ್ಬ ಆಚರಣೆ ವೇಳೆ ಕ್ಷುಲ್ಲಕ ವಿಚಾರಕ್ಕೆ ಒಂದು ಗುಂಪಿನ ಯುವಕರು ಇನ್ನೊಂದು ಗುಂಪಿನ ಯುವಕರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದರು. ಘಟನೆಯಲ್ಲಿ ಪ್ರಸಾದ್ ಎಂಬ ಯುವಕನಿಗೆ ಡ್ರ್ಯಾಗರ್‌ನಿಂದ ಇರಿದ ಪರಿಣಾಮ ಗಂಭೀರವಾಗಿ ಗಾಯಗೊಂಡು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಲಾಗಿತ್ತು. ಈ ಸಂಬಂಧ ಐವರ ಮೇಲೆ ಪ್ರಕರಣ ದಾಖಲು ಮಾಡಿಕೊಂಡು ನಾಲ್ವರನ್ನು ಬಂಧನಕ್ಕೆ ಒಳಪಡಿಸಲಾಗಿದೆ.

ಸ್ಥಳದಲ್ಲಿ ಸಶಸ್ತ್ರ ಮೀಸಲು ಪಡೆ ಪೊಲೀಸರು ಬೀಡುಬಿಟ್ಟಿದ್ದು ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಈ ಸಂಬಂಧ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.



ಮೈಸೂರು ರಿಂಗ್ ರಸ್ತೆ ಗ್ರೇಡ್ ಸೆಪರೇಟರ್ ಸೇರಿ ಹಲವು ಕಾಮಗಾರಿ ಸಂಬಂಧ

ಹೆದ್ದಾರಿ ಪ್ರಾಧಿಕಾರದ ಚೀಫ್ ಇಂಜಿನಿಯರ್ ಜೊತೆ ಸಂಸದ ಪ್ರತಾಪ್ ಸಿಂಹ ಚರ್ಚೆ



ಮೈಸೂರು, ಜೂ.5(ಎಂಕೆ)– ಮೈಸೂರಿನ ರಿಂಗ್ ರಸ್ತೆಯಲ್ಲಿ ಗ್ರೇಡ್ ಸೆಪರೇಟರ್‌ಗಳ ನಿರ್ಮಾಣ, ಹುಣಸೂರು ಬೈಪಾಸ್ ಅಗಲೀಕರಣ ಹಾಗೂ ಮಡಿಕೇರಿ–ಸಂಪಾಜೆ ಮಾರ್ಗದ ನಡುವೆ ತಡೆಗೋಡೆಗಳ ನಿರ್ಮಾಣ ಸಂಬಂಧ ಸಂಸದ ಪ್ರತಾಪ್ ಸಿಂಹ, ಸೋಮವಾರ ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಚೀಫ್ ಇಂಜಿನಿಯರ್ ನರೇಂದ್ರ ಶರ್ಮ ಅವರೊಂದಿಗೆ ಚರ್ಚಿಸಿದರು.

ಮೈಸೂರು ರಿಂಗ್ ರಸ್ತೆಯಲ್ಲಿ 4 ಗ್ರೇಡ್ ಸೆಪರೇಟರ್‌ಗಳ ನಿರ್ಮಾಣ, ಹುಣಸೂರು ಬೈಪಾಸ್ ಅನ್ನು 4 ಪಥವಾಗಿಸುವುದು, ಮಡಿಕೇರಿ ಮತ್ತು ಸಂಪಾಜೆ ಮಾರ್ಗದ ನಡುವೆ 21 ತಡೆಗೋಡೆಗಳ ನಿರ್ಮಾಣ ಕುರಿತು ಸಂಕ್ಷಿಪ್ತ ಮಾಹಿತಿ ಪಡೆದರು. ಈ ವೇಳೆ ತ್ವರಿತಗತಿಯಲ್ಲಿ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ, ಜುಲೈ ತಿಂಗಳ ಮೊದಲ ವಾರದಲ್ಲಿ ಕಾಮಗಾರಿಗಳನ್ನು ಆರಂಭಿಸಬೇಕು ಎಂದು ತೀರ್ಮಾನಿಸಲಾಯಿತು.

ಸಾರಿಗೆ ಇಲಾಖೆಯ ನಾಲ್ಕು ನಿಗಮಗಳ ಅಧ್ಯಕ್ಷರಾಗಿ ರಾಮಲಿಂಗಾರೆಡ್ಡಿ ನೇಮಕ

ಬೆಂಗಳೂರು: ಸಾರಿಗೆ ಇಲಾಖೆಯ ನಾಲ್ಕು ನಿಗಮಗಳ ಅಧ್ಯಕ್ಷರಾಗಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ.



ತಕ್ಷಣದಿಂದ ಜಾರಿಗೆ ಬರುವಂತೆ ಬಿಎಂಟಿಸಿ, ಕೆಎಸ್‌ಆರ್‌ಟಿಸಿ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯ ಅಧ್ಯಕ್ಷರಾಗಿ ರಾಮಲಿಂಗಾರೆಡ್ಡಿ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.

ಸಾಮಾನ್ಯವಾಗಿ ಸಾರಿಗೆ ಇಲಾಖೆಯ ನಾಲ್ಕು ನಿಗಮಗಳಿಗೆ ಪ್ರತ್ಯೇಕ ವ್ಯಕ್ತಿಗಳನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುತ್ತಿತ್ತು. ಆದರೆ ಈ ಬಾರಿ ಒಬ್ಬರಿಗೆ ನಾಲ್ಕು ನಿಗಮದ ಸಾರಥ್ಯ ನೀಡಲಾಗಿದೆ.

ಈ ಮಧ್ಯೆ, ಗೋಹತ್ಯೆ ನಿಷೇಧ ಕಾಯ್ದೆ ರದ್ದು ಮಾಡಲು ಕಾಂಗ್ರೆಸ್ ಸರ್ಕಾರ ಚಿಂತನೆ ನಡೆಸಿದೆ ಎಂಬ ವಿಚಾರವಾಗಿ ಪ್ರತಿಕ್ರಿಯಿಸಿದ ರಾಮಲಿಂಗಾರೆಡ್ಡಿ, ಪ್ರಾಣಿಗಳನ್ನು ಕೊಲ್ಲಬಾರದು. ನಾನು ಪ್ರಾಣಿಹತ್ಯೆ ನಿಷೇಧದ ಪರ. ಆದರೆ ಸಂಪುಟದಲ್ಲಿ ಈ ಬಗ್ಗೆ ಏನೂ ಹೇಳುವುದಿಲ್ಲ ಎಂದು ಹೇಳಿದ್ದಾರೆ.